The motion wâs adopted and the Bill was passed.

Karnata State Zilla Parishatka Taluk Panchayat Samithi Mandal Panchayet and Nyaya Panchayat Bill 1983—as requred by joint Select Commitee.

Mr. Deputy Speaker.—Now further discussion on Karnataka State Zilla Parishat, Taluk Panchayat Samithi, Mandal Panchayat and Nyaya Panchayat Bill 1983 as reported by the Joint Select Committee. Sri K.H. Ranganath to continue his speech.

ಶ್ರೀ ಕೆ.ಹೆಚ್. ರಂಗನಾಥ್ (ಹಿರಿಯೂರು).—ಮಾನ್ಯ ಉಪಾಧ್ಯಕ್ಷರೇ, ನಾನು ನಿನ್ನೆಯ ದಿವಸ ಮಾನ್ಯ ಮಂತ್ರಿಯವರಿಗೆ ಅವರ ಈ ಒಂದು ಸದುದ್ದೇಶಕ್ಕಾಗಿ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತಾ, ಯಾರು ಸಾಧಾರಣ ಜನ ಇದ್ದಾರೆ, ಆ ಸಾಧಾರಣ ಜನರ ಬಗ್ಗೆ ಮಾತನಾಡುತ್ತಾ ಅವರಿಗೆ ಅಧಿಕಾರ ಕೊಡಬೇಕು, ಅವರಲ್ಲಿ ಅಧಿಕಾರ ಇರಬೇಕು, ಆಡಳಿತದಲ್ಲಿಅವರು ಬಹುಮುಖವಾದ ಪಾತ್ರ ವಹಿಸಬೇಕು, ಅಧಿಕಾರಶಾಹಿಗಳ ಹಿಡಿತದಿಂದ ದೂರವಾಗಿ ಅವರು ತಮ್ಮ ಗ್ರಾಮರಾಜ್ಯ ಮಾಡಿಕೊಳ್ಳುವುದಕ್ಕೆ ಅನುಕೂಲ ಆಗಬೇಕು ಎಂಬ ಅವರ ಉದ್ದೇಶ ಏನು ಇದೆ, ಆ ಉದ್ದೇಶ ಸಾಧಾರಣ ಜನರಿಗೆ ದೊರಕುತ್ತದೆಯೇ, ಅವರಿಂದ ಇದು ಸಾಧ್ಯವೇ, ಮತ್ತೆ ಈ ಸಂಸ್ಥೆಗಳ ಮುಖಾಂತರ ಕೈಗೊಳ್ಳತಕ್ಕಂಥ ಯೋಜನೆಗೆ ಸಂಬಂಧಪಟ್ಟ ಮತ್ತು ಬೇರೆ ಬೇರೆ ಕಾಮಗಾರಿಗಳಿಗೆ ಸಂಬಂಧಪಟ್ಟ ಹಣ ಕಾನೂನುಬದ್ಧವಾಗಿ ಒದಗಿಸಿರತಕ್ಕಂಥ ಹಣ, ಅವರಿಗೆ ತಲುಪಲಿಕ್ಕೆ ಸಾಧ್ಯವೇ ಎಂಬ ಮಾತನ್ನೂ ಕೂಡ ಪರೋಕ್ಷವಾಗಿ ನಾನು ಪ್ರಸ್ತಾಪ ಮಾಡುತ್ತಿದ್ದೆ. ಹಾಗೆ ಮಾತನಾಡುವಾಗ ಸಮಾಜದ ಬಗ್ಗೆ ಒಂದೆರಡು ಮಾತುಗಳನ್ನೂ ಕೂಡಾ ಹೇಳಿದ್ದುದು ಏತಕ್ಕೆಂದರೆ, ಈ ಬಿಲ್ಲು ಬಹಳ ಪ್ರಮುಖವಾಗಿರತಕ್ಕಂಥ ಬಿಲ್ಲು. ಈ ಒಂದ ಮಾತನ್ನು ಮಂತ್ರಿಗಳೂ ಕೂಡಾ ಒಪ್ಪಿಕೊಂಡಿದ್ದಾರೆ. ವ್ಯಕ್ತಿ ಏನಿದ್ದಾನೆ ಅವನು ವಿಕಾಸವಾಗುವುದಕೆ ಇದು ಸಹಾಯಕವಾಗುತ್ತದೆ,ಬೆಳೆಯುವುದಕ್ಕೆ ಸಹಾಯಕವಾಗುತ್ತದೆ. ಪ್ರಜಾಪ್ರಭುತ್ವದ ಮೂಲ ತತ್ವದಲ್ಲಿ ಅವನು ಸಕ್ರಿಯಪಾತ್ರ ವಹಿಸುವುದಕ್ಕೆ ಅನುಕೂಲ ಆಗತಕ್ಕಂಥ ಕಾನೂನು ಇದ್ದು ಬೇರೆ ಕಾನೂನಿನ್ನ ತರಹ ಅಲ್ಲ ಎಂದು ಸನ್ಮಾನ್ಯ ಸದಸ್ಯರೆಲ್ಲರೂ ಒಪ್ಪುತ್ತಾರೆಂದು ನಾನಾದರೂ ಕೂಡಾ ಭಾವಿಸುತ್ತೇನೆ. ಈ ದೃಷ್ಟಿಯಿಂದ ಪ್ರಸ್ತಾಪ ಮಾಡುವಾಗ ನಾಲ್ಕು ಸಂಸ್ಥೆಗಳನ್ನು ಈ ಕಾನೂನಿನಲ್ಲಿ ಅವರು ಸೇರಿಸಿದ್ದಾರೆ. ಒಂದು ಗ್ರಾಮ ಮಂಡಲ್ ಪಂಚಾಯತ್ ಸಮಿತಿ, ಹೊಸದಾಗಿ ಜಂಟಿ ಸಮಿತಿಯವರು ತಾಲ್ಲೂಕು ಪಂಚಾಯತ್ ಸಮಿತಿಯನ್ನು ಪ್ರಸ್ತಾಪ ಮಾಡಿದ್ದಾರೆ. ನ್ಯಾಯ ಪಂಚಾಯತ್ ತದನಂತರ ಜಿಲ್ಲಾ ಪರಿಷತ್ತು. ಮಂಡಲ್ ಪಂಚಾಯತ್ ಹಾಗೂ ಜಿಲ್ಲಾ ಪರಿಷತ್ತಿಗೆ ಹೆಚ್ಚು ಒತ್ತನ್ನು ಕೊಟ್ಟಿದ್ದಾರೆ.

ನ್ಯಾಯ ಪಂಚಾಯತ್‌ಗೂ ಕೂಡಾ ಒತ್ತನ್ನು ಕೊಡುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಆದರೂ ಬಹಳ ಮಟ್ಟಿಗೆ ಜಂಟಿ ಸಮಿತಿಯಲ್ಲಿ ಏನು ವಿಚಾರ ಬಂದಿದೆಯೋ ಗೊತ್ತಿಲ್ಲ. ಇದರ ಬಗ್ಗೆ ಏನಾಗಿದೆ ಎಂದರೆ, ಯಾವಾಗ ಜಿಲ್ಲಾ ಪರಿಷತ್ತಿನವರು ಒಪ್ಪುತ್ತಾರೆ, ಆಗ ನ್ಯಾಯ ಪಂಚಾಯತ್‌ನ್ನು ಮಾಡಬೇಕು ಎಂಬ ಮಾತನ್ನು ಹೇಳಿದ್ದಾನೆ. ಇನ್ನೊಂದು ಪ್ರಮುಖವಾದ ವಿಚಾರ ಇದರಲ್ಲಿರತಕ್ಕದ್ದು ಎಂದರೆ, ಫೈನಾನ್ಶಿಯಲ್ ಕಮಿಟಿ ಮಾಡತಕ್ಕ ವಿಚಾರ ಪ್ರಸ್ತಾಪ ಮಾಡಿದ್ದಾರೆ. ಕೇಂದ್ರ, ರಾಜ್ಯಗಳಲ್ಲಿ ಹೇಗೆ ಹಣಕಾಸಿನ ವ್ಯವಹಾರ ವಿತರಣೆ ವ್ಯವಹಾರ ಇದೆ, ಅದನ್ನು ಗ್ರಾಮಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಇರತಕ್ಕಂಥ ಸಂಸೆ ಗಳು ಏನಿವೆ, ಅದರ ಬಗ್ಗೆ ಇದೇ ರೀತಿಯ ವ್ಯವಸ್ಥೆ ಮಾಡುವುದಕ್ಕೆ ಫೈನಾನ್ಸ್ ಕಮಿಟಿ ಮಾಡಿದ್ದಾರೆ. ಅದನ್ನು ಮಾಡುವಾಗ ಬಹಳ ಮಟ್ಟಿಗೆ ಗ್ರಾಮ ಹಾಗೂ ಮಂಡಲ್ ಪಂಚಾಯತ್‌ಗಳಿಗೆ, ತನ್ನದೇ ಆದ ಹಣವನ್ನು ಇಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಮಂಡಲ್ ಪಂಚಾಯತ್ ಫಂಡ್ ಎಂದು ಕರೆಯುವುದರಿಂದ ಜಿಲ್ಲಾ ಪರಿಷತ್ತಿನ ಹಣವನ್ನು ಜಿಲ್ಲಾ ಪರಿಷತ್ ಫಂಡ್ ಎಂದು ಕರೆಯುವುದರಿಂದ ಯಾವ ಯಾವ ಮೂಲಕಗಳಿಂದ ಫಂಡ್. ಶೇಖರಣೆ ಮಾಡುತ್ತಾರೆ ಎನ್ನುವಾಗ ಅದರಲ್ಲಿ ಏನು ಪ್ರಸ್ತಾಪ ಮಾಡಿದ್ದಾರೆ, ನಾನು ಅದನ್ನು ಕಲಮ್‌ಗಳ ಬಗ್ಗೆ ಪ್ರಸ್ತಾಪ ಮಾಡುವಾಗ ಮಾಡುತ್ತೇನೆ. ಅದನ್ನು ಶೇಖರಣೆ ಮಾಡುವುದಕ್ಕೆ ಸಹಕಾರಿಯಾಗುವ ರೀತಿಯಲ್ಲಿ ಸರಕಾರ ಸಲಹೆ ಕೊಡುವುದಕ್ಕೆ, ಮೂರು ಜನ ಸದಸ್ಯರ ಸಮಿತಿಯನ್ನು ಫೈನಾನ್ಸ್ ಕಮಿಟಿಯನ್ನು ಮಾಡಿದ್ದಾರೆ. ಇದನ್ನು ಕಲಮ್ 210ರಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದು ಒಂದು ಒಳ್ಳೆಯ ಅಭಿಪ್ರಾಯ. ಏತಕ್ಕೆಂದರೆ ಈ ಸಂಸ್ಥೆಗಳು ಇವೊತ್ತು ಏನೂ ಇಲ್ಲದೆ, ಹೇಗೆ ನಡೆಯುತ್ತಿವೆ ಎಂದರೆ, ಸರ್ಕಾರಕ್ಕೆ ದಿನನಿತ್ಯ ತಾಲ್ಲೂಕು ಅಭಿವೃದ್ಧಿ ಮಂಡಲಿಯವರಾಗಲೀ, ಜಿಲ್ಲಾ ಅಭಿವೃದ್ಧಿ ಮಂಡಲಿಯವರಾಗಲೀ ಗ್ರಾಮ ಪಂಚಾಯತಿಯವರಾಗಲೀ, ಅದಕ್ಕೂ, ಹೆಚ್ಚಾಗಿ ನಗರಸಭೆಗಳು ಪ್ರತಿದಿನ ಸರ್ಕಾರದ ಹತ್ತಿರ ಬಂದು ಇದಕ್ಕೆ ಹಣ ಬೇಕು, ಇದಕ್ಕೆ ಗ್ರ್ಯಾಂಟ್ ಬೇಕು ಎಂದು ಕೇಳತಕ್ಕ ಪರಿಸ್ಥಿತಿ, ಪರಿಪಾಠ ಇದೆ. ಇದು

ಆಗಕೂಡದು. ವ್ಯವಸ್ಥಿತವಾಗಿ ಅವು ಇರಬೇಕು ಎನ್ನುವುದಕ್ಕೆ ಒಂದು ವ್ಯವಸ್ಥೆ ಮಾಡಿದ್ದಾರೆ. ಅದಕ್ಕೆ ಪೂರಕವಾಗಿ ಜಿಲ್ಲಾ ಪರಿಷತ್ತುಗಳು ತಮ್ಮ ಹಣಕಾಸಿನ ಬಜೆಟ್ಟನ್ನು ಆಯ ವ್ಯಯವನ್ನು ವ್ಯವಸ್ಥೆಗೊಳಿಸತಕ್ಕ ಒಂದು ಕಲಮ್ ಇದೆ.

2-30 p. m.

ನವೆಂಬರ್ ತಿಂಗಳಿಂದ ಜನವರಿ ತಿಂಗಳೊಳಗೆ ಅದನ್ನು ತಯಾರು ಮಾಡಿಕೊಳ್ಳಬೇಕಾಗುತ್ತದೆ. ಹಾಗೂ ಮಾರ್ಚಿ ಅಂತ್ಯದೊಳಗೆ ಆಯವ್ಯಯ ವ್ಯವಸ್ಥೆ ಮಾಡಿಕೊಳ್ಳ ಬೇಕಾಗುತ್ತದೆ. ತದನಂತರ ಹೊಸದಾಗಿ ಬರತಕ್ಕದ್ದು ಇದೆ, ಇದನ್ನು ಮಾಡಿಕೊಳ್ಳುವಾಗ ಅವರಿಗೆ ಎಷ್ಟು ಹಣ ಬರುತ್ತದೆ ಎಂಬುದನ್ನು ಅಂದಾಜು ಮಾಡಿಕೊಳ್ಳುವುದಕ್ಕೆ ಸಹಾಯವಾಗುವ ರೀತಿಯಲ್ಲಿ ಕ್ಲಾಸ್ 210ರಲ್ಲಿ ಫೆನಾನ್ಸ್ ಕಮೀಷನ್ ಮಾಡಿದ್ದೀರಿ. ಇದು ಶಾಸ್ತ್ರೀಯವಾದ ವ್ಯವಸ್ಥೆಯಾಗಿದೆ. ಈ ಬಗ್ಗೆ ನಾನು ಕಳಕಳಿಯನ್ನು ವ್ಯಕ್ತ ಮಾಡುವ ಸಮಯದಲ್ಲಿ ಸ್ವಲ್ಪ ನನ್ನದೇ ಆದ ಮಾತಿನಲ್ಲಿ, ನನಗೆ ಸಂಬಂಧಪಟ್ಟಹಾಗೆ ಹೇಳುವುದು ಉತ್ತಮ ಎಂದು ಕಾಣುತ್ತದೆ. ಇವೊತ್ತು ಸಮಾಜದಲ್ಲಿ ಎರಡು ವಿಚಾರಗಳು ಪ್ರಸ್ತಾಪವಾಗುತ್ತವೆ. ಒಂದನೆಯದು, ನಾವು ಏನೇ ಹೇಳಿದರೂ ಕೂಡ ರಾಜಕೀಯ ಪಕ್ಷಗಳು ಇಲ್ಲಿ ಕೆಲಸ ಮಾಡತಕ್ಕದ್ದು ಬಂದೇಬರುತ್ತದೆ. ಅದನ್ನು ಮಾಡಲೇಬೇಕಾಗುತ್ತದೆನ್ನುವ ಮಾತನ್ನು ಒಪ್ಪಬೇಕಾಗುತ್ತದೆ. ಹಾಗೂ ಈ ಬಗ್ಗೆ ನಾನು ಸೂಕ್ಷ್ಮವಾಗಿ ಮಾತನಾಡುತ್ತಾ ಹೇಳಿದೆ. ಇದರ ಬದಲಾವಣೆಗೆ ಕೂಡಾ ರಾಜಕೀಯವಾಗಿ ಗ್ರಾಮ ಮಟ್ಟದಿಂದ ರಾಷ್ಟ್ರ ಮಟ್ಟಕ್ಕೆ ಸಹಾಯವಾಗುವ ರೀತಿಯಲ್ಲಿ ನಮ್ಮ ಉದ್ದೇಶ ಏನು ಇದೆ ಎಂಬುದನ್ನು ಬಹಳಮಟ್ಟಿಗೆ ತಾವು ಉತ್ತರ ಕೊಡುವಾಗ ಹೇಳಬೇಕೆಂದು ಹೇಳಿದೆ. ನಿನ್ನೆ ಅದಕ್ಕೆ ಅವರು ತಲೆಯನ್ನು ಅಲ್ಲಾಡಿಸಿದ್ದರಿಂದ ಉದ್ದೇಶದಲ್ಲಿ ಅದೂ ಕೂಡಾ ಇವೆ ಎಂಬುದಾಗಿ ನಾನು ಭಾವಿಸುತ್ತೇನೆ. ಮತ್ತೊಂದು ವಿಷಯ ಇದು ಹೇಗೆ ಬಡವರಿಗೆ ಸಹಾಯಕವಾಗುತ್ತದೆ ಎಂಬುದು. ಬಡವರ ಕೈಗೆ ಅಧಿಕಾರ ಹೋಗುತ್ತದೆ ಎನ್ನುವ ಪ್ರಶ್ನೆ ಬಂದಾಗ ನಾನು ಕೆಲವು ಲೇಖನಗಳನ್ನು ಓದಿದೆ. ಹಾಗೂ ಈ ಬಗ್ಗೆ ಸ್ಯಾಂಪಲ್ ಸರ್ವೆ ಮಾಡಿರತಕ್ಕದ್ದು ಹಾಗೂ ಸೆಮಿನಾರ್‌ಗಳಲ್ಲಿ ಪ್ರಸ್ತಾಪ ಮಾಡಿರತಕ್ಕ ಬಗ್ಗೆ ಲೇಖನಗಳು ಇದ್ದು ಅದನ್ನು ನೋಡಿದ್ದೇನೆ. ಇವೊತ್ತು ಅವರುಗಳು ಏನು ಹೇಳತ್ತಾರೆ ಎಂಬುದನ್ನು ನೋಡಬೇಕಾಗುತ್ತದೆ. ಸಾಧಾರಣ ಮನುಷ್ಯ ಬಲಗೊಳ್ಳಬೇಕು ಎನ್ನುವ ಉದ್ದೇಶ ಸಫಲವಾಗದೇ ಇರುವುದನ್ನು ನಾನುಕಾಣುತ್ತಿದ್ದೇವೆಂಬುದನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಈ ದೃಷ್ಟಿಯಿಂದ ಮಾನ್ಯ ಸರ್ಕಾರ ಅಥವಾ ಮಾನ್ಯ ಮಂತ್ರಿಗಳು ಏನು ಸದುದ್ದೇಶದಿಂದ ಈ ಒಂದು ಕಾನೂನನ್ನು ತಂದಿದ್ದಾರೆ ಅವರು ಇವೊತ್ತು ಸಮಾಜದಲ್ಲಿ ಇರುವ ಬಹು ಭಾಗದ ಜನರ ಪರ್ ಕ್ಯಾಪಿಟಾ ಇನ್‌ಕಮ್‌ನ್ನು ನೋಡಬೇಕಾಗುತ್ತದೆ. ಆ ಅಂಕಿ ಅಂಶಗಳ ಸಮೇತ ಈ ವಿಚಾರವನ್ನು ನೋಡುವಾಗ ನಮ್ಮ ಮನಸ್ಸಿನಲ್ಲಿ ಬೇಸರ ಆಗುವುದನ್ನು ನಾವು ಕಾಣುತ್ತೇವೆ, ನಾನು ಮಾತನಾಡುವಾಗ ಒಂದು ಮಾತನ್ನು ಹೇಳಿದ್ದೆ. ಪ್ರಪ್ರಥಮವಾಗಿ ವಿಕೇಂದ್ರೀಕರಣವನ್ನು ತರುವ ಬಗ್ಗೆ ಸರ್ಕಾರ ಮಾತನಾಡಿದೆ, ಮಂತ್ರಿಗಳು ಈ ಬಗ್ಗೆ ಮಾತನಾಡಿದ್ದಾರೆ. ಇದರಲ್ಲಿ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಮಾತನಾಡುವಾಗಲೂ ಕೂಡಾ ಅಧಿಕಾರ ಕೇಂದ್ರೀಕೃತ ಆಗಿರುವುದನ್ನು ನಾವು ನೋಡುತ್ತಿದ್ದೇವೆ. ಇವೊತ್ತು ಮಾನ್ಯ ಮಂತ್ರಿಗಳ ಉದ್ದೇಶ ಏನೇ ಇರಬಹುದು; ಆದರೆ ಈ ಬಗ್ಗೆ ಕಾನೂನನ್ನು ಬರೆಯುವಾಗ ಉಪಯೋಗ ಮಾಡತಕ್ಕ ಯಂತ್ರ ಏನಿದೆ ಅದು ಒಂದೊಂದು ಸಾರಿ ಇದನ್ನು ಇಟ್ಟುಬಿಡುತ್ತದೆ. ಆಯಾಯ ಕಲಮ್‌ನಲ್ಲಿ ಇದನ್ನು ಇಟ್ಟುಬಿಡುತ್ತಾರೆ. ಇದನ್ನು ಇಟ್ಟಾಗ ನಾವು ಏನು ಒಂದು ಪ್ರಮಾಣಿಕ ಅಭಿಪ್ರಾಯವನ್ನು ಇಡುತ್ತೇವೆಯೋ ಅದು ಇಲ್ಲದೇ ಇದ್ದಾಗ ಏನಾಗುತ್ತದೆ ಎಂಬ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಸ್ವಾಮಿ, ಮಂಡಲ್ ಪಂಚಾಯತಿ ಬಗ್ಗೆ ತಾವು ಮಾತನಾಡತಕ್ಕ ಸಮಯದಲ್ಲಿ ಅದರ ಹಣಕಾಸಿನ ಬಗ್ಗೆ ತಾವು ಏನು ಹೇಳಿದ್ದೀರಿ ? ಪ್ರಾಪರ್ಟೀಸ್ ಮತ್ತು ಫೈನಾನ್ಸ್ ನಲ್ಲಿ ಈ ಬಗ್ಗೆ ತಾವು ಹೇಳಿದ್ದೀರಿ.

"(1) The following shall form part of, or be paid into the Mandal Panchayat fund namely :

(a) the amount which may be allotted to the Mandal Panchayat fund by the Government or by the Zilla Parishad under the provisions of this Act or any other Act" ಎನ್ನುವ ಮಾತನ್ನು ಹೇಳಿದ್ದೀರಿ. ಹಾಗೂ ಅದರ ಆಸ್ತಿ ಯಾವುದು ಎಂಬ ಬಗ್ಗೆ ಹೇಳಿದರು. Further it is stated thus :

"(2) Every work constructed by a Mandal Panchayat out of the Mandal Panchayat Fund shall vest in such Mandal Panchatyat

(3) All rubbish, sewage, filth and other matter collected by a Mandal Panchayat under this Act shall belong to it", ಇನ್ನು ಹಣ ಸಿಗದೇ ಹೋದರೆ ರಬಿಶ್‌ಗೂ ಹೋಗುವುದು ಇದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—112ರ 3ನೇ ಐಟಮ್‌ನ್ನು ತಾವು ಓದುತ್ತಿದ್ದೀರಿ. ನೀವು ಮೊದಲನೆಯ ಮತ್ತು ಎರಡನೆಯ ಐಟಮ್‌ಗಳನ್ನೂ ಓದಿ ಸ್ವಾಮಿ.

ಶ್ರೀ ಕೆ. ಹೆಚ್. ರಂಗನಾಥ್.—ಅಧ್ಯಕ್ಷರೇ, ನಾವು ವಕೀಲರು. ನಾವು ಏನು ಹೇಳಬೇಕೋ ಅಷ್ಟನ್ನು ಮಾತ್ರ ಹೇಳುತ್ತೇವೆ. ಮೇಲಿನವುಗಳ ಬಗ್ಗೆ ನಮಗೆ ಅನುಮಾನ ಇಲ್ಲ. ಆದರೆ ಇದಕ್ಕೆ ಏಕೆ ಪ್ರಾತಿನಿಧ್ಯ ಕೊಟ್ಟಿದ್ದೀರಿ ? ಹಳೇ ಪಂಚಾಯಿತಿ ಆಕ್ಟ್‌ನಲ್ಲೂ ಇದು ಇದೆ. ಈಗಿರತಕ್ಕ ತಾಲ್ಲೂಕು ಬೋರ್ಡ್ ಆಕ್ಟ್‌ನಲ್ಲೂ ಇದು ಇದೆ. ಮುನಿಸಿಪಲ್ ಆಕ್ಟ್‌ನಲ್ಲೂ ಇದು ಇದೆ. ಇದು ರಬ್ಬಿಷ್ ಆಕ್ಟ್ ಆಯಿತು ಎಂದು ನಾನು ಹೇಳಬೇಕಾಗುತ್ತದೆ. ಇದರಲ್ಲಿ ಸ್ವಲ್ಪ ಬದಲಾವಣೆ ಆಗಬೇಕಾಗುತ್ತದೆ. ಇದಕ್ಕೆ ಇಷ್ಟೇ ಆಸ್ತಿ ಆದಾಯಗಳು ಇದ್ದರೆ ಬಹಳ ಕಷ್ಟವಾಗುತ್ತದೆಂದು ನಾನು ಹೇಳುತ್ತೇನೆ. ನಾನು ಈ ಒಂದು ಯೋಜನೆಯ ಮೊದಲನೆಯ ಮತ್ತು ಎರಡನೆಯ ಹಂತದ ಬಗ್ಗೆ ವಿಚಾರ ಮಾಡುವಾಗ ಗ್ರಾಮಕ್ಕೆ ಪಂಚಾಯಿತಿ ಬೇಕು ಎನ್ನುವ ಅಭಿಪ್ರಾಯ ಬಂತು. ಆಗ ರಾಷ್ಟ್ರ ಮಟ್ಟದಲ್ಲಿ 1 ಲಕ್ಷದಿಂದ 2 ಲಕ್ಷದವರೆಗೆ ಪಂಚಾಯಿತಿಗಳ ಸಂಖ್ಯೆ ಜಾಸ್ತಿ ಯಾಗುತ್ತದೆ. ಇವೊತ್ತು 11 ಸಾವಿರ ಜನಸಂಖ್ಯೆಗೆ ಒಂದು ಮಂಡಲ್ ಪಂಚಾಯಿತಿ ಆಗುತ್ತದೆ ಎಂದು ಹೇಳುವಾಗ ನಮ್ಮ ತಾಲ್ಲೂಕಿನ ಎಷ್ಟು ಹಳ್ಳಿಗಳಲ್ಲಿ 1 ಸಾವಿರ, ಒಂದೂವರೆ ಸಾವಿರ, ಎರಡು ಸಾವಿರ, ಎರಡೂವರೆ ಸಾವಿರ ಜನಸಂಖ್ಯೆ ಇರತಕ್ಕಂತಹ ಹಳ್ಳಿಗಳು ಇವೆ ಎಂಬ ಬಗ್ಗೆ ನಾವು ನೋಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಜನಸಂಖ್ಯೆಯ ವ್ಯಾಪ್ತಿ ಕೂಡಾ ಜಾಸ್ತಿ ಯಾಗುತ್ತದೆ ಹಾಗೂ ಅದೇ ಸಮಯದಲ್ಲಿ ದೂರದ ವ್ಯಾಪ್ತಿ ಕೂಡಾ ಜಾಸ್ತಿ ಆಗುತ್ತದೆ ಎಂಬುದನ್ನು ನೋಡಬೇಕಾಗತ್ತದೆ. ಹಳ್ಳಿ ಮಟ್ಟದಲ್ಲಿ ಯಾವ ಊರಿನಲ್ಲಿ ಗ್ರಾಮ ಪಂಚಾಯಿತಿ ಇರಬೇಕು ಎಂಬ ಪ್ರಶ್ನೆ ಬರುತ್ತದೆ. ಇಂತಹ ಒಂದು ಸದುದ್ದೇಶದಿಂದ ತಂದಿರತಕ್ಕ ಈ ಆಕ್ಟ್‌ನ ಪೂರ್ವಾಪರವನ್ನು ಯೋಚನೆ ಮಾಡಿದಾಗ ನನಗನ್ನಿಸುತ್ತದೆ, ತಾವು ತಮ್ಮ ಪಕ್ಷದ ವತಿಯಿಂದಲಾದರೂ, ಸರ್ಕಾರದ ವತಿಯಿಂದಲಾದರೂ ಒಂದು ಭೂಮಿಕೆಯನ್ನು ರಾಜ್ಯದಲ್ಲಿ ತಯಾರು ಮಾಡಿ ವಸ್ತುಸ್ಥಿತಿಯನ್ನು ಅರಿತುಕೊಂಡು ಇದನ್ನು ತಂದಿದ್ದರೆ ಬಹಳ ಚೆನ್ನಾಗಿ ಇರುತ್ತಿತ್ತು ಎಂದು ನನಗನ್ನಿಸುತ್ತದೆ. ಆದರೆ ಇದು ಏಕಾಏಕಿ ಅವಸರದಲ್ಲಿ ತಂದಿರತಕ್ಕ ಕಾನೂನು ಎಂದು ನನಗನ್ನಿಸುತ್ತದೆ. ಆದರೆ ಈ ಬಗ್ಗೆ ನಾನು ಒಂದು ಮಾತನ್ನು ಹೇಳಿದರೆ ಮಾನ್ಯ ಮಂತ್ರಿಗಳು ಅನ್ಯತಾ ಭಾವಿಸಬಾರದು ಎಂದು ಹೇಳುತ್ತೇನೆ. ಈ ಒಂದು ಕಾನೂನು ತರುವ ಸಮಯದಲ್ಲಿ ನಮ್ಮ ಪಕ್ಷದ ಮೇಲೆ ಒಂದು ಗಧಾಪ್ರಹಾರವನ್ನೇ ಮಾಡಿದರು. ನಾನು ಈ ಮಂತ್ರಿಗಳ ಬಗ್ಗೆ ಹೇಳುತ್ತಾ ಇಲ್ಲ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಮಾತನಾಡುತ್ತಾ, ಜಿಲ್ಲಾ ಪರಿಷತ್ ಬಿಲ್ಲನ್ನು ನಾವು ಎಂದೋ ತಂದುಬಿಡುತ್ತಿದ್ದೆವು. ಆದರೆ ವಿರೋಧಪಕ್ಷದವರು ಇದರ ವಿರುದ್ಧವಾಗಿ ಹಂತಹಂತವಾಗಿ ಪ್ರಯತ್ನಪಟ್ಟರು ಎಂದು ಹೇಳಿದರು. ನಾವು ಯಾವ ಹಂತದಲ್ಲಿ ಪ್ರಯತ್ನಪಟ್ಟೆವು ? ನಾವು ಈ ಬಗ್ಗೆ ಯಾವ ಹಂತದಲ್ಲೂ ಕೂಡ ತೊಂದರೆ ಕೊಡುವುದಕ್ಕೆ ಪ್ರಯತ್ನಪಟ್ಟಿಲ್ಲ. ನಮ್ಮ ಪಕ್ಷದ ಕಾರ್ಯಕಾರಿ ಸಮಿತಿಯಲ್ಲೂ ಕೂಡಾ ಈ ಬಗ್ಗೆ ನಿರ್ಣಯ ಮಾಡಿದ್ದೇವೆ. ಆದರೆ ಈ ರೀತಿಯ ಮಾತನು ಏಕೆ ಹೇಳಬೇಕು ? ಯಾವತ್ತು ಈ ಕಾನೂನು ಬಂತು ? ಈ ಕರಡು ಮಸೂದೆ 23-6-83ರಲ್ಲಿ ಗೆಜೆಟ್‌ನಲ್ಲಿ ಬಂತು. ಆ ನಂತರ ಇದನ್ನು 11-8-83ರಲ್ಲಿ ಸಭೆಯಲ್ಲಿ ಮಂಡಿಸಲಾಯಿತು. ಎಂದರೆ ಇದನ್ನು ಮಂಡಿಸಬೇಕಾದರೇ 2 ತಿಂಗಳು ಬೇಕಾಯಿತು.

ಇದು 12, 8ರಲ್ಲಿ ಜಂಟ ಸಲಹಾ ಸಮಿತಿಗೆ ಹೋಯಿತು. 15-9-83 ಇದು ಜಂಟಿ ಸಲಹಾ ಸಮಿತಿಗೆ ಹೋಗಬೇಕೆಂದು ಈ ಸಭೆಗೆ ಒಂದು ನಿರ್ಣಯ ತೆಗೆದುಕೊಂಡುಬಂದು, ಅನಂತರ 18-10-83 ರಂದು ಮುಂದುವರಿಸ ಬೇಕೆಂದು ತಮ್ಮಿಂದ ಬಂತು. ಇದಕ್ಕೆ ಎಲ್ಲಾ ಕಲ್ಪನಾತೀತವಾದಂಥ ಪ್ರಚಾರ ನಡೆಯಿತು. 29 ಮೀಟಿಂಗ್ಸ್ ನಡೆದಿವೆ. ಕೊನೆಯ ಮೀಟಿಂಗ್ 26-11-83ಕ್ಕೆ ಸೇರಿ ಜಂಟಿ ಸಲಹಾ ಸಮಿತಿ ಒಪ್ಪಿಗೆ ಮಾಡಿಕೊಂಡು ಮೊನ್ನೆ ಜನವರಿ ಸೆಷನ್‌ನಲ್ಲಿ ಅದನ್ನು ಪರಿಶೀಲನೆ ಮಾಡಿ ತೆಗೆದುಕೊಂಡುಬಂದು ಪಾಸ್ ಮಾಡಲಿಕ್ಕೆ ಪ್ರಯತ್ನಪಟ್ಟಿದ್ದೀರಿ. ಜನವರಿಯಲ್ಲಿ ನಿಮ್ಮ ಸರ್ಕಾರ ಬಂತು, ಜನವರಿ ಕೊನೆಯ ಭಾಗದಲ್ಲಿ ಗವರ್ನರ್ ಅಡ್ರೆಸ್‌ಗೆ ಸೇರಿದರು. ಮಾರ್ಚಿ ಬಜೆಟ್ ಸೆಷನ್‌ನಲ್ಲಿ ಸೇರಿದರು. ಮಧ್ಯೆ ಸೆಷನ್ ಕರೆದು ಯಾವಾಗಲಾದರೂ ಪಾಸ್ ಮಾಡಿಕೊಳ್ಳಬಹುದಾಗಿತ್ತು. ಆದರೆ ಇದನ್ನು ಬಹಳ ಅವಸರದಲ್ಲಿ ಈಗ ತರುವುದಕ್ಕೆ ಪ್ರಯತ್ನಪಟ್ಟಿರಿ. ಈ ಹಿನ್ನೆಲೆಯಲ್ಲಿ ಮಾನಸಿಕವಾಗಿ ಜನರ ಅಭಿಪ್ರಾಯ ಇದರ ಬಗ್ಗೆ ಇದೆ ಎಂದು ನೀವು ಯೋಚನೆ ಮಾಡಿಕೊಂಡಿದ್ದೀರೆ. ವಿನಹ ಹಳ್ಳಿಗಾಡಿನಲ್ಲಿ ಮಾನಸಿಕವಾಗಿ ಈ ಸಣ್ಣ ಗ್ರಾಮಪಂಚಾಯಿತಿಗಳು ದೊಡ್ಡ ಗಾತ್ರದ ಗ್ರಾಮಪಂಚಾಯಿತಿಗಳಿಗೆ ಹೋಗತಕ್ಕದ್ದು ಮಾಡಲಿಕ್ಕೆ, ದೊಡ್ಡ ಕೆಲಸವನ್ನು ಮಾಡಬಹುದಿತ್ತು ಎನ್ನು ಅಭಿಪ್ರಾಯ ಇಟ್ಟರೆ ಈ ಸದನ ತಪ್ಪು ಭಾವಿಸುವುದಿಲ್ಲ ಎಂದು ತಿಳಿದುಕೊಂಡಿದ್ದೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಸಹ ಗೊತ್ತಿದೆ. 9 ಜಿಲ್ಲೆಗಳಲ್ಲಿ, ಎಲ್ಲಾ ಪಂಚಾಯಿತಿಗಳ ಅಧ್ಯಕ್ಷರ ಸಮ್ಮೇಳನದಲ್ಲಿ ಈ ಪ್ರಸ್ತಾವವನ್ನು ನಾವು ಚರ್ಚೆ

ಮಾಡಿದ್ದೇವೆ. ಇದರ ಸಾಧಕ ಭಾಧಕಗಳನ್ನು ಹೇಳಿದಾಗ ಎಲ್ಲಾ ಸಭೆಗಳಲ್ಲೂ ಒಪ್ಪಿಗೆ ಮಾಡಿ ನಿರ್ಣಯವನ್ನು ಈ ಮೂಲಕ ಕೊಟ್ಟಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.—ನನ್ನ ಅಭಿಪ್ರಾಯ ಆ ದೃಷ್ಟಿಯಲ್ಲಿ ಅಲ್ಲ. ಮಾನ್ಯ ಹುಚ್ಚ ಮಾಸ್ತಿಗೌಡರು ಇದ್ದಾರೆ. ಈ ಸಮಯದಲ್ಲಿ 1-11-56ರಲ್ಲಿ ವಿಶಾಲ ಕರ್ನಾಟಕ ಆದ ಸಂದರ್ಭದಲ್ಲಿ ನಾವೆಲ್ಲಾ ಒಂದು ಆದೆವು. ಫಜಲ್ ಅಲಿ ಕಮಿಷನ್ ರಿಪೋರ್ಟ್ ಬಂತು ಆಗ ಮೈಸೂರು ಹಾಗೆ ಉಳಿಯಬೇಕು, ಕರ್ನಾಟಕ ಆಗಬಾರದು ಎಂದು ದೊಡ್ಡ ಚಳುವಳಿ ಇದ್ದ ಕಾಲವನ್ನು ನಾವು ನೋಡಿದ್ದೇವೆ. ಇದೇ ಕೆ.ಆರ್. ಸರ್ಕಲ್‌ನಲ್ಲಿ ದೊಡ್ಡ ಹೋರಾಟ ಕೂಡ ಆಯಿತು. ಆ ಚಳುವಳಿಯಲ್ಲಿ ಭಾಗವಹಿಸಿ ಏಟು ತಿಂದವರಲ್ಲಿ ನಾನು ಒಬ್ಬನಾಗಿದ್ದೇನೆ. ನಾಲ್ಕು ಮೈಸೂರು ಆಗಬೇಕೆಂದು ಮಾತನಾಡಿದ ಸಾಹಿತಿಗಳು ಇದ್ದಾರೆ. ಒಬ್ಬರು ಇಲ್ಲ, ಇನ್ನು ಮಿಕ್ಕವರು ಇದ್ದಾರೆ. ಹೀಗೆ ಅಭಿಪ್ರಾಯಗಳು ಇರುತ್ತವೆ. ತಮ್ಮ ತಮ್ಮ ಅಭಿಪ್ರಾಯ ವ್ಯಕ್ತ ಮಾಡಲಿಕ್ಕೆ ರಾಜ್ಯಾಂಗದಲ್ಲಿ ಹಕ್ಕು ಕೊಟ್ಟಿರುವಾಗ ತಮ್ಮ ಅಭಿಪ್ರಾಯವನ್ನು ಹೇಳುತ್ತಾರೆ. ನಮಗೆ ಅದು ತಪ್ಪು ಎಂದು ಹೇಳಲಿಕ್ಕೆ ಯಾವ ಹಕ್ಕೂ ಇರುವುದಿಲ್ಲ. 1956 ನೇ ಜನವರಿ ಒಂದರಿಂದ ಕರ್ನಾಟಕ ಎಂದು ಹೆಸರು ಇಡಲಿಕ್ಕೆ ಸಾಧ್ಯವಾಗಿರಲಿಲ್ಲ. ಈ ಸಭೆಯಲ್ಲಿ ರೆಸಲ್ಯೂಷನ್ ತಂದ ಸಮಯದಲ್ಲಿ ಓಟಿಗೆ ಹಾಕುವ ಸಮಯದಲ್ಲಿ ಆಗಿದ್ದಂತಹ ನಿಜಲಿಂಗಪ್ಪನವರು ಅದು ಓಟಿಗೆ ಬಾರದೇ ಇರುವ ರೀತಿಯಲ್ಲಿ ಮಾಡಿ ನಿಲ್ಲಿಸಿದ ಕಾಲ ಇತ್ತು. ಮೈಸೂರು ಇರಬೇಕೆಂದು ಹುಚ್ಚ ಮಾಸ್ತಿಗೌಡರು ಹೇಳಿದ್ದುದು ಉಂಟು. ದಿವಂಗತ ದೇವರಾಜ್‌ಅರಸ್ ಅವರು ಆ ನಿರ್ಣಯ ಬಂದಾಗ ಅವರು ಆ ರೀತಿ ಮಾಡಿದ್ದು ಉಂಟು. 1971ನೇ ಚುನಾವಣೆಯಲ್ಲಿ ಮಾನ್ಯ ಹುಚ್ಚಮಾಸ್ತಿಗೌಡರು ಆ ಅಭಿಪ್ರಾಯ ಬದಲಾವಣೆ ಮಾಡಿಕೊಂಡರು. ಹಳೇ ಮೈಸೂರಿನಲ್ಲಿ ಕುವೆಂಪು ಕರ್ನಾಟಕ ಇರಬೇಕೆಂದು ಹೇಳಿದ ಕಾಲದಲ್ಲಿ ಅಲ್ಲಿ ಭಿನ್ನಾಭಿಪ್ರಾಯ ಇದ್ದುದು ಉಂಟು. ನಾಲ್ಕು ಕರ್ನಾಟಕ ಇರಬೇಕೆಂದು ಹೇಳಿದ ಸಾಹಿತಿಗಳು ಇದ್ದರು. ಹಾಗೆಯೇ ಅಭಿಪ್ರಾಯ ದಿನ ದಿಂದ ದಿನಕ್ಕೆ ಬದಲಾವಣೆಯಾಗುತ್ತಾ ಹೋಗುತ್ತವೆ. ಆಗ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಒಂದು ವರ್ಷದಲ್ಲಿ ಕರ್ನಾಟಕ ಎಂದು ಹೆಸರು ಇಡುತ್ತೇವೆ, ಭೂ ಸುಧಾರಣೆ ಮಾಡುತ್ತೇವೆ ಎಂದು ಪ್ರಸ್ತಾಪ ಮಾಡಿದ್ದು ಉಂಟು. ರಾಜ್ಯಮಟ್ಟದ ಚುನಾವಣೆ ಪ್ರಣಾಳಿಕೆಯಲ್ಲಿ ಇದನ್ನು ಪ್ರಸ್ತಾಪ ಮಾಡಿದುದ್ದು ಉಂಟು. ಈಗ ಮಾನ್ಯ ಮಂತ್ರಿಗಳಾಗಿರತಕ್ಕ ನಜೀರ್ ಸಾಬ್ ಅವರು ಆ ಒಂದು ಕೂಗಿಗೆ ಹೂಂಗುಟ್ಟಿದ್ದು ಉಂಟು. ಅದೂ ಬದಲಾವಣೆ ಆಯಿತು. ಯಾವ ಸದನದಲ್ಲಿ 16-17 ವರ್ಷವಾದರೂ ನಿರ್ಣಯ ಪಾಸ್ ಆಗಲಿಕ್ಕೆ ಸಾಧ್ಯವಾಗಿರಲಿಲ್ಲ, ಆ ನಿರ್ಣಯ ಈ ಸದನದಲ್ಲಿ ಬಹುಮತ ಚರ್ಚೆ ಅಷ್ಟೇ ಅಲ್ಲ, ಸರ್ವಾನುಮತದಿಂದ ಪಾಸ್ ಆಯಿತು. ಅಂತಹ ರೀತಿಯಲ್ಲಿ ಭೂಮಿಕೆಯನ್ನು ತಯಾರು ಮಾಡಿದ್ದು ಇದೆ. ಅದಕ್ಕೋಸ್ಕರ ನಾನು ಇದರ ಬಗ್ಗೆ ಹೇಳುತ್ತಿದ್ದೇನೆ. ಮೊನ್ನೆ ನಮ್ಮ ಪಕ್ಷದ ನಾಗನಗೌಡರು ಡಿಸೆಂಟ್ ನೋಟ್ ಕೊಟ್ಟು ಹೇಳಿದ್ದಾರೆ. ವಾದಗ್ರಸ್ಥವಾದ ವಿಚಾರ ಕೂಡ ಇದೆ. ರಾಷ್ಟ್ರದಲ್ಲಿ ಎರಡು ಲಕ್ಷ ಗ್ರಾಮಪಂಚಾಯಿತಿಗಳು ಬರಬಹುದು ನಮ್ಮ ರಾಜ್ಯದಲ್ಲಿ ಎಂಟು ಸಾವಿರ ಗ್ರಾಮಪಂಚಾಯಿತಿಗಳು ಆಗಬಹುದು. ತಾವು ಮಾತನಾಡುವಾಗ ನಮಗೆ ಅಂಕಿ ಅಂಶಗಳು ಸಿಕ್ಕಬಹುದು. ಈಗ 5-10 ಸಾವಿರಕ್ಕೆ ಒಂದು ಪಂಚಾಯಿತಿಯನ್ನು ಮಲೆನಾಡಿನಲ್ಲಿ ಮಾಡಿದ್ದೀರಿ. ಒಂದು ಸಾವಿರಕ್ಕೆ ಕೆಳಗೆ ಇರತಕ್ಕಂಥದ್ದು, ಎರಡು ಸಾವಿರಕ್ಕೆ ಮೇಲೆ ಇರತಕಂಥದ್ದು ಪಂಚಾಯಿತಿ ಇದೆ. ನಮ್ಮ ಚೌಡಯ್ಯನವರು ಹೇಳುತ್ತಿದ್ದರು ಅವರ ಊರು ಮತ್ತೆ ಅವರ ಪಕ್ಕದ ಊರು ಸೇರಿದರೆ ಸಾಕು ಸಾಕಷ್ಟು ಬರುತ್ತದೆಂದು ಹೇಳುತ್ತಿದ್ದರು. ಕೆಲವು ಮೈದಾನ ಭಾಗಗಳಲ್ಲಿ ಕಷ್ಟವಾಗುತ್ತದೆ. ಗುಲ್ಬರ್ಗ, ಬಳ್ಳಾರಿ ಮುಂತಾದ ಪ್ರದೇಶಗಳಲ್ಲಿ ಕಷ್ಟವಾಗುತ್ತದೆ. ಗ್ರಾಮ ದೊಡ್ಡದು ಇದ್ದರೂ ಕೂಡ 10-15 ಕಿಲೋಮೀಟರ್ ದೂರ ಇರತಕ್ಕದ್ದು ಕೂಡ ಇದೆ. ಆದ್ದರಿಂದ, ಇದರ ಬಗ್ಗೆ ಒಂದು ಮಿತಿ ಹಾಕಿ ಇದನ್ನು ಮಾಡಬೇಕಾಗುತ್ತದೆ. ಜನಸಂಖ್ಯೆ ಬಗ್ಗೆ 15 ಸಾವಿರ ದಿಂದ 10 ಸಾವಿರಕ್ಕೆ ಬಂದಿದ್ದೀರಿ. ಇನ್ನೂ ಕಡಿಮೆ ಮಾಡಲಿಕ್ಕೆ ಸಾಧ್ಯವಾದರೆ ಮಾಡಿ. ಹಾಗೆ ದೂರದ ಮಿತಿಯನ್ನು ಕಡಿಮೆ ಮಾಡಲಿಕ್ಕೆ ಸಾಧ್ಯವಾದರೆ ಮಾಡಿ ಎಂದು ನಾನು ಹೇಳುತ್ತೇನೆ. ಒಂದು ವಾದವಿನಿತ್ತು ಎಂದರೆ, ನಮ್ಮಿಂದಲೇ ಇದು ಬಹಳ ಕಾಲ ತಡವಾಯಿತು ಎನ್ನುವ ಪ್ರಚಾರವನ್ನು ತಮ್ಮ ಪಕ್ಷದಿಂದ ಮಾಡಿದ್ದಾರೆ. ಮುಖ್ಯ ಮಂತ್ರಿಗಳು ಕೂಡ ಇದನ್ನು ಮಾಡಿದ್ದಾರೆ. ಇದು ನಿರಾಧಾರವಾದ ಟೀಕೆ ಮತ್ತು ಒಂದು ಅಪ ಪ್ರಚಾರ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಈ ಪ್ರಚಾರ ಈ ಕಾನೂನಿನ ಬಗ್ಗೆ ಆಗಬಾರದಾಗಿತ್ತು. ಇದು ನಮ್ಮಿಂದ ತಡವಾಗಿಲ್ಲ. ಈ ಕಾನೂನು ಪಾಸ್ ಮಾಡಲಿಕ್ಕೆ, ಪ್ರತೀಕ ಸಭೆ ಕರೆದಿದ್ದಾಗ ವಿರೋಧಪಕ್ಷದ ನಾಯಕರು ಅಡ್ಡಿ ಬಂದಿಲ್ಲ, ಯಾವ ಸದಸ್ಯರೂ ಅಡ್ಡಿ ಬಂದಿಲ್ಲ ಏತಕ್ಕೋಸ್ಕರ ಕಾಂಗ್ರೆಸ್ ಪಕ್ಷದ ದಿಂದ ತಡವಾಗಿದೆ ಎನ್ನುವುದನ್ನು ಹೇಳಿದ್ದೀರಿ ? ಆ ಮಾತು ಸರಿಯಲ್ಲ ಎಂದು ಹೇಳುತ್ತೇನೆ. ಇನ್ನು 114 ರಲ್ಲಿ ಹಣಕಾಸಿನ ಬಗ್ಗೆ the amount which may be allotted to the Mandal Panchayat fund by the Government or by the Zilla Parishad under the provisions of this or any other Act :

ಎನ್ನುವ ಮಾತನ್ನು ಪ್ರಸ್ತಾಪ ಮಾಡಿದ್ದೀರಿ. ಎಷ್ಟು ಹಣ ಹೇಗೆ ಎನ್ನುವುದನ್ನು ತಾವು ಹೇಳಿಲ್ಲ. ತಾವು ಉತ್ತರ ಹೇಳುವಾಗ 210ನೇ ಕಲಂ ನೋಡಿ ಎಂದು ಹೇಳಬಹುದು.

ಶ್ರೀ ಜಿ. ಅಬ್ದುಲ್ ನಜೀರ್‌ಸಾಬ್.—114 ರಲ್ಲಿ ಸಬ್ ಕ್ಲಾಸ್ 3 ನೋಡಿ.

ಶ್ರೀ ಕೆ. ಹೆಚ್. ರಂಗನಾಥ್.—5 ರೂಪಾಯಿ ಏತಕ್ಕೆ ಮಾಡಿದಿರಿ. ಅದನ್ನು 10 ರೂಪಾಯಿ ಎಂದು ಮಾಡಿ. ಯಾವ ಒಂದು ಶಾಸ್ತ್ರೀಯ ಆಧಾರದ ಮೇಲೆ ತಲೆಗೆ 5 ರೂಪಾಯಿಗಳು ಎಂದು ನೀವು ನಿಗದಿ ಮಾಡುತ್ತೀರಿ. ಇವತ್ತಿನ ದಿವಸ ರಾಷ್ಟ್ರದ ಆದಾಯದಲ್ಲಿ ಅಥವ ರಾಜ್ಯದ ಆದಾಯದಲ್ಲಿ ನೋಡಿದರೆ ಶೇಕಡ 70 ರಷ್ಟು ಗ್ರಾಮಾಂತರ ಪ್ರದೇಶದಿಂದ ಬರುತ್ತದೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಸರ್ಕಾರ ಮತ್ತು ಜಿಲ್ಲಾಪರಿಷತ್ ಕೊಡತಕ್ಕ ಹಣ ಸಬ್‌ಕ್ಲಾಸ್ ಒಂದು (ಎ) ನಲ್ಲಿ ಬರುತ್ತದೆ. ನಾನು ಇದರ ಬಗ್ಗೆ ಕ್ಲಾಸ್ ಬೈ ಕ್ಲಾಸ್ ಹೇಳಿದ್ದೇನೆ. ಅಸ್ಸೈನ್‌ಡ್ ವರ್ಕ್ಸ್ ಬಗ್ಗೆ ಹೇಳಿದ್ದೇನೆ, ಇನ್ನು ಮುಂದೆ ಡಿಆರ್‌ಡಿಎಸ್ ಸ್ಕೀಮ್ ಇರುವುದಿಲ್ಲ. ಕಾನೂನು ಪ್ರಕಾರ ಜಿಲ್ಲಾ ಪರಿಷತ್ತಿಗೆ ಅದು ಮರ್ಜ್ ಆಗುತ್ತದೆ. ಕೇಂದ್ರಸರ್ಕಾರದ ಎಲ್ಲಾ ಸ್ಕೀಮುಗಳಿಗೂ ಸಹ, ಜಿಲ್ಲಾ ಪರಿಷತ್ತು ಮತ್ತು ರಾಜ್ಯ ಸರ್ಕಾರದಿಂದ ದುಡ್ಡು ಬರುತ್ತದೆ. ಎರಡರಿಂದಲೂ ದುಡ್ಡು ಬರಬೇಕಾಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ಅದು ಹೇಗೆ ಆಗುತ್ತದೆ ಅಂದರೆ ಪ್ರಶ್ನೋತ್ತರ ಕಾಲದಲ್ಲಿ ಮಾನ್ಯ ಸದಸ್ಯರಾದ ಚೌಡಯ್ಯನವರು ಪ್ರಸ್ತಾಪ ಮಾಡುತ್ತಾ, ನಾಳೆ 31 ನೇ ತಾರೀಖಿಗೆ ಬಿಲ್ ಕೊಡುವ ವ್ಯವಸ್ಥೆ ಮಾಡಿ ಎಂದು ಕೇಳಿದರೆ ಇಲ್ಲ, ಇಲ್ಲ, ಓವರ್‌ಡ್ರಾಫ್ಟ್ ಇದೆ, ಅದನ್ನು ಸರಿಮಾಡುತ್ತೇವೆ. 31 ನೇ ತಾರೀಖು ಕಳೆದನಂತರ 1ನೇ ತಾರೀಖು ಕೊಡುತ್ತೇವೆ ಎನ್ನುವಂಥ ಪರಿಸ್ಥಿತಿ ಇದ್ದರೆ ಹೇಗೆ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಅದನ್ನು ಯಾವ ರೀತಿ ಸುಧಾರಣೆ ಮಾಡಬೇಕೆಂಬ ಬಗ್ಗೆ ಮಾನ್ಯ ಸದಸ್ಯರು ಸಲಹೆಯನ್ನು ಕೊಡಲಿ, ಆ್ಯಕ್ಷನ್ ಪ್ಲಾನ್ ಅಪ್ರೂವ್ ಆದಮೇಲೆ ಡಿ.ಆರ್.ಡಿ.ಎಸ್ ಅಮೌಂಟ್ ರಿಲೀಸ್ ಮಾಡಬೇಕಾಗುತ್ತದೆ. ಈ ಹಣ ಯಾವತ್ತೂ ಲ್ಯಾಪ್ಸ್ ಆಗುವುದಿಲ್ಲ.

Sri K.H. Ranganath.—They do not spend the money. They keep that money in the Bank and the interest thereon accumvlaies. The plan target is not going to be reached. The benefit will never go to common man. The beneficiary will not bcnefit at all.

Sri Abdul Nazir Sab.—Let the hon. Member go through March after March. He will realise that I have exceeded than what was provided for. In respect of DRDS, I have spent 136%

ಶ್ರೀ ಕೆ.ಹೆಚ್. ರಂಗನಾಥ್.—ನನ್ನ ಜಿಲ್ಲೆಗೆ ಸಂಬಂಧಪಟ್ಟಂತೆ ಹೇಳುವುದಾದರೆ 81-82, 82-83 ಮತ್ತು 83-84ರಲ್ಲಿ ಈ ಡಿ.ಆರ್.ಡಿ.ಎಸ್. ಫಂಡ್‌ನಲ್ಲಿ ಎಷ್ಟು ಹಣ ಇದೆ ಎಂಬುದನ್ನು ಮಾನ್ಯ ಸಚಿವರು ಉತ್ತರ ಕೊಡುವಾಗ ಹೇಳಬೇಕು. ಅದೇ ರೀತಿ ಬೇರೆ ಬೇರೆ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಕೂಡ ಅಂಕಿಅಂಶಗಳನ್ನು ಹೇಳಬೇಕು. ನಾವು ನಮ್ಮ ಜಿಲ್ಲೆಯಲ್ಲಿ ಅಥವಾ ನಮ್ಮ ಕ್ಷೇತ್ರದಲ್ಲಿ ಎಷ್ಟರಮಟ್ಟಿನ ಕೆಲಸವಾಗಬೇಕೆಂದು ಆಸೆಪಟ್ಟಿರುತ್ತೇವೋ ಅಷ್ಟುಮಟ್ಟಿನ ಆಸಕ್ತಿಯನ್ನು ನಿಮ್ಮ ಅಧಿಕಾರಿ ವರ್ಗದವರು ತೋರಿಸುವುದಿಲ್ಲ. ಈ ಕಾನೂನು ಜಾರಿಗೆ ತರತಕ್ಕ ಅಧಿಕಾರಿಗಳು ಯಾರ ಅಧೀನದಲ್ಲಿ ಕೆಲಸ ಮಾಡುತ್ತಾರೋ ಅಲ್ಲಿಗೆ ಸಂಬಂಧಪಟ್ಟಂತೆ ಇರುತ್ತಾರೆ. ಏಕೆಂದರೆ ಕೆಲವು ಅಧಿಕಾರಿಗಳು ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ಡೆಪ್ಯುಟೇಷನ್ ಹೋಗಿರುತ್ತಾರೆ....

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಸಭಾಧ್ಯಕ್ಷರೇ....

ಶ್ರೀ ಕೆ.ಹೆಚ್. ರಂಗನಾಥ್.—ಪ್ರೋಸಸ್ ಆಫ್ ಟ್ಯಾಕ್ಸಸ್ ಇದು. ಇದು ಬಹಳ ಕಡಿಮೆ ಹಣ ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ತಾವು ನಮ್ಮ ಸಲಹೆಯನ್ನು ಕೇಳಿದ್ದೀರಿ. ಇದರ ಬಗ್ಗೆ ನಾನು ಒಂದು ಮಾತನ್ನು ಹೇಳಿದರೆ ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ, ತಾವು ಪ್ರತಿದಿನ ಈ ಮಸೂದೆಯನ್ನು ಓದುತ್ತಿರುತ್ತೀರಿ, ತಾವು ಚೆನ್ನಾಗಿ ಇದನ್ನು ಓದಿ ಎಲ್ಲಾ ವಿಚಾರಗಳನ್ನೂ ಆಮೂಲಾಗ್ರವಾಗಿ ತಿಳಿದುಕೊಂಡಿದ್ದೀರಿ, ಆದ್ದರಿಂದ ತಮ್ಮನ್ನು ನಾನು ಅಭಿನಂದಿಸುತ್ತೇನೆ. ಇಲ್ಲಿ ರಾಜ್ಯದ ವರಮಾನ ರಾಷ್ಟ್ರದ ವರಮಾನ ಅಥವಾ ಗ್ರಾಮಾಂತರ ಪ್ರದೇಶದ ವರಮಾನ ಎಷ್ಟೆಷ್ಟು ಬರುತ್ತಿದೆ ಎಂಬುದನ್ನು ತಾವು ಏನಾದರೂ ಹೇಳುವುದಕ್ಕೆ ಸಾಧ್ಯವೆ ? ಸುಮಾರು 60 70 ಪರ್ಸೆಂಟ್ ಅಲ್ಲಿಂದ ಬರುತ್ತಿರುವಾಗ ತಾವು ಇದನ್ನು ಏತಕ್ಕೆ ನೇರವಾಗಿ ನಿಗದಿ ಮಾಡುವ ಸಂದರ್ಭದಲ್ಲಿ ಹೇಳಲಿಲ್ಲ ? ನಗರ ಪ್ರದೇಶದಿಂದ ಎಷ್ಟು ಬರುತ್ತಿದೆ, ಅದೇ ರೀತಿ ಹಳ್ಳಿಗಾಡಿನಿಂದಲೂ ಬರುತ್ತಿದೆ. ನಾನು ಇವೊತ್ತು 10-15 ಅಂಗುಲ ಮಳೆ ಬರತಕ್ಕ ಪ್ರದೇಶದಿಂದ ಆರಿಸಿ ಬಂದಿರತಕ್ಕವನು, ನಮ್ಮಲ್ಲಿ ಒಂದು ಬಾವಿಯನ್ನು ತೆಗೆಯಿಸಬೇಕಾದರೆ ಪಿ.ಎಲ್.ಡಿ. ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳಬೇಕು. 60-70 ಅಡಿ ತೆಗೆದರೂ ಸಾಕಷ್ಟು

ನೀರು ಸಿಕ್ಕುವುದಿಲ್ಲ. ಒಂದು ವೇಳೆ ನೀರು ಸಿಕ್ಕಿದರೂ ಅದಕ್ಕೆ ಒಂದು ಪಂಪ್‌ಸೆಟ್ ಹಾಕಬೇಕಾದರೆ ಮತ್ತೆ ಸಾಲವನ್ನು ತೆಗೆದುಕೊಳ್ಳಬೇಕು. ಆದಕ್ಕೆ ಬಡ್ಡಿಯನ್ನು ಕಟ್ಟಬೇಕಾದರೆ ಮತ್ತೆ ಎಲ್ಲಿಂದಲಾದರೂ ಸಾಲವನ್ನು ತೆಗೆದುಕೊಳ್ಳಬೇಕು, ಇಂಥ ಒಂದು ಪರಿಸ್ಥಿತಿಯಲ್ಲಿ ನಾವು ಕಷ್ಟಪಡುತ್ತಿರುವಾಗ ಚೆನ್ನಾಗಿ ನೀರಾವರಿ ಆಗತಕ್ಕ ಪ್ರದೇಶದ ಜನರಿಗೆ ನೀವು ಎಲ್ಲಾ ಸೌಕರ್ಯಗಳನ್ನೂ ತೆಗೆದುಕೊಂಡು ಹೋಗಿ ಕೊಟ್ಟರೆ ಅವರು ಮಜಾ ಮಾಡುತ್ತಾರೆ. ನಾನು ದಯಮಾಡಿ ತಮ್ಮನ್ನು ಕೇಳುತ್ತೇನೆ, ಯಾರು ಹಣವಂತರಿದ್ದಾರೆ, ಯಾರು ನೀರಾವರಿ ಪ್ರದೇಶದಲ್ಲಿದ್ದಾರೆ ಅವರಿಂದ ಬರಬೇಕಾದ ಹಣವನ್ನು ಏತಕ್ಕೆ ವಸೂಲ್ಮಾಡಿಲ್ಲ? ಅವರಿಂದ ವಸೂಲ್ಮಾಡಬೇಕಾದ್ದು ಏನಿದೆ ಅದನ್ನು ಬಿಟ್ಟು ಯಾರು ದುರ್ಬಲರಾಗಿರುತ್ತಾರೆ, ಕೂಲಿ ಮಾಡತಕ್ಕವರಿರುತ್ತಾರೆ ಯಾರು ಬೀಡಿ ಸೇದುವವರಿರುತ್ತಾರೆ ಅಂಥವರ ಮೇಲೆ ತೆರಿಗೆಯನ್ನು ಹಾಕಿ ಅದನ್ನು ವಸೂಲ್ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಿ. ಇದು ಸರಿಯಲ್ಲ. ನೀರಾವರಿ ಪ್ರದೇಶದಲ್ಲಿರುವವರಿಂದ ಏತಕ್ಕೆ ಬಾಕಿ ನಿಲ್ಲಿಸಿಕೊಂಡು ಬಂದಿದ್ದೀರಿ? ಇವತ್ತು ಯಾವ ಗ್ರಾಮಪಂಚಾಯಿತಿಗಳಿಗೂ ಅವರ ಆಫೀಸು ಕಟ್ಟಡಗಳಿಲ್ಲ. ಎನ್. ಆರ್. ಇ. ಪಿ. ಯವರಿಗೆ ಆಫೀಸ್ ಕಟ್ಟಡ ಇಲ್ಲ. ಒಂದೇ ರೂಮಿನಲ್ಲಿ ಅವರು ಇರಬೇಕು. ಅದರಲ್ಲೇ ಗ್ರಾಮ ಪಂಚಾಯಿತಿಯ ಅಧ್ಯಕ್ಷರು, ಸೆಕ್ರೆಟರಿ, ಜವಾನ, ಇರಬೇಕಾಗುತ್ತದೆ. ಮಂಡಲ್ ಪಂಚಾಯಿತಿಯವರು ಏನೇನು ಕೆಲಸಗಳನ್ನು ಮಾಡಬೇಕೆಂಬ ಬಗ್ಗೆ ಇಲ್ಲಿ ತಾವು ಒಂದು ದೊಡ್ಡ ಪಟ್ಟಿಯನ್ನೇ ಕೊಟ್ಟಿದ್ದೀರಿ. ಅವರು ತಮ್ಮ ಲೆಕ್ಕದ ಪುಸ್ತಕಗಳನ್ನೆಲ್ಲಾ ಇಟ್ಟುಕೊಳ್ಳುವುದಕ್ಕೆ ಜಾಗವಾದರೂ ಎಲ್ಲಿದೆ? ಇವೊತ್ತು ತಾವು ಹಳ್ಳಿಗಳನ್ನು ಬಹಳ ನಿಕೃಷ್ಟವಾಗಿ ನೋಡುತ್ತಿದ್ದೀರಿ. ನಿಮಗೆ ಗ್ರಾಮಾಂತರ ಪ್ರದೇಶದ ಜನರ ಬಗ್ಗೆ ಆಸಕ್ತಿ ಇದ್ದಿದ್ದರೆ ಈ ಅಸೆಂಬ್ಲಿಯ ಸ್ಥಾನಗಳೆಲ್ಲಾ ಮೊದಲಿನಿಂದಲೂ ನಿಮ್ಮದೇ ಆಗಿರುತ್ತಿತ್ತು. ಆದರೆ ಈಗ ನಿಮ್ಮದು ಕೇವಲ ಸೊಳ್ಳೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಫೈನಾನ್ಶಿಯಲ್ ಮೆಮೋರ್‍ಯಾಂಡಂನಲ್ಲಿ ಎಲ್ಲಾ ವಿವರಗಳನ್ನೂ ಕೊಟ್ಟಿದ್ದೇವೆ. ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್‌ನ ಕಟ್ಟಡಗಳಿಗೋಸ್ಕರ ನಾವು 34 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ.

ಶ್ರೀ ಕೆ. ಹೆಚ್. ರಂಗನಾಥ್.—ಇವೊತ್ತು ಎಷ್ಟು ಗ್ರಾಮಪಂಚಾಯಿತಿಗಳಿಗೆ ತಮ್ಮದೇ ಆದಂಥ ಸ್ವಂತ ಕಟ್ಟಡಗಳಿವೆ. ನಮ್ಮ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಪ್ರಾಥಮಿಕ ಶಾಲೆಗಳನ್ನು ನೋಡಿದರೆ ಅಲ್ಲಿ 4-5 ತರಗತಿಗಳಿದ್ದರೂ ಒಬ್ಬನೇ ಉಪಾಧ್ಯಾಯ ಇರುತ್ತಾನೆ. ಅಂದರೆ ಏಕೋಪಾಧ್ಯಾಯ ಪಾಠಶಾಲೆ. ಈ ಪರಿಸ್ಥಿತಿಯಿಂದ ರೋಸಿ ಹೋದ ಜನರು ಏಕೋ? ಉಪಾಧ್ಯಾಯ? ನೀನು ಸರಿಯಾಗಿ ಪಾಠ ಮಾಡುತ್ತಿಲ್ಲ ಎಂದು ಕೇಳಬೇಕಾಗಿ ಬಂದಿದೆ. ಈ ಶಾಲೆಗಳಿಗೂ ಕೂಡ ಸ್ವಂತ ಕಟ್ಟಡಗಳು ಅನೇಕಕಡೆ ಇಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಒಂದು ಪಾಠಶಾಲೆಯನ್ನು ಕೇಳಿದರೆ ಅದಕ್ಕೆ ಕಾಂಟ್ರಿಬ್ಯೂಷನ್ ಕೇಳುತ್ತೀರಿ. ಆದರೆ ಅದೇ ನಗರ ಪ್ರದೇಶದಲ್ಲಿ ಕೇಳಿದರೆ ಯಾವುದನ್ನೂ ಕೇಳುವುದಿಲ್ಲ, ಮತ್ತು ಅಲ್ಲಿಗೆ ಎಷ್ಟು ಜನ ಉಪಾಧ್ಯಾಯರು ಬೇಕೋ ಅಷ್ಟು ಜನರನ್ನೂ ಕೊಡುತ್ತೀರಿ? ಇದು ಯಾವ ನ್ಯಾಯ? ಕೇವಲನಗರ ಪ್ರದೇಶಗಳಿಗೇ ಎಲ್ಲಾ ಸೌಲಭ್ಯಗಳನ್ನೂ ಕೊಡುತ್ತೀರಿ? ಹಾಗಾದರೆ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಯಾವ ಸೌಲಭ್ಯವು ಬೇಡವೆ? ಸ್ವಾಮಿ, ನಾನು ಇಲ್ಲಿ ಜನತಾ ಪಕ್ಷದ ಸರ್ಕಾರವನ್ನು ಟೀಕೆ ಮಾಡುತ್ತಿಲ್ಲ. ಸರ್ಕಾರ ಎಂದರೆ ಒಂದು ಸಂಸ್ಥೆ, ಯಾವುದೇ ಒಂದು ಪಕ್ಷ ಅಧಿಕಾರಕ್ಕೆ ಬಂದು ಹೋಗಬಹುದು. ಆದರೆ ಈ ಆಡಳಿತ ಯಂತ್ರ ಮಾತ್ರ ಯಾವಾಗಲೂ ಇದ್ದೇ ಇರುತ್ತದೆ. ತಾವು ಇದಕ್ಕೆ ಒಂದು ವ್ಯವಸ್ಥಿತವಾದ ಭೂಮಿಕೆಯನ್ನು ತಯಾರು ಮಾಡಬೇಕಾಗಿತ್ತು. ಆದರೆ ಮಾಡಲಿಲ್ಲ. ಇಲ್ಲಿ ಖುಷ್ಕಿ ಬೇಸಾಯದ ವಿಚಾರವನ್ನು ಕೊಟ್ಟಿದ್ದೀರಿ. ನಾನು ರಬಿ ಬೆಳೆಯನ್ನು ಬೆಳೆಯುತಕ್ಕ ಪ್ರದೇಶದಿಂದ ಬಂದ ಜನರನ್ನು ಕುರಿತುನಿಮ್ಮ ಕಡೆ ಮಳೆ ಯಾವರೀತಿ ಇದೆ, ಬೆಳೆ ಯಾವರೀತಿ ಇದೆ ಎಂದು ಕೇಳಿದಾಗ ಅವರು ಹೇಳಿದರು, ನಿಮ್ಮ ಕಡೆ ಮಳೆಯೇ ಬಂದಿಲ್ಲ ಎಂದು. ಅಂದರೆ ಗ್ರಾಮಾಂತರ ಪ್ರದೇಶದಲ್ಲಿ ಅಂಥ ಒಂದು ಪರಿಸ್ಥಿತಿ ಇದೆ. ಇಲ್ಲಿ 114ನೇ ಕಲಂ ಏನು ಇದೆ ಇದು ಭಹಳ ಮುಖ್ಯವಾದುದು. ಒಂದು ಪಂಚಾಯಿತಿಗೆ ಎಷ್ಟು ಹಣ ಬರುತ್ತದೆ? ಎಂಬುದು ಬಹಳ ಮುಖ್ಯವಾದುದು. ಒಂದು ಪಂಚಾಯಿತಿಗೆ 10 ಸಾವಿರ ಜನಸಂಖ್ಯೆ ಇರಬೇಕೆಂದು ಮಾಡುತ್ತಿದ್ದೀರಿ. ಈಗ ಈ ಗ್ರಾಮ ಪಂಚಾಯಿತಿಗೆ ಒಬ್ಬ ಅಧಿಕಾರಿ ಬಂದರೆ ಅವನ ಸಂಬಳವನ್ನೂ ನೀವೇ ಕೊಡಬೇಕೆಂದು ಹೇಳುತ್ತಿದ್ದೀರಿ. ಅವನಿಗೆ ಅಷ್ಟೊಂದು ಸಂಬಳವನ್ನು ಕೊಡುವುದಕ್ಕೆ ಈ ಗ್ರಾಮ ಪಂಚಾಯತಿಗೆ ಅಷ್ಟೇ ವರಮಾನ ಇರಬೇಕಲ್ಲವೇ?

3-00 p. m.

ಪ್ಲಾನಿಂಗ್ ಮಾಡುವಾಗ ಕೊಡುತ್ತೇವೆಂದು ಹೇಳಿದ್ದೀರಿ. ಏನು ಗ್ಯಾರಂಟಿ. ಮಾನ್ಯ ಅಬ್ದುಲ್ ನಜೀರ್ ಸಾಬ್‌ರವರೇ ಈ ಖಾತೆಯಲ್ಲಿ ಸಾಯುವವರೆಗೆ ಇರುತ್ತಾರೆಂದು ಏನು ಗ್ಯಾರಂಟಿ ಇರುತ್ತದೆ. ನನ್ನಂಥ ಒಬ್ಬ ಮಂತ್ರಿ ಬರುತ್ತಾನೆ ಇದಕ್ಕೆ ಹಣ ಇಲ್ಲವೆಂದು ಹೇಳುತ್ತಾನೆ. ಈರೀತಿ ಹೇಳಶಕ್ಕಂಥ ಕಾಲ ಬಂದಿದೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಒಂದು ಕಾನೂನನ್ನು ಮಾಡಿದರೆ ಅಮೆಂಡ್‌ಮೆಂಟ್ ಮಾಡಿ ತೆಗೆಯಬಹುದೇ ಹೊರತು ಹಾಗೆಯೇ ಏನು ಮಾಡುವುದಕ್ಕೆ ಆಗುವುದಿಲ್ಲ. ಕಾನೂನು ಇರುವವರೆಗೆ ನಾನು ಇದ್ದರೂ ಕೊಡಬೇಕಾಗುತ್ತದೆ; ಯಾರೇ ಇದ್ದರೂ ಕೂಡ ಹಣ ಕೊಡಬೇಕಾಗುತ್ತದೆ. ನಾನೇ ಮಂತ್ರಿಯಾಗಿ ಯಾವಾಗಲೂ ಇರುವುದಕ್ಕೆ ಸಾಧ್ಯವಿಲ್ಲ. ಆದರೆ ಕಾನೂನು ಇರುವ ತನಕ ಹಣ ಕೊಡಬೇಕೆಂದಿದ್ದರೆ, ಕೊಡಬೇಕಾಗುತ್ತದೆ.

ಶ್ರೀ ಕೆ. ಎಚ್. ರಂಗನಾಥ್.—ನಾನು ಹೇಳುವುದೇನೆಂದರೆ ನೇರವಾಗಿ ಇದರಲ್ಲಿ ಅದನ್ನು ಹೇಳಿದ್ದರೆ ಚೆನ್ನಾಗಿರುತ್ತಿತ್ತು. ಮತ್ತೆ ಮುಂದೆ ಕೆಲವು ಕಲಮುಗಳು ಇವೆ. ಚುನಾವಣೆ ಮಾಡುತ್ತೀರಿ ಪ್ರಧಾನಿ, ಉಪಪ್ರಧಾನಿ ಎಂದು. ಅವರಿಗೆ ಸಂಬಳ ಕೊಡತಕ್ಕಂಥ ವ್ಯವಸ್ಥೆ ಇದರಲ್ಲಿ ಎಲ್ಲಿಯೂ ತೋರಿಸಿಲ್ಲ. ನನ್ನ ಕಣ್ಣಿಗೆ ಎಲ್ಲಿಯೂ ಅದು ಕಾಣಿಸಲಿಲ್ಲ. ಎಷ್ಟು ಕೊಡುತ್ತೀರಿ? ಏನು ಇನ್ನೂರು, ಮೂನ್ನೂರು ರೂಪಾಯಿಗಳನ್ನು ಕೊಡುತ್ತೀರಾ? ಏತಕ್ಕೆಂದರೆ ಅವರು ಅಧ್ಯಕ್ಷಗಿರಿ ಮಾಡುತ್ತಿರುತ್ತಾರಲ್ಲ ಅದಕ್ಕೆ ಕಷ್ಟಪಟ್ಟು, ಹತ್ತು ಸಾವಿರ ಪ್ರಜಾಸಂಖ್ಯೆಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳತಕ್ಕಂಥ ಜವಾಬ್ದಾರಿ ಅವರದು ಇರುತ್ತದಲ್ಲವೇ? ಅದಕ್ಕೆ ಅವರಿಗೆ ಸಂಭಾವನೆ ಕೊಡತಕ್ಕಂಥದ್ದರ ಬಗ್ಗೆ ಯೋಚನೆ ಮಾಡಬೇಕೆಂದು ಹೇಳುತ್ತೇನೆ ಏತಕ್ಕೆಂದರೆ ಜಿಲ್ಲಾ ಪರಿಷತ್ತಿಗಾದರೆ ಮಂತ್ರಿಗಳು ಹೋಗತಕ್ಕಂಥ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಿರುತ್ತೀರಿ. ಆದ್ದರಿಂದ ನನ್ನ ಸಲಹೆ ಏನೆಂದರೆ 114ನೇ ಕಲಮ್ ಕೆಳಗೆ ಇವರಿಗೂ ಒಂದು ನಿಗದಿಯಾದಂಥ, ಒಂದು ಗೊತ್ತಾದಂಥ ವರಮಾನದಿಂದ ಸಂಬಳ ಕೊಡತಕ್ಕಂಥ ಒಂದು ವ್ಯವಸ್ಥೆಯಾಗಬೇಕು. ಕನ್‌ಸಾಲಿಡೇಟೆಡ್ ಫೈನಾನ್ಸ್ ಎಂದು 210ರ ಕೆಳಗೆ ಯಾವ ರೀತಿ ನಿಖರವಾಗಿ ಬರತಕ್ಕಂಥದ್ದು ಇರುತ್ತದೆ, ಆ ರೀತಿಯಾಗಿ ಮಾಡಬೇಕು. ನಮ್ಮ ಸ್ಟೇಟ್ ಬಡ್ಜೆಟ್‌ನಲ್ಲಿ ಚಾರ್ಜ್ಡ್ ಎಂದು ಅಧಿಕಾರಿಗಳಿಗೆ ಸಂಬಳ ಹೇಗೆ ಬರುತ್ತದೆ, ರಾಜ್ಯ ಪಾಪರ್ ಆದರೂ ಕೂಡ ಸಂಬಳ ಚಾರ್ಜ್ಡ್ ಐಟಮ್ ಎಂದು ಬರುತ್ತದೆ, ಹಾಗೆ ಒಂದು ನಿಖರವಾಗಿ ಬರತಕ್ಕಂಥ ವ್ಯವಸ್ಥೆಯನ್ನು ಇವರಿಗೆ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಏತಕ್ಕೆಂದರೆ ಸಾಧಾರಣವಾಗಿ ಅವರಿಗೆ ಇಂಥಿಂಥ ಕೆಲಸ ಮಾಡಬೇಕೆಂದು ಏನು ಹೊರೆಯನ್ನು ಹೊರಿಸುತ್ತೀರಿ ಅದಕ್ಕೆ ಈ ಸಂಬಳ ಕೊಡತಕ್ಕದ್ದು ಅನುಕೂಲವಾಗುತ್ತಿತ್ತು ಎಂದು ಹೇಳತಕ್ಕಂಥದ್ದು ನನ್ನ ವಿಚಾರವಾಗಿದೆ. "The pattern of assistance from the Government to the Zilla Parishad; (b) the principles which should govern the grants-in-aid from Government to the Zilla Parishad; (c) the date from which the grants-in-aid or assistance is to be given effect to; and (d) any other matter referred to the commission by the Government in the interests of sound finances and efficient functioning of the Zilla Parishad." 210 ರಲ್ಲಿ ಫೈನಾನ್ಸ್ ಕಮಿಷನ್ ಏನು ಇರುತ್ತದೆ ಅದನ್ನು ಬಿಟ್ಟು ಹೋಗಲಿಕ್ಕೆ ಸಾಧ್ಯವೇ ಇಲ್ಲ. ನನ್ನ ಅಭಿಪ್ರಾಯವೇನೆಂದರೆ ಇದಕ್ಕೆ 114 ಕಲಮ್‌ನಲ್ಲಿ ನಿಖರವಾಗಿ ಇದು ಕನ್‌ಸಾಲಿಡೇಟ್ ಫಂಡ್ ಎಂದು ಇಷ್ಟು ಹಣವೆಂದು ತೆಗೆದಿರಿಸಬೇಕೆಂದು ಹೇಳುತ್ತೇನೆ.

ಶ್ರೀ ಅಬ್ದುಲ್‌ನಜೀರ್‌ಸಾಬ್.—ಅದನ್ನು ಪರ್ ಕ್ಯಾಪಿಟಾ ಎಂದು ಕೊಡುತ್ತಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ್.— ನನ್ನ ದೃಷ್ಟಿಯಲ್ಲಿ ಪರ್ ಕ್ಯಾಪಿಟಾ ಎಂದು ಕೊಟ್ಟರೆ ಸಾಲುವುದಿಲ್ಲವೆಂದು ಹೇಳುತ್ತೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಪರ್ ಕ್ಯಾಪಿಟಾ ಸಾಲುವುದಿಲ್ಲವೆಂದು ತಾತ್ಕಾಲಿಕವಾಗಿ ಒಪ್ಪುವುದಾದರೆ 20 ವರ್ಷಗಳಿಂದ ನಾವು ಇದನ್ನು ಕೇಳುತ್ತಿದ್ದೇವೆ. ನಮ್ಮದು ಸೆಕ್ಯೂಲರ್ ರಾಷ್ಟ್ರವಾಗಿದ್ದು ಒಟ್ಟು ರಾಷ್ಟ್ರದ ಉತ್ಪತ್ತಿಯಲ್ಲಿ 25 ರಷ್ಟು ಕೊಡಬೇಕೆಂದು ಸೈದ್ಧಾಂತಿಕವಾಗಿ ನಾವು ಹೋರಾಟ ಮಾಡುತ್ತಿದ್ದೇವೆ. ನಾವು ಇಲ್ಲಿ ಮಾಡಿರತಕ್ಕಂಥ ಸೀಮಿತವಾದ ಶಾಸನ, ಕರ್ನಾಟಕಕ್ಕೆಮಾತ್ರ ಸೀಮಿತವಾಗಿದೆ. ಬಹುಶ: ಇಡೀ ರಾಷ್ಟ್ರದಲ್ಲಿ ಯಾವ ಪಂಚಾಯತಿಗೂ ಸಿಕ್ಕದಂಥ ಸವಲತ್ತುಗಳನ್ನು ಅಂದರೆ ಸಿಬ್ಬಂದಿ ಸವಲತ್ತು ಮತ್ತಿತರ ಎಲ್ಲಾ ಸವಲತ್ತುಗಳನ್ನೂ ಇಲ್ಲಿ ನಾವು ಅಳವಡಿಸಿದ್ದೇವೆ ಹತ್ತರಷ್ಟು ಕೊಡತಕ್ಕಂಥದ್ದು ಅದು ಬೇರೆ. ಇವೊತ್ತು ಒಂದು ತಾಲ್ಲೂಕಿಗೆ ಒಂದು ಲಕ್ಷ ತಮ್ಮದೇ ಆದ ರಿಸೋರ್ಸಸ್ ಕೊಡತಕ್ಕಂಥದ್ದು ಇರುತ್ತದೆ. ಯೋಜನೆಯಲ್ಲಿ ಬರತಕ್ಕಂಥ ಸ್ಟೇಟ್ ಆಗ್ರಿಕಲ್ಚ್

ಪ್ಲಾನ್‌ನಲ್ಲಿ ಏನು ಹಣವನ್ನು ಕೊಡುತ್ತೇವೆ, ಅದು ಎಲ್ಲಿ ಹೋಗುತ್ತದೆ? That is also there. whatever non-developmental budgeted amount is there it will go to the districts as soon as the Budget Session is over.

ರಸ್ತೆಗಳಿಗೆ ಇಟ್ಟಿರತಕ್ಕಂಥ ಹಣ ಎಲ್ಲಾ ಹೋಗಬೇಕಾಗುತ್ತದೆ. ಆಯವ್ಯಯ ಹಣ ಏನು ಇದೆ ಅದು ಆಯಾ ಕ್ಷೇತ್ರಕ್ಕೆ ಹೋಗಬೇಕಾಗುತ್ತದೆ. ಸ್ಟೇಟ್ ಕನ್‌ಸಾಲಿಡೇಟಡ್ ಫಂಡ್‌ನಿಂದ ಹೋಗತಕ್ಕಂಥದ್ದು ಅಷ್ಟೇ ಅಲ್ಲದೆ ಮೂರುವರೆ ಕೋಟಿ, ಸುಮಾರು 20—30 ವರ್ಷಗಳಿಂದ ಖರ್ಚು ಮಾಡಲಿಕ್ಕೆ ತಮ್ಮದೇ ಆದ ಹಣ, ತೆರಿಗೆ ಇಲ್ಲದೆ, ಸರ್ಕಾರಕ್ಕೆ ಬರತಕ್ಕಂಥ ಹಣ, ಜೊತೆಗೆ ಆಯವ್ಯಯ ಪಟ್ಟಿಯಲ್ಲಿ ಕೊಡತಕ್ಕಂಥ ಹಣ ಇದೆಲ್ಲವನ್ನು ಖರ್ಚು ಮಾಡಲು ಅವರಿಗೆ ಅವಕಾಶವಿರುತ್ತದೆ.

ಶ್ರೀ ಕೆ. ಎಚ್. ರಂಗನಾಥ್.—ತಾವು ಹೇಳುವುದು ಕನ್ನಡಿ ಒಳಗಿನ ಗಂಟು. ಇರಲಿ, 25 ಪರ್ಸೆಂಟ್ ತಾವು ಕೊಡತಕ್ಕಂಥ ಹಣ, 25 ಪರ್ಸೆಂಟ್ ಕನ್‌ಸಾಲಿಡೇಟ್ ಫಂಡ್‌ನಿಂದ, ಎಲ್ಲಾ ಜಿಲ್ಲಾ ಪರಿಷತ್ತಿಗೆ ಹೋಗುತ್ತದೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—If you calculate, it will be more than 40%.

Sri K.H. Ranganath.—I don't think, Sir, the hon. Minister will be permitted to do that by the bureaucrats. They are not that much weak.

Sri Abdul Najirsab.—Let him show how it is going to weaken. I will welcome it. Even today I am telling it.

ಶ್ರೀ ಕೆ. ಎಚ್. ರಂಗನಾಥ್.—ನನಗೆ ಅರ್ಥವಾದದ್ದನ್ನು ನಾನು ಹೇಳುತ್ತೇನೆ. ತಮಗೆ ಅರ್ಥವಾದದ್ದನ್ನು ತಾವು ಹೇಳಿದರೆ ತದನಂತರ ನಾವು ಒಂದು ಅಭಿಪ್ರಾಯಕ್ಕೆ ಬರಬಹುದು. ನಾನು ಹೇಳುವುದೇನೆಂದರೆ ಮಾನ್ಯ ಮಂತ್ರಿಗಳು ಬಹಳ ಆಸಕ್ತಿಯಿಂದ ಅಭ್ಯಾಸ ಮಾಡಿರತಕ್ಕಂಥದ್ದು ಅವರ ಪಕ್ಷಕ್ಕೂ ತಿಳಿದಿರುವಂತೆ ಎನ್ನುವುದು ವಿಚಾರ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸಚಿವರು ನಮ್ಮ ಸರ್ಕಾರದ ಪರವಾಗಿ ತಂದಿದ್ದಾರೆ. ಸಭೆಯ ಮುಂದೆ ಚರ್ಚೆ ನಡೆಯುತ್ತಿದೆ. ಏಕಾಏಕಿ ತಂದಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ತಾವು ಜ್ಞಾನ ಮಗ್ನರಾಗಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೆ.

ಶ್ರೀ ಎ. ಲಕ್ಷ್ಮೀಸಾಗರ್.—ಇಲ್ಲ ನಾನು ಏಕಾಗ್ರತೆಯಿಂದ, ಕೇಳುತ್ತಿದ್ದೆ.

ಶ್ರೀ ಕೆ. ಎಚ್. ರಂಗನಾಥ್.—ಇಲ್ಲ, ಮಾನ್ಯ ಸಚಿವರು ದೈವಾಂಶಕ್ಕೆ ಹೋಗಿದ್ದರು ಎಂದು ಕಾಣುತ್ತದೆ.

ಶ್ರೀ ಪಿ. ರಾಮದೇವ್.—ಅದರ ಬಗ್ಗೆ ಚಿಂತನೆ ಮಾಡುತ್ತಿದ್ದರು.

ಶ್ರೀ ಕೆ. ಎಚ್. ರಂಗನಾಥ್.—ಆಕಡೆ ಈ ಕಡೆ ನೋಡಿ ಮನಸ್ಸು ಚಂಚಲವಾಗಿದೆಯೋ, ಅಥವಾ ನಾನು ಹೇಳಿದ್ದನ್ನು ತಾವು ಒಂದೇ ಮನಸ್ಸಿನಿಂದ ಕೇಳುತ್ತಿದ್ದಿರೇ?

ಶ್ರೀ ಎ. ಲಕ್ಷ್ಮೀಸಾಗರ್.—ಒಂದೇ ಮನಸ್ಸಿನಿಂದ ಕೇಳುತ್ತಿದ್ದೇನೆ.

ಶ್ರೀ ಕೆ. ಎಚ್. ರಂಗನಾಥ್.—ಆಗಬಹುದು. ಅಂದರೆ ಮನಸ್ಸು ಒಂದೇ ಇದೆಯೋ ಅಥವಾ ಮೂರು ನಾಲ್ಕು ಇದೆಯೋ? ಎಷ್ಟು ಇದೆ?

ಶ್ರೀ ಎ. ಲಕ್ಷ್ಮೀಸಾಗರ್.—ನಾನು ತಿಳಿದುಕೊಂಡಿರುವುದು ಒಂದೇ.

ಶ್ರೀ ಕೆ. ಎಚ್. ರಂಗನಾಥ್.—ಹಾಗಿದ್ದರೆ, ಸರಿ. ಇನ್ನು ಇದಕ್ಕೆ ಹೆಚ್ಚಿನ ಹಣವನ್ನು, ನಿಗದಿಯಾದ ಹಣವನ್ನು ಕೊಡತಕ್ಕಂಥ ವ್ಯವಸ್ಥೆಯಾಗಬೇಕೆಂದು ಹೇಳುತ್ತೇನೆ. ಏತಕ್ಕೆಂದರೆ ಅವರ ಕಾರ್ಯವ್ಯಾಪ್ತಿ ಬಹಳ ದೊಡ್ಡದಾಗಿರುತ್ತದೆ. ಕಾರ್ಯವ್ಯಾಪ್ತಿಗೆ ತಕ್ಕಂಥ ಸಂಬಳ ಇರಬೇಕು. ಅದೇ ಅನುಮಾನವಾಗಿದೆ ಎಷ್ಟರಮಟ್ಟಿಗೆ ಸಂಬಳ ಇರತಕ್ಕಂಥದ್ದು, ಸಿಬ್ಬಂದಿ ಸಹಾಯ ಮಾಡುವುದು ಎಷ್ಟು, ಮಂಡಳ ಪಂಚಾಯಿತಿಗೆ ಎಷ್ಟು ಸಿಬ್ಬಂದಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ, ಇದೆಲ್ಲಾ ನಮಗೆ ಅನುಮಾನಕ್ಕೆ ಆಸ್ಪದವಾಗುತ್ತದೆ. ಆದ್ದರಿಂದ ನಾನು ಹೇಳುವುದು ಇದರ ಬಗ್ಗೆ ಕೂಲಂಕುಶವಾಗಿ ವಿಚಾರ ಮಾಡುವುದಕ್ಕೆ ಪ್ರಯತ್ನ ನಡೆದಿಲ್ಲ. ನಿಮ್ಮ ಪಕ್ಷದಲ್ಲಿ ನಡೆದಿಲ್ಲ, ಮಂತ್ರಿ ಮಂಡಲದಲ್ಲಿ ನಡೆದಿರಬಹುದು, ಆದರೆ ಪಕ್ಷದಲ್ಲಿ ನಡೆದಿಲ್ಲವೆನ್ನುವ ಮಾತನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

Sri Abdul Najir Sab.—Our party has devoted more than 17 days for this bill.

ಶ್ರೀ ಕೆ. ಎಚ್. ರಂಗನಾಥ್.—ನನಗೆ ಗೊತ್ತಾಗಲಿಲ್ಲ ನಿಮ್ಮಲ್ಲಿ 17 ದಿವಸ ಚರ್ಚೆಯಾಗಿರ ಶಕ್ಕಂಥದ್ದು ಸ್ವಾಮಿ ಇನ್ನು 25–30 ಮಹಿಳೆಯರಿಗೆ ರಿಸರ್ವೇಷನ್ ಮಾಡಿದ್ದೀರಿ. ಮತ್ತೆ ಅಲ್ಪ ಸಂಖ್ಯಾತರಿಗೆ ರಿಸರ್ವೇಷನ್ ಮಾಡಿದ್ದೀರಿ, ಬ್ಯಾಕ್‌ವರ್ಡ್ ಕ್ಲಾಸ್ ನಾಮಕರಣ ಮಾಡಬೇಕೆಂದು ಹೇಳಿ ರುತ್ತೀರಿ. ಚುನಾಯಿತ ಸಂಸ್ಥೆಗಳಿಗೆ ನಾಮಕರಣದ ಪ್ರಶ್ನೆಯೇ ಬರುವುದಿಲ್ಲ. ಏತಕ್ಕೆ ಇದನ್ನು ತಂದಿದ್ದೀರಿ? ಎರಡು ಸ್ಥಾನಗಳಿಗೂ ಚುನಾವಣೆಯ ವ್ಯವಸ್ಥೆಯನ್ನು ಏತಕ್ಕೆ ಮಾಡಬಾರದು? ಈ ಕಲಮ್‌ನಲ್ಲಿ ಏತಕ್ಕೆ ಇದನ್ನು ಸೇರಿಸಿಲ್ಲ ಎನ್ನುವ ಮಾತನ್ನು ಹೇಳಲಿಕ್ಕೆ ನಾನು ಪ್ರಯತ್ನಪಡುತ್ತೇನೆ

ಇನ್ನು ಕಲಂ 61ರ ಸಬ್‌ಕ್ಲಾಸ್ 2 ರಲ್ಲಿ ಈ ರೀತಿ ಹೇಳಿದ್ದೀರಿ.--

"The Pradhana may, if in his opinion the immediate execution of auy work or the doing of any act which requires the sanction of a committee or of the Mandal Panchayat, is necessary in public interest convene a meeting for the purpose with a notice of 24 hours."

ಇದು ಸಾಧ್ಯವೇ? ಇದು ಆಗುತ್ತದೆಯೇ? ಇದಕ್ಕೆ ತಾವೇ ಉತ್ತರ ಕೊಡಬೇಕು, ಅದಕ್ಕೇ ನಾನು ಇಂಥಾದ್ದನ್ನೆಲ್ಲಾ ಮತ್ತೊಮ್ಮೆ ವಿಚಾರ ಮಾಡಿ ಎಂದು ಹೇಳಿದುದ್ದು. ಸಾಧ್ಯವಾಗದಿರುವಂತಹ ಕೆಲವು ಕಲಂಗಳು ಇದರಲ್ಲಿವೆ. ತಕ್ಷಣವೇ ತೀರ್ಮಾನ ಕೈಕೊಳ್ಳುವ ಸಲುವಕಿಗಿ ಕೂಡಲೇ ಮೀಟಿಂಗ್ ಕರೆಯ ಬೇಕಾಗಿ ಬರುತ್ತದೆ. ಆದರೆ 24 ಗಂಟೆಗಳೊಳಗಾಗಿ ಯಾರೂ ಸಿಗದಿದ್ದರೆ ಏನು ಮಾಡುವುದು? ಇಂತಹ ಸಂದರ್ಭದಲ್ಲಿ ಇದನ್ನು ದುರುಪಯೋಗಪಡಿಸಿಕೊಳ್ಳುವುದಕ್ಕೂ ಅವಕಾಶವಿದೆ. ಆದ್ದರಿಂದ ಇದರ ಕಡೆಗೆ ಮಾನ್ಯ ಮಂತ್ರಿಗಳು ಗಮನಹರಿಸಬೇಕೆಂದು ಹೇಳುತ್ತೇನೆ

ಇನ್ನು ಇದರಲ್ಲಿ ಪ್ರೊಡಕ್ಷನ್ ಕಮಿಟಿ ಬಗ್ಗೆ, ಸೋಸಿಯಲ್ ಜಸ್ಟೀಸ್ ಕಮಿಟಿ ಬಗ್ಗೆ ಹೇಳಿದ್ದೀರಿ. ಕ್ಲಾಸ್ 60ರ ಸಬ್-ಕ್ಲಾಸ್ (ಎ) ಮತ್ತು (ಬಿ)ನಲ್ಲಿ Promotion of educational, economic, social, cultural ಬಗ್ಗೆ ಹೇಳಿದ್ದೀರಿ. ಇವರ ಮೇಲೆ ನೀವು ಇಷ್ಟೊಂದು ದೊಡ್ಡ ಹೊಣೆಯನ್ನು ಹೊರಿಸುತ್ತಿರುವಾಗ ಅವರಿಗೆ ಹಣ ಕೂಡ ಬಹಳವಾಗಿ ಬೇಕಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಕಡೆಗೆ ಗಮನ ಕೊಡಬೇಕೆಂದು ಹೇಳುತ್ತೇನೆ. Protection of such castes and classes from social injustice and any form of exploitation. ಎಂದು ಇಲ್ಲಿ ಹೇಳಿದ್ದೀರಿ. ಈ ಬಗ್ಗೆ ನನಗೆ ಸ್ವಲ್ಪ ಅನುಮಾನ ಬಂದಿದೆ. ಏಕೆಂದರೆ, ತುಳಿತಕ್ಕೆ ಒಳಗಾ ದವರ ಕೈಯಲ್ಲಿ ಅಧಿಕಾರ ಕೊಡುತ್ತೇವೆಂದು ಹೇಳುತ್ತೀರಿ. ಆದರೆ ಹಳ್ಳಿಗಳಲ್ಲಿರುವಂತಹ ವಸ್ತುಸ್ಥಿತಿ ಯನ್ನು ನೀವೇ ನೋಡಿದ್ದೀರಿ. ಈ ಜನರ ಯೋಗಕ್ಷೇಮ ನೋಡಿಕೊಳ್ಳುವ ಸಲುವಾಗಿ ಅಂದರೆ ಮಹಿಳೆಯರ ಮತ್ತು ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುವ ಸಲುವಾಗಿಯೇ ಪ್ರತ್ಯೇಕವಾದಂಥ ಡೈರೆಕ್ಟರೇಟ್ ಇದೆ. ಆದರೆ ಇದರ ಮೂಲಕ ಏನು ಕೆಲಸಗಳಾಗುತ್ತಿವೆ ಎಂಬುದನ್ನು ನಾವು ನೋಡ ಬೇಕಾಗಿದೆ. ನಮ್ಮ ಭಾಗಕ್ಕೆ ಅಂಗನವಾಡಿ ಮಂಜೂರಾಗಿ ಒಂದು ವರ್ಷವಾಯಿತು. ಆದರೆ ಇನ್ನೂ ಅದಕ್ಕೆ ಸಿಬ್ಬಂದಿ ನೇಮಕವಾಗಿಲ್ಲ, ಕಟ್ಟಡ ಒದಗಿಸುವಂತಹ ಕೆಲಸವಾಗಿಲ್ಲ, ಹೀಗಿರುವಾಗ ನಿಮ್ಮ ವರ್ಗ ದವರನ್ನು, ಹಿಂದುಳಿದಂಥ ಜನರನ್ನು ಯಾವ ಜನ ಶೋಷಣೆ ಮಾಡುತ್ತಾರೋ, ಅಂತಹವರ ಕೈಗೆ ಅಧಿ ಕಾರ ಕೊಡುತ್ತೇವೆಂದು ಹೇಳುತ್ತೀರಿ. ಇದನ್ನು ಸ್ವಲ್ಪ ಪುನರ್ ಪರಿಶೀಲನೆ ಮಾಡಬೇಕೆಂದು ಹೇಳು ತ್ತೇನೆ. ಮುಂದೆ ಈ ರೀತಿ ಹೇಳಿದ್ದೀರಿ.—Securing social justice to the Scheduled Castes and Scheduled Tribes, Women and other weaker sections of the society. ಇತ್ತೀಚೆಗೆ ರಾಜಾಸ್ಥಾನದಲ್ಲಿ ಯು. ಜಿ. ಸಿ. ನವರು ಒಂದು ಸೆಮಿನಾರನ್ನು ಏರ್ಪಡಿಸಿ ದ್ದರು. ಆ ಸೆಮಿನಾರ್‌ನಲ್ಲಿ ಮಾತನಾಡಿದಂಥ ಲೇಖಕರು ಇದೇ ವಿಚಾರವನ್ನು ಪ್ರಸ್ತಾಪ ಮಾಡಿ ದ್ದಾರೆ. ಈ ಬಗ್ಗೆ ಹೊರತಂದಿರುವ ಪುಸ್ತಕವನ್ನು ತಾವು ಸಹ ನೋಡಿರಬಹುದು. ಸರ್ಕಾರದ ಆಡಳಿತ ಯಂತ್ರಕ್ಕೆ ಯಾವ ರೀತಿ ಖರ್ಚಾಗುತ್ತಿದೆ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಹಣ ಯಾವರೀತಿ ಖರ್ಚಾ ಗುತ್ತಿದೆ ಎಂಬುದನ್ನು ಇದರಲ್ಲಿ ಪ್ರಸ್ತಾಪ ಮಾಡಿದ್ದಾರೆ. ಗ್ರಾಮ ಪಂಚಾಯಿತಿಗಳಲ್ಲಿಯೂ ಸಹ ಮೊದಲು ಆಡಳಿತ ಯಂತ್ರಕ್ಕೆ ಮೂವತ್ತು ಪರ್ಸೆಂಟ್‌ವರೆಗೆ ಹಣ ಖರ್ಚು ಮಾಡುತ್ತಿದ್ದರೆ ಇತ್ತೀಚೆಗೆ 70–75 ಪರ್ಸೆಂಟ್‌ವರೆಗೆ ಹೋಗಿರುವುದರಿಂದ ಅಲ್ಲಿನ ಅಭಿವೃದ್ಧಿ ಕಾರ್ಯಗಳಿಗೆ ಉಳಿದಿರುವುದು ಕೇವಲ 6–7 ಪರ್ಸೆಂಟ್ ಮಾತ್ರ ಎಂದು ಇದರಲ್ಲಿ ಹೇಳಿದ್ದಾರೆ. ಇಂತಹ ಒಂದು ಪರಿಸ್ಥಿತಿ ಇಲ್ಲಿಯೂ ಬರಬಹುದು. ಆದ್ದರಿಂದ ಇಂತಹ ನತದೃಷ್ಟ ಜನರ ಹೊಣೆಯನ್ನು ಸರ್ಕಾರವೇ ನೇರವಾಗಿ ನೋಡಿ ಕೊಳ್ಳುವುದು ಒಳ್ಳೆಯದೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಮಂಡಲ್ ಪಂಚಾಯತ್‌ಗಳ ಮೇಲೆ ಜಿಲ್ಲಾ ಪರಿಷತ್ತುಗಳನ್ನು ರಾಜರನ್ನಾಗಿ ಏತಕೆ ಕೂರಿಸಿದ್ದೀರಿ? ಈ ಬಗ್ಗೆ ಸ್ವಲ್ಪ ಅನುಮಾನ ಬರುವುದಕ್ಕೆ ನನಗೆ ಇದು ಅವಕಾಶ ಮಾಡಿಕೊಟ್ಟಿದ್ದೆ ಮಿಸಲೇನಿಯಸ್ ಪ್ರಾವಿಜನ್ಸ್ ಕ್ಲಾಸ್ 268 ರಿಂದ ಪ್ರಾರಂಭವಾಗುತ್ತದೆ. ಜಿಲ್ಲಾ ಪರಿಷತ್‌ಗಳಿ.

ಬಹಳಷ್ಟು ಅಧಿಕಾರಗಳನ್ನು ಕೊಟ್ಟಿದ್ದೀರಿ. ಮಂಡಲ' ಪಂಚಾಯತ್‌ಗಳನ್ನು ಜಿಲ್ಲಾ ಪರಿಷತ್‌ಗಳ ಅಧೀನ ಸಂಸ್ಥೆಗಳನ್ನಾಗಿ ಮಾಡಲು ಕಾರಣವೇನು? ಕಲಂ 269 ರಲ್ಲಿ ಈ ರೀತಿ ಹೇಳಿದ್ದೀರಿ.—

"The Zilla Parishad may in respect of Mandal Panchayats exercise the following powers :

(a) call for proceedings of any Mandal Panchayat or any extract or any book or document in possession of or under the control of Mandal Panchayat or any return or statement of account or report;

(b) require a Mandal Panchayat to take into consideration any objection which appears to it to exist to the doing of anything which is about to be done or is being done by such Mandal Panchayat or any information which appears to it to necessitate the doing of anything by such Mandal Panchayat within such period as it might fix."

ಹೀಗೆಲ್ಲಾ ಹೇಳಿದ್ದಾರೆ. ಈ ಮಂಡಲ್ ಪಂಚಾಯತ್‌ಗಳ ಒಂದು ಅಂಗ ಸಂಸ್ಥೆಯಾಗಿ ಕೆಲಸ ಮಾಡುವಂತೆ ಮಾಡಿದ್ದೀರಿ. ಈ ರೀತಿ ಮಾಡಿರುವಾಗ ಅಧಿಕಾರ ವಿಕೇಂದ್ರೀಕರಣ ಮಾಡಿದ್ದೆವೆಂದು ಯಾವರೀತಿಹೇಳುತ್ತೀರಿ.

Sri Abdul Nazir Sab.—The question of decentroliastion does not mean that we should not exercise control. This is the authority and that authority is delcgated. But at the same time there should be power of control. This is the Law of the Government and we cannot change that. After all, the whole planning process is with the Zilla Parishad.

Sri K. H. Ranganath.—That is way I said the bureaucrats have hold over you. What they could have done, they got it done through you. Under Section 271, they go even to the extent of dissolving the elected body. Don't you think there is lot of scope for abuse of power ?

ಶ್ರೀ ಅಬ್ದುಲ್ ನಜೀರ್‌ಸಾಬ್,—ಅದಕ್ಕೆ ಕಾರಣಗಳನ್ನು ಕೊಟ್ಟಿದ್ದೇವೆ.

ಶ್ರೀ ಕೆ, ಎಚ್. ರಂಗನಾಥ್.—ಕಲಂ 271 (1)ನ್ನು ತಮಗೆ ಓದಿ ಹೇಳುತ್ತೇನೆ.

"If, in the opinion of the Zilla Parishad, a Mandal Panchayat exceeds or abuses its powers or is not competent to perform or makes persistent default in the performance of the duties imposed on it under this Act or any other law for the time being in force or fails to levy a tax under section 116 or refuses th carry ot any of the directions of the Zilla Parishad under this Act, the Zilla Purishad may by order publishd in the official gazette dissolve such Mandal Panchayat."

ಇದು ಯಾವ ರೀತಿ ಆಗುತ್ತದೆಂದರೆ, ಸಹಕಾರ ಸಂಘಗಳನ್ನು ಸೂಪರ್‌ಸೀಡ್ ಮಾಡುವುದಕ್ಕೆ ಯಾವ ರೀತಿ ಅವಕಾಶ ಇದೆಯೋ ಅದೇರೀತಿ ಈ ಕಲಂನ್ನು ಬಳಸುವುದಕ್ಕೆ ಇಲ್ಲಿ ವ್ಯವಸ್ಥೆ ಮಾಡಿದ್ದಾರೆ. ಈ ಮಂಡಲ್ ಪಂಚಾಯತ್‌ಗಳು ಸ್ವಾಯತ್ತ ಸಂಸ್ಥೆಗಳೆಂದು ಅವುಗಳ ಹಣೆಬರಹವನ್ನು ಅವೇ ಬರೆದು ಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದೇವೆಂದು ತಾವು ಯಾವ ರೀತಿ ಹೇಳುತ್ತೀರಿ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಅಧ್ಯಕ್ಷರೇ ಸರ್ವಸ್ವತಂತ್ರ ಸಂಸ್ಥೆಗಳು ಅಲ್ಲ. ಮತ್ತೆ ಮಂಡಲ್ ಪಂಚಾಯಿತ್ ತನ್ನದೇ ಆದ ಕೆಲವು ಕಾನೂನುಗಳನ್ನು ಮಾಡಿಕೊಳ್ಳಬಹುದು.

Shall I give it to the Deputy Commissioner ?

ಆದರೆ ಅವರಿಗೆ ಇರತಕ್ಕಂಥ ಅಧಿಕಾರವನ್ನು ಅವರು ಚಲಾವಣೆ ಮಾಡಬೇಕು.

It has not been taken over by the Government. I would have accepted the appreciation from the Hon. Member. Nowhere in this column or in the whole of Act it is provided that Government may

take over. In the country everywhere in every Act it is said that if they erruor go against the government they will be punished by the Government officers but not here. Here only the elected body supersedes, but not the officer. In every Act there is that provision.

Sri K. H. Ranganath.--So, shall we subject ourself to the control of the Lok Sabha ? Is that the scheme of the constitution ? I appreciate the Hon. Minister in Clause 210 where he has provided for the appointment of a Finance Commission for Zilla Parishad. I appreciate the Hon. Minister. But, now I cannot appreciate him in this clause.

Sri Abdul Nazir Sab.--Please Suggest me. Shall this be vested with the Deputy Commissioner ? I think you will exercise your mind on this clause. On this unique clause we ead discussions in the Select Committee for a very long time. ನಾವು ಅಧಿಕಾರವನ್ನು ಜನರ ಕೈಯಲ್ಲಿ ಕೊಡಬೇಕೆಂದು ಹೇಳಿ ಈ ಕಾನೂನುಗಳನ್ನು ತಂದಿದ್ದೇವೆ. ಇಡೀ ರಾಷ್ಟ್ರದಲ್ಲಿ ಜಿಲ್ಲಾ ಪರಿಷತ್‌ನ ಅಡಿಯಲ್ಲಿ ಎಲ್ಲಾ ಮಂಡಲ್ ಪಂಚಾಯಿತಿಗಳು ಬರಬೇಕಾಗುತ್ತದೆ.

Sri K. H. Ranganath.—I will substantiate my argument by placing a hypothetical proposition. ಸ್ವಾಮಿ ನಾವು ಇವೊತ್ತು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದ್ದೇವೆ. ಕೇಂದ್ರದಲ್ಲಿ ಒಂದು ಸರ್ಕಾರ ಬರಬಹುದು. ರಾಜ್ಯದಲ್ಲಿ ಮತ್ತೊಂದು ಪಕ್ಷದ ಸರ್ಕಾರ ಬರಬಹುದು. ಆದರರೆ ರಾಜ್ಯಾಂಗದಲ್ಲಿ ಒಂದು ಮಾತನ್ನು ಹೇಳಿದ್ದಾರೆ. However good a Constitution may be, it all depends upon thc people who work out the Constitution. The goodness and effectivness of the Constitution depends upon that.

Mr. Chairman.—What is the alternative ?

Sir K. H. Ranganath.—In Clause 270 (1) it is said :

"(1) If in the opinion of the Zilla Parishad, the execution of any order or resolution of a Mandal Panchayat or any order of any authority or officer of a Mandal Panchayat or the doing anything which is about to be done, or is being done, by or on behalf of a Mandal panchayat is unjust, unlawful or improper or is causing or is likely to cause injury or annoyance to the public or to lead to a breach of the peace, it may by order suspend the execution or prohibit the doing thereof." ಎಂದು ತಾವು ಹೇಳಿದ್ದೀರಿ. ಜಿಲ್ಲಾ ಪರಿಷತ್ತಿನಲ್ಲಿ ಒಂದು ಪಕ್ಷ ಆಡಳಿತ ನಡೆಸುತ್ತಿರುತ್ತದೆ. ಇಲ್ಲಿ ರಾಜಕೀಯ ಪಕ್ಷಗಳು ಯಾವುದಾದರೊಂದು ನೆಪ ಮಾಡಿಕೊಂಡು ರಾಜಕೀಯ ಮಾಡುವುದಕ್ಕೆ ಬರುವುದಿಲ್ಲವೇ ?

Sri Abdul Nazir Sab.--Can you suggest that instead of Zilla Parishad, shall we vest this power with an officer ? The Government officer is also there. He is controlled by another elected body of the Government.

ಶ್ರೀ ಕೆ. ಎಚ್. ರಂಗನಾಥ್.—ಸ್ವಾಮಿ ಇವತ್ತು ಲೋಕಸಭೆಯ ಸದಸ್ಯನಾಗಬೇಕಾದರೂ ಕೂಡ ನಾವು ಯಾವುದೇ ರೀತಿಯ ಒಂದು ವಿದ್ಯಾರ್ಹತೆಯನ್ನು ನಿಗದಿ ಮಾಡಿಲ್ಲ. ಓಡು ಮಾಡಬೇಕಾದರೆ 21 ವರ್ಷ ವಯಸ್ಸಾಗಿದ್ದರೆ ಸಾಕು. ಚುನಾವಣೆಗೆ ನಿಲ್ಲಬೇಕಾದರೆ 25 ವರ್ಷ ಸಾಕು. Knowingly we have chosen this type of government i.e., parliamentary type of government. The founding fathers of the Constitution have taken this responsibility in this country where more than 70% are illiterates. They have knowingly taken this decision. Who are

going to help us, advise us ? They are officers. The People are there. The Pradhan will be assisted by the Secretary. So also the Zilla Parishad will be assisted by the Secretary, the officer who is immediately in charge of it. Supposing it is proper, it is alright. ಇವರು ಏನಾದರೂ ರಾಜಕೀಯ ಮಾಡುವುದಕ್ಕೆ ಹೊರಟರೆ ನಿಮ್ಮ ಕಾನೂನು ಏನು ಮಾಡುತ್ತದೆ ? ಸ್ವಾಮಿ ಇವತ್ತು ಒಂದು ರಾಜ್ಯದ ರಾಜ್ಯ ಸರ್ಕಾರವನ್ನು ಬೇಕಾದರೆ ರಾಷ್ಟ್ರಪತಿಯವರು ವಜಾ ಮಾಡಬಹುದು.

Is he not going to read it according to his own ? ಕಾನೂನು ಪ್ರಕಾರ ಆಯ್ಕೆಯಾದ ಸಮಿತಿಗಳನ್ನು ರದ್ದು ಮಾಡುವುದಕ್ಕೆ ಇದರಲ್ಲಿ ಅವಕಾಶ ಇದೆ. ಆದ್ದರಿಂದ ನಾನು ಹೇಳುವುದೇನೆಂದರೆ ತಾವು ಇದರ ಬಗ್ಗೆ ಮರು ಚಿಂತನೆ ಮಾಡುವುದು ಒಳ್ಳೆಯದು. Should we have not thought of some of these things ? That is my question.

Srs Abdul Nazir Sab.—There should be a control. Who is to wield the control ? Whether a higher body or a lower body or the Government ?

Sri K. H. Ranganath.—There is the Central List, State List and Concurrent List. Checks and balances are provided in the Constitution. You should have provided checks and balances. If the Government is genuinely interested in the decentralisation of power and giving it to the lowest man to rule himself and thereby make use of all the plan-work you should have definitely provided some checks and balances in this Act. ಸ್ವಾಮಿ ಈಗಿರತಕ್ಕಂಥ ಒಂದು ಕಾನೂನಿನ ವ್ಯವಸ್ಥೆಯಲ್ಲಿ ನಾನು ಹೇಳುವುದಾದರೆ ಪಂಚಾಯತಿ ಆಕ್ಟ್ ಪ್ರಕಾರ ಒಬ್ಬ ಪಂಚಾಯಿತಿ ಅಧ್ಯಕ್ಷರ ಮೇಲೆ ಕೇಸು ಹಾಕಿದರೆ ಅದು ಅಸಿಸ್ಟೆಂಟ್ ಕಮಿಷನರ್ ಕೋರ್ಟಿಗೆ ಬಂದು ವಿಚಾರಣೆಯಾಗುತ್ತದೆ.

You are goiug to refer it to the Secretary to take a decision. on ಆದ್ದರಿಂದಲೇ ನಾನು ಹೇಳುವುದು ಇದರಲ್ಲಿ ಕಣ್ಣಿಗೆ ಕಾಣದೆ ಇರತಕ್ಕಂಥ ಅನೇಕ ಕಳಂಕಗಳು ನುಸುಳಿ ಕೊಂಡಿವೆ. ಆ ಕಳಂಕಗಳನ್ನು ತಾವು ಕೂಲಂಕಷವಾಗಿ ಪರಿಶೀಲನೆ ಮಾಡುವುದು ಒಳ್ಳೆಯದು.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ ನಾವು ಇದರ ಬಗ್ಗೆ ಹೆಚ್ಚು ವಿಚಾರ ಮಾಡಿದ್ದೇವೆ. ಜಿಲ್ಲಾ ಪರಿಷತ್, ಕೊಡತಕ್ಕಂಥ ಆಜ್ಞೆಗಳನ್ನು ಮಂಡಲ, ಪಂಚಾಯಿತಿ ಮತ್ತು ತಾಲ್ಲೂಕು ಸಮಿತಿಗಳು ಪಾಲನೆ ಮಾಡಬೇಕು. ಆದರೂ ಕೂಡ ನಾವು ಮಂಡಲ್ ಪಂಚಾಯಿತಿಗಳಿಗೆ ಹೆಚ್ಚು ಜವಾಬ್ದಾರಿಯನ್ನು ಕೊಟ್ಟಿದ್ದೇವೆ. ಆದರೆ ಮಂಡಲ್ ಪಂಚಾಯಿತಿಯ ಮೇಲೆ ಜಿಲ್ಲಾ ಪರಿಷತ್ ಕೈ ಹಾಕುವುದಕ್ಕೆ ಬರುವುದಿಲ್ಲ.

ಶ್ರೀ ಕೆ. ಹೆಚ್, ರಂಗನಾಥ್.—ಸ್ವಾಮಿ ನಮ್ಮಲ್ಲಿ ಒಂದು ಗಾದೆ ಇದೆ, ಅದು ಏನೆಂದರೆ ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಸಿಕ್ಕಿತಂತೆ. ಅಂದರೆ ಒಲ್ಲದ ಗಂಡ ನಿಮ್ಮ ಮಸೂದೆ ಸೆಕ್ಷನ್ 270-271ನೇ ಕಲಂ ಪ್ರಕಾರ ಮೊಸರಿನಲ್ಲಿ ಕಲ್ಲು ಹುಡುಕಬಹುದು.

What can we do ? We can do anything and everything except a man a woman and a woman a man.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಹೌದು ಮಾಡಬಹುದು.

Sri. K. H. Ranganath.—Even that could be done. ತಮ್ಮ ಜನತಾ ಪಾರ್ಟಿಯಲ್ಲಿ ಕೂಡ ಆ ರೀತಿ ಮಾಡುವುದಕ್ಕೆ ಸಾಧ್ಯವಿದೆ.

A man a woman and a woman a man could be done. ನಾನು ನನ್ನ ಅಭಿಪ್ರಾಯವನ್ನು ಹೇಳುತ್ತಿದ್ದೇನೆ.

3-30 p. m.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಕಾನೂನು ಚೌಕಟ್ಟಿನೊಳಗೆ ಕೆಲಸ ಮಾಡದಿದ್ದರೆ ಅದನ್ನು ನಿಯಂತ್ರಿಸುವುದಕ್ಕೆ ಏನು ಪ್ರಪೋಸ್ ಮಾಡುತ್ತೀರಿ ?

ಶ್ರೀ ಕೆ. ಎಚ್. ರಂಗನಾಥ್.—ಅದನ್ನು ನೀವು ಮಾಡಬೇಕು. ಅಪ್ಪ ಮಗನಿಗೆ ಹೆಣ್ಣು ನೋಡುವುದಕ್ಕೆ ಹೋಗಿ, ಹೆಣ್ಣು ಚೆನ್ನಾಗಿದ್ದುದರಿಂದ ಅವನೇ ಕಟ್ಟಿಕೊಂಡ ಹಾಗೆ ಹೇಳಬೇಡಿ. ನೀವು ಏನು ಮಾಡುತ್ತೀರಿ ? ನನ್ನನ್ನು ಕೇಳಿದರೆ ನಾನೇನು ಹೇಳಲಿ ? There should have been some sufficient Checks and balances provided in the Act so that the

power is not misused by the elected body. How can Zilla Parishad become very supreme ? I will put this way.

ಯಾರೋ ಒಬ್ಬರು ಜಿಲ್ಲಾಪರಿಷತ್‌ನ ಅಧ್ಯಕ್ಷರಾಗುತ್ತಾರೆ, ಅವರು ಸರ್ವಜ್ಞರಾಗುತ್ತಾರೇನು ?

Sri Abdul Nazir Sab.--How can it be supreme ? Nobody is supreme here. We are giving certain powers. There is nobody who is supreme. How can the Deputy Commissioner or the Divisional Commissioner can become supreme ?

Sri K. G. Maheshwarappa.—They are the creatures of the Constitution.

Sri K. H. Ranganath.--I amquestioning that. Those creatures can abuse the powers given under the Constitution. That is my point. Therefore you could have provided some checks and balances. ಸಮಾಜದಲ್ಲಿರತಕ್ಕ ಜನರ ಕೈಗೆ ಅಧಿಕಾರವನ್ನು ಕೊಟ್ಟರೆ ನಮ್ಮಂತಹ ಬಡಪಾಯಿಗಳ ಗತಿಯೇನು ? ನಮ್ಮಂತಹವರ ಗತಿ ಏನಾಗುತ್ತದೆ ಎನ್ನುವುದನ್ನು ಹೇಳುತ್ತಿದ್ದೇನೆ.

(ಉಪಾಧ್ಯಕ್ಷರು ಪೀಠ ವಹಿಸಿದ್ದರು)

ಶ್ರೀ ಬಿ. ದೊಡ್ಡ ಬೋರೇಗೌಡ.—ಮಾನ್ಯ ಸದಸ್ಯರು ವಿಧಾನ ಪರೀಕ್ಷೆ ಬಗ್ಗೆ ಹೇಳಿದರು. ಇದರ ಬಗ್ಗೆ ಏನು ಮಾಡಬೇಕೆನ್ನುವ ಸಲಹೆಯನ್ನು ತಾವು ಕೊಡಿ. ತಾವು ತಜ್ಞರು, ರಾಜಕೀಯ ಪ್ರವೀಣರು ತಾವೇನು ಸಲಹೆ ಕೊಡುತ್ತೀರೋ ಕೊಡಿ.

ಶ್ರೀ ಕೆ. ಎಚ್. ರಂಗನಾಥ್.—ಸರ್ಕಾರಕ್ಕೆ ಜಿಲ್ಲಾ ಪರಿಷತ್‌ನ್ನು ರದ್ದುಮಾಡುವ ಅಧಿಕಾರವನ್ನು ಕೊಟ್ಟಿದ್ದಾರೆ. ಈಗಿರತಕ್ಕ ಕಾನೂನಿನಲ್ಲಿ ಇದು ಎಷ್ಟರಮಟ್ಟಿಗೆ ಮುಂದೆ ಹೋಗಿದೆ? ಅದನ್ನು ನಾವು ಇವೊತ್ತಿನ ದಿವಸ ನೋಡುತ್ತಿದ್ದೇವೆ. ನಾನು ಮಾನ್ಯ ಗ್ರಾಮಾಭಿವೃದ್ಧಿ ಸಚಿವರ ಇಲಾಖೆಗೆ ಸಂಬಂಧ ಪಟ್ಟ ಹಾಗೆ ಒಂದು ವಿಚಾರ ಹೇಳುತ್ತೇನೆ, ನನ್ನ ತಾಲ್ಲೂಕು ಆದರೂ ಮಾನ್ಯ ಬಿ. ಎಲ್. ಗೌಡರ ಕ್ಷೇತ್ರಕ್ಕೆ ಬರುತ್ತದೆ. ಅದರ ಬಗ್ಗೆ ಮ್ಯಾಪ್ ಹಾಕಿ ತಮಗೆ ಒಂದು ಪತ್ರ ಬರೆದಿದ್ದೇನೆ. ಒಂದು ಸಣ್ಣ ವಿಚಾರಕ್ಕೆ ಮನಸ್ಸು ಮಾಡಿದರೆ ಯಾವರೀತಿ ತೊಂದರೆ ಕೊಡಬಹುದು ಎಂದು ಇದರಿಂದ ಗೊತ್ತಾಗುತ್ತದೆ. ಹಿರಿಯೂರು ತಾಲ್ಲೂಕು, ಐಮಂಗಲ ಹೋಬಳಿ ಬೀರನಹಳ್ಳಿ ಎಂಬ ಗ್ರಾಮವಿದೆ. ಆ ಊರು ನನ್ನ ಕ್ಷೇತ್ರಕ್ಕೆ 2 ಫರ್ಲಾಂಗ್ ದೂರದಲ್ಲಿದೆ. ಆ ಊರಿನಲ್ಲಿ 1 ಫರ್ಲಾಂಗ್ ದೂರದಲ್ಲಿ ಕೆಲವು ಜನರು ಅಂದರೆ ಸ್ವಲ್ಪ ಪ್ರಭಾವಿತ ಜನರ ಮನೆಗಳಿವೆ. ಅದು ಆದಮೇಲೆ ಸ್ವಲ್ಪ ದೂರದಲ್ಲಿ ಗೊಲ್ಲಜನಾಂಗದವರ ಮನೆಗಳಿವೆ. ಹಿಂದೆ ತಾಲ್ಲೂಕು ಬೋರ್ಡ್‌ನವರು ಅಲ್ಲೊಂದು ಪಂಚಾಯತಿ ಕಟ್ಟಡ ಕಟ್ಟಬೇಕೆಂದು ನಿಗದಿಮಾಡಿದ್ದಾರೆ. ಈಗ ಒಬ್ಬೊರಿಗೊಬ್ಬರಿಗೆ ಘರ್ಷಣೆಯಾಗಿ ಇಲ್ಲಿ ಆಗಬೇಕು, ಅಲ್ಲಿ ಆಗಬೇಕೆಂದು ಅದು ಹಾಗೆಯೇ ನಿಂತಿದೆ. ಹಿಂದೆ ಇಂತಹ ಕಡೆ ಆಗಬೇಕೆಂದು ತಾಲ್ಲೂಕು ಬೋರ್ಡ್ ವತಿಯಿಂದ ಫೌಂಡೇಷನ್ ಕೂಡ ಹಾಕಲಾಗಿದೆ. ಆದರೆ ಪಂಚಾಯತಿ ಬಿಲ್ಡಿಂಗ್ ಇಲ್ಲಿಯವರೆಗೆ ಆಗಿಲ್ಲ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇಂತಹ ಒಂದು ಪರಿಸ್ಥಿತಿ ಹಳ್ಳಿಗಳಲ್ಲಿ ಇರುವಾಗ ನಾವು ಇಂತಹ ಅಧಿಕಾರಕ್ಕೆ ಅವಕಾಶ ಮಾಡಿಕೊಟ್ಟರೆ ಮನುಷ್ಯ ಕೊಟ್ಟಂತಹ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ತಾವು ನನಗೆ ಉತ್ತರ ಬರೆದಿದ್ದೀರಿ ಈ ವಿಷಯದಲ್ಲಿ ಜಿಲ್ಲಾಧಿಕಾರಿಗಳಿಗೆ ಡೈರೆಕ್ಷನ್ ಕೊಡಲಾಗಿದೆಯೆಂದು. ಇದು ಆದಮೇಲೆ ಅಲ್ಲಿ ಕ್ರಿಮಿನಲ್ ಕೇಸ್‌ಗಳು ಆಗಿ ಕೋರ್ಟ್‌ನಲ್ಲಿ ಕೇಸುಗಳು ನಡೆಯುತ್ತಿವೆ. 10 ವರ್ಷಗಳಿಂದ ಹೊಡೆದಾಟ ಇಲ್ಲದಂತಹ ಊರಿನಲ್ಲಿ ಒಂದು ಗಳಿಗೆಯಲ್ಲಿ ಹೊಡೆದಾಟ ನಡೆಯುತ್ತದೆ. ನಾನು ಉದಾಹರಣೆಗೆ ಮಾತ್ರ ಇದನ್ನು ಹೇಳಿದ್ದೇನೆ ನೀವು ಈ ರೀತಿಯ ಅಧಿಕಾರವನ್ನು ಕೊಟ್ಟರೆ ಹಳ್ಳಿಗಾಡಿನಲ್ಲಿ ಪ್ರಚೋದನೆಗೆ ಅವಕಾಶ ಮಾಡಿಕೊಟ್ಟ ಹಾಗೆ ಆಗುವುದಿಲ್ಲವೆ? ಸ್ವತಂತ್ರವಾದ ಸ್ವಯಂಸಂಸ್ಥೆಯನ್ನು ಗ್ರಾಮಾಭಿವೃದ್ಧಿಗೋಸ್ಕರ ಒಂದು ಕೈಯಲ್ಲಿ ಕೊಟ್ಟಂತೆ ಮಾಡಿ ಇನ್ನೊಂದು ಕೈಯಲ್ಲಿ ತೆಗೆದುಕೊಳ್ಳುವ ಪ್ರಯತ್ನ ನಡೆದಿದೆ. ಇಲ್ಲಿ ಅಂತಹ ಕಾಲಂಗಳಿವೆ ಅದರ ಬಗ್ಗೆ ನಾನು ಪ್ರಸ್ತಾಪಮಾಡಿದ್ದೇನೆ.

ಇನ್ನು ಜಿಲ್ಲಾ ಪರಿಷರಿಷತ್‌ನ ಬಗ್ಗೆ ಹೇಳುವುದಾದರೆ ಜಿಲ್ಲಾ ಪರಿಷತ್‌ಗೆ ಬಹಳ ದೊಡ್ಡ ಹೊಣೆಗಾರಿಕೆಯನ್ನು ಕೊಟ್ಟಿದ್ದಾರೆ. ಅಲ್ಲೂ ಕೂಡ ಗ್ರಾಮಾಭಿವೃದ್ಧಿಯ ಬಗ್ಗೆ ಮಾತನಾಡಿದ್ದಾರೆ. ಇದೇ ವಾದವನ್ನು ಮಂಡಿಸಬೇಕಾಗಿದೆ. ನಿಖರವಾದ ಹಣಕಾಸಿನ ವ್ಯವಸ್ಥೆಯನ್ನು ಮಾಡದಿದ್ದರೆ ತಮ್ಮವಾದ ಸದಭಿಪ್ರಾಯ ಸದುದ್ದೇಶ ಮತ್ತು ಸರ್ಕಾರದ ಚಿಂತನೆ ಏನಿದೆ, ನಿಮ್ಮ ಪಕ್ಷದ ಚಿಂತನೆ ಏನಿದೆ ಅದನ್ನು ಜಾರಿಗೆ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಇದರಲ್ಲಿ ಲೆಕ್ಕವಿಲ್ಲದಷ್ಟು ಕಮಿಟಿಗಳನ್ನು ಮಾಡಿದ್ದೀರಿ.

ಜಿಲ್ಲಾ ಪರಿಷತ್‌ನ ಕೆಲಸ ಕಾರ್ಯಗಳನ್ನು ನೋಡಿಕೊಳ್ಳಲಿಕ್ಕೆ ಐದಾರು ದೊಡ್ಡ ದೊಡ್ಡ ಕಮಿಟಿಗಳನ್ನು ಮಾಡಿದ್ದೀರಿ. ಒಂದು ಕಮಿಟಿಯು ಛೇರ್ಮನ್ ಮಾಡಿರತಕ್ಕ ಶಿಫಾರಸ್ಸುಗಳನ್ನು ಜಿಲ್ಲಾ ಪರಿಷತ್ ಒಪ್ಪದೇ ಇರತಕ್ಕ ಅಧಿಕಾರವನ್ನು ನೀವು ಕೊಟ್ಟಿದ್ದೀರಿ. ಸಮಿತಿಯು ಶಿಫಾರಸ್ಸುಗಳನ್ನು ಜಿಲ್ಲಾ ಪರಿಷತ್ ಒಪ್ಪದೆ ಇರತಕ್ಕ ರೀತಿಯಲ್ಲಿದೆ. ಸದಸ್ಯರುಗಳು ರಾಜೀನಾಮೆಯನ್ನು ಪ್ರಧಾನರ ಕೈಗೆ ಕೊಟ್ಟರೆ ಆಯಿತು ಎಂದು ಹೇಳಿದ್ದೀರಿ. ಮಂಡಲ್ ಪಂಚಾಯತಿ ಸದಸ್ಯರು ಕೂಡ ಪಂಚಾಯತಿಯ ಪ್ರಧಾನರ ಕೈಗೆ ರಾಜೀನಾಮೆ ಕೊಟ್ಟರೆ ಸಾಕು ಎಂದು ಹೇಳಿದ್ದೀರಿ. ಈಗ ಯಾವುದೇ ಒಬ್ಬ ಸದಸ್ಯರು ರಾಜೀನಾಮೆಯನ್ನು ಕೊಡಬೇಕಾದರೆ ತನ್ನ ರಾಜೀನಾಮೆ ಪತ್ರವನ್ನು ಅಸಿಸ್ಟೆಂಟ್ ಕಮಿಷನರ್‌ರವರಿಗೆ ಕಳುಹಿಸಬೇಕಾಗಿದೆ. ಅಲ್ಲಿಂದ ಬರುವವರೆಗೆ ಕಾಯಬೇಕು. ಹಳ್ಳಿಗಳಲ್ಲಿ ಒತ್ತಾಯ ತರುವುದಕ್ಕೆ ಸಾಧ್ಯವಿಲ್ಲ. ಈಗ ನೀವು ಮಾಡಿರುವ ಪದ್ಧತಿಯಿಂದ ಮೆಜಾರಿಟಿಯನ್ನು ಮಾಡಿಕೊಳ್ಳುವುದಕ್ಕೆ, ಮೆಜಾರಿಟಿಯನ್ನು ಮೈನಾರಿಟಿ ಮಾಡಿಕೊಳ್ಳುವುದಕ್ಕೆ ಸದಸ್ಯರನ್ನು ರಾಜೀನಾಮೆ ಕೊಡಿಯೆಂದು ಹೇಳಬಹುದು. ಅಸಿಸ್ಟೆಂಟ್ ಕಮಿಷನರ್‌ರವರಿಗೆ ಕಳುಹಿಸಿ ಕಾಯುವ ಹಾಗೆ ಕಾಯಬೇಕಾಗಿಲ್ಲ. ಇಲ್ಲಿ ಮುಗ್ಧರನ್ನು ದುರುಪಯೋಗಪಡಿಸಿಕೊಳ್ಳುವುದಕ್ಕೆ ಸಾಕಷ್ಟು ಅವಕಾಶವಿದೆ. ಇದರ ಬಗ್ಗೆ ವಿಚಾರ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಜಿಲ್ಲಾ ಪರಿಷತ್‌ಗೆ ಬಹಳ ಕೆಲಸವನ್ನು ತಾವು ಕೊಟ್ಟಿದ್ದೀರಿ. ಜಿಲ್ಲಾ ಪರಿಷತ್‌ನ Section 191-Composition of Zilla Parishad Fund : The following shall form part of, or be paid into, the Zilla Parishad General fund, namely :

> "The amounts transferred to the Zilla Parishad Fund by appropriation from out of the Consolidated Fund of the State."

ಎಷ್ಟು? ಯಾವ ಪ್ರಮಾಣದಲ್ಲಿದೆ ಹೇಗೆ ಕೊಡುತ್ತಾರೆ ಅದನ್ನು ತಾವು ಹೇಳಿಲ್ಲ. ತಮ್ಮ ಅಭಿಪ್ರಾಯವಿದೆ. 210 ರಲ್ಲಿ ಪ್ರಸ್ತಾಪಿಸಿರುವಂತೆ ಫೈನಾನ್ಸ್ ಕಮಿಷನ್ ಫಾರ್ ಜಿಲ್ಲಾ ಪರಿಷತ್ ಅದು ನಿಮ್ಮ ಅಭಿಪ್ರಾಯವೆಂದು ನಾನಾದರೂ ಭಾವಿಸುತ್ತೇನೆ. ಇದರ ಬಗ್ಗೆ ಸ್ಪಷ್ಟವಾಗಿ ಹೇಳತಕ್ಕದ್ದು. ಒಳ್ಳೆಯದು. All grants, assignments, loans and contributions made by the Government. ಹಾಗೆಂದು ಹೇಳಿದ್ದೀರಿ. ಆಮೇಲೆ ಸಾಲ ಕೂಡ ಎತ್ತಬಹುದು ಎಂದು ಹೇಳಿದ್ದಾರೆ. ಯಾರಿಂದ ಸಾಲ ಎತ್ತಬೇಕು ಸ್ವಾಮಿ?

Sri Abdul Nazir Sab.—There are so many defined institutions. How can we say all in the Act?

ಕೆ. ಎಚ್. ರಂಗನಾಥ್.—ಹಾಗೆಂದ್ ಎಲ್ಲೂ ಇಲ್ಲ. ಖಾಸಗಿಯವರಿಂದ ಕೂಡ ತರಬಹುದು ಎಂದು ಹೇಳಿದರೆ,...

ಶ್ರೀ ಅಬ್ದುಲ್ ನಜೀರ್ ಸಾಬ್.—ಬೇರೆಯವರು ಕೊಡಬೇಕಾಗಿದ್ದರೆ..... Government body.... who is to stand guarantee ? ಕಾನೂನಿನಲ್ಲಿ ಇದ್ದರೂಕೂಡ ತರುವುದಕ್ಕೆ ಆಗುವುದಿಲ್ಲ. ತಾವು ಸಹಕಾರ ಸಚಿವರು ಆಗಿದ್ದವರು.

ಅದರಲ್ಲಿ ಆಕ್ಟ್ ಏನು ಹೇಳುತ್ತದೆ. ತಾವು ವಾಸ್ತವಿಕವಾಗಿ ಮಾತನಾಡಿ.

ಶ್ರೀ ಕೆ. ಎಚ್. ರಂಗನಾಥ್.—ಅದಕ್ಕೆ ನಾನು ಹೇಳುವುದು, ಅವಸರದಲ್ಲಿ ಇದನ್ನು ತರುವಾಗ ಸ್ವಲ್ಪ ಕೈ ತಪ್ಪಿರುತ್ತದೆ. ಬುದ್ಧಿಪೂರ್ವಕವಾಗಿ ಹಾಗೆಯೇ ಇರಲಿ ಎಂದು ಹೇಳುವುದಾದರೆ ಈ ಮಾತು ಬೇರೆ ಆದರೆ........he may raise public loan in an authorised financial institution.

Sri Abdul Nazir Sab.--For example drinking water....
I am entering an agreement with Swedish Government on bilateral aid

ಶ್ರೀ ಕೆ.ಹೆಚ್. ರಂಗನಾಥ್.—ಸಾಲ ಎತ್ತುವುದು ಸರಿಯೆಂದು ಹೇಳುವುದಾದರೆ ಸರಿ. Clause 196....says "A Zilla parishad may with the Previons sanction of the Government and subject to the conditions imposed by it from time to time, raise loans for the execution of any work or for the purpose of carrying out any of the provisions of this Act and form a sinking fund for the repayment of such loans"....

ಎಂದರೆ ಅರ್ಥ ಬೇರೆ ಆಗುತ್ತದೆ. ಸ್ವಲ್ಪ ವಿಚಾರ ಮಾಡಿ. ಮಹಿಳೆಯರಿಗೆ ಸೀಟು 30 ಇದ್ದುದನ್ನು 20ಕ್ಕೆ ಇಳಿಸಿದ್ದು. ಇಷ್ಟೇ ಇರಲಿ ಎಂದು ಹೇಳುವುದಾದರೆ ನನ್ನ ಸಲಹೆ ಏನೆಂದರೆ ಪ್ರತಿ ತಾಲ್ಲೂಕಿಗೂ ಮಹಿಳೆಯರಿಗೆ ಪ್ರಾತಿನಿಧ್ಯ ಇರತಕ್ಕಂಥ ವ್ಯವಸ್ಥೆ ಮಾಡತಕ್ಕದ್ದು ಉತ್ತಮ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಯೋಚಿಸಬೇಕೆಂದು ಹೇಳುತ್ತೇನೆ.

ಸ್ವಾಮಿ, ಇನ್ನು ನ್ಯಾಯ ಪಂಚಾಯತ್. ಇದು ಹೊಸ ವಿಚಾರ, ಅಷ್ಟೇ ಪ್ರಮಾಣದಲ್ಲಿ ವಾದಗ್ರಸ್ಥವಾಗಿರತಕ್ಕಂಥ ವಿಚಾರ ಕೂಡ ಆಗಿದೆ. ನ್ಯಾಯ ಪಂಚಾಯಿತಿಗೆ ನೇಮಕ ಮಾಡತಕ್ಕದ್ದನ್ನು ಪ್ರಸ್ತಾಪ ಮಾಡಿದ್ದೀರಿ ನನ್ನನ್ನು ಕೇಳಿದರೆ ಈಗಿನ ಪರಿಸ್ಥಿತಿಯಲ್ಲಿ, ವಾತಾವರಣದಲ್ಲಿ ಇದನ್ನು ಕೈಬಿಡತಕ್ಕದು ಉತ್ತಮ. ಉತ್ತಮವೇನು, ಕೈಬಿಡಬೇಕು. ಇದರ ಬಗ್ಗೆ ಮರುಚಿಂತನೆ ಮಾಡಿ ಕೈಬಿಡತಕ್ಕದ್ದು ಸೂಕ್ತ. ಇಲ್ಲದೇಹೋದರೆ ಸರ್ಕಾರ ಸಾಮಾನ್ಯ ಜನರನ್ನು ಪ್ರಭಾವಿ ಜನರ ಹಿಡಿತಕ್ಕೆ ಒಳಮಾಡುತ್ತದೆ. ಇವೊತ್ತಿನ ದಿವಸ ಹಳ್ಳಿಗಾಡಿನ ಪರಿಸ್ಥಿತಿಯಲ್ಲಿ ಅದನ್ನು ಮಾಡಲಿಕ್ಕೆ ಸಾಧ್ಯವಿದೆಯೇ? ಈ ನ್ಯಾಯ ಪಂಚಾಯತ್‌ನಲ್ಲಿ ಐದು ಜನರು ಇರತಕ್ಕದ್ದು, ಒಬ್ಬ ಮುಖ್ಯಸ್ಥ ಇರುತ್ತಾನೆ ಎಂದು ತಾವು ಹೇಳಿದ್ದೀರಿ. ಇದಕ್ಕೆ ಪೂರ್ವಭಾವಿಯಾಗಿ ಒಂದು ಕಾಲಮ್ ಇದೆ. ಇದರಲ್ಲಿ ಲೋಕಲ್ ಸೆಲ್ಫ್ ಸರ್ವಿಸ್ ಮಾಡಬಹುದೆಂಬ ಅಭಿಪ್ರಾಯ ಇರಬಹುದು. ಅದೇ ದೃಷ್ಟಿಯಿಂದ ನಾನು ಸಲಹೆ ಮಾಡುವುದೇನೆಂದರೆ, ಇದನ್ನು ತೆಗೆದುಕೊಳ್ಳುವುದಕ್ಕೆ ಪ್ರತ್ಯೇಕವಾದ ಡೈರೆಕ್ಟೋರೇಟ್ ಮಾಡುವುದು ಸೂಕ್ತ. ಮುಂದೆ ಯಾವುದೇ ರೂಪದಲ್ಲಿ ಕಾನೂನು ಬರಲಿ, ಅದು ಬೇರೆ. ಇದಕ್ಕೆ ಪ್ರತ್ಯೇಕವಾದ ಡೈರೆಕ್ಟೋರೇಟ್ ಇರಬೇಕು. ಅಸಿಸ್ಟೆಂಟ್ ಕಮಿಷನರ್ ತಾಲ್ಲೂಕು ಮಟ್ಟದಲ್ಲಿದ್ದಾರೆ, ಜಿಲ್ಲೆಗೆ ಡೆಪ್ಯುಟಿ ಕಮೀಷನರ್ ಇದ್ದಾರೆ, ಡೆವಲೆಪ್‌ಮೆಂಟ್ ಕಮೀಷನರ್ ರಾಜ್ಯಮಟ್ಟದಲ್ಲಿದ್ದಾರೆ. ಎರಡನೆಯ ಪಂಚವಾರ್ಷಿಕ ಯೋಜನೆ ಅನಂತರ ಬಂದಂಥ ಒಂದು ವ್ಯವಸ್ಥೆ ಇದು. ತಮ್ಮ ವಿಚಾರ ಇವರನ್ನು ಎಲೆಕ್ಟ್ ಮಾಡತಕ್ಕದ್ದು ಇದೆ. ಒಂದು ವೇಳೆ ಎಲೆಕ್ಟ್ ಮಾಡುವುದಕ್ಕೆ ಸಾಧ್ಯವಿಲ್ಲದೇ ಹೋದರೆ, ಡೆಪ್ಯುಟಿ ಕಮೀಷನರ್ ನೇಮಕ ಮಾಡಬಹುದು ಎಂದು ಇದೆ. ಕ್ಲಾಸ್ 218(1) ಏನು ಹೇಳುತ್ತದೆ?

> 'If a Nyaya Panchayat fails to elect a Mukhya Nyaya Vicharaka as required by sub-section (1), the Deputy Commissioner may appoint any of the members to be the Mukhya Nyaya Vicharaka and such person shall be deemed to have been duly elected as the Mukhya Nyaya Vicharaka'.

ಏಕೆ ಸ್ವಾಮಿ ಇದು ? ನನ್ನನ್ನು ಕೇಳಿದರೆ ಡೆಪ್ಯುಟಿ ಕಮಿಷನರ್ ನೇಮಕ ಮಾಡತಕ್ಕದ್ದು ಸರಿಯಿಲ್ಲ. ಚುನಾವಣೆ ಮಾಡತಕ್ಕಂಥ ಈ ಕಲಮು ಇರಬೇಕು.

Sri Abdul Nazir Sab.--If they fail to elect There should be anenabling clause....

Sri K.H. Ranganath.--Not all of them of that type

ಶ್ರೀ ಅಬ್ದುಲ್ ನಜೀರ್‌ಸಾಬ್.—ಒಂದು ಪಂಚಾಯಿತಿಗೆ 15 ಎಲೆಕ್ಟ್ ಆಗಬೇಕು ಎಂದು ಕಾನೂನು ಇದೆ. ಅಲ್ಲೊಂದು ಪ್ರಾವಿಷನ್ ಇರಬೇಕು.

ಶ್ರೀ ಕೆ.ಹೆಚ್. ರಂಗನಾಥ್.—ಇಲ್ಲಿ "deemed to have been duly elected ಅಂದರೆ here among the elected members of the Nyaya Panchayat one will be appointed by the Deputy Commissioner and he shall be deemed to have been duly elected ಎಂದು ಆನು ಹೇಳುತ್ತೇನೆ ಇಂಥ ಒಂದು ವಾತಾವರಣ ನಿರ್ಮಾಣ ಆಗಬಹುದು. ಹಳ್ಳಿಗಾಡಿನ ಪರಿಸ್ಥಿತಿಯಲ್ಲಿ ಯಾರನ್ನೂ ಕೂಡ ನೇಮಕ ಮಾಡಲಾಗದಂಥ ವಾತಾವರಣ ನಿರ್ಮಾಣ ಆಗಲಿಕ್ಕೆ ಸಾಧ್ಯತೆ ಇದೆ.

Sri Abdul Nazir Sab.--If they don't elect that will come into operation ಐದು ಜನರು ಇರುತ್ತಾರೆ. ಯಾರನ್ನೂ ಮಾಡುವುದಿಲ್ಲವೆಂದು ಹೇಳುತ್ತಾರೆ ಆಗ ...

ಶ್ರೀ ಕೆ.ಹೆಚ್. ರಂಗನಾಥ್.—ಯಾರೂ ಆಗುವುದಿಲ್ಲವೆಂದರೆ ಯಾರೂ ಆಗುವುದಿಲ್ಲ. ಅಂತಹ ಒಂದು ವಾತಾವರಣವನ್ನು ಹಳ್ಳಿಗಾಡಿನಲ್ಲಿ ನಿರ್ಮಾಣ ಮಾಡುತ್ತಾರೆ.

ಶ್ರೀ ಅಬ್ದುಲ್ ನಜೀರ್‌ಸಾಬ್,—ಅದು ಆಗುವುದೂ ಇಲ್ಲ. ಸಾಧ್ಯವೂ ಇಲ್ಲ.

ಶ್ರೀ ಕೆ.ಎಚ್. ರಂಗನಾಥ.—ನಿಮ್ಮ ಮೊಂಡು ಧೈರ್ಯವನ್ನು ನಾವು ಮೆಚ್ಚಬೇಕು. ತಮ್ಮಷ್ಟು ಸದಭಿಪ್ರಾಯ ಇರುವ ಜನ ಎಲ್ಲರೂ ಇರುವುದಿಲ್ಲ, ಆತನು ಏಕೆ ಆಗಬೇಕು, ನಾನು ಏಕೆ ಆಗಬಾರದು? ನೀನು ಹೇಗೆ ಆಗುತ್ತೀಯೋ ಎಂದು ನೋಡುತ್ತೇನೆ ಎಂದು ಹೇಳಿ ಕೊನೆಗೆ ಆಗುವುದಿಲ್ಲ, ನಾನು ಆಗುವ

ದಿಲ್ಲವೆಂದು ಹೇಳಿದರೆ ಡೆಪ್ಯುಟಿ ಕಮೀಷನರ್ ನೇಮಕ ಮಾಡಬೇಕು. ಸಲ್ಪ ವಿಚಾರ್ವ ಮಾಡಿ. ನಾನು ಹೇಳುತ್ತೇನೆ... he should be elected ಎಲೆಕ್ಟ್ ಮಾಡುವುದಿಲ್ಲವೆಂದು ಏತಕ್ಕೆ ಹೇಳುತ್ತಾರೆ? ನಂತರ ಮತ್ತೊಂದು ಪ್ರಶ್ನೆ. ಸ್ವಲ್ಪ ಕಾನೂನು ದೃಷ್ಟಿಯಲ್ಲಿ ತಾವು ತಮ್ಮ ಅಧಿಕಾರಿಗಳ ಜೊತೆ ವಿಚಾರ ಮಾಡತಕ್ಕಂತಹದ್ದು ಸೂಕ್ತ. ಅದೇನೆಂದರೆ ಸಿವಿಲ್ ಮತ್ತು ಕ್ರಿಮಿನಲ್ ಜ್ಯೂರಿಸ್‌ಡಿಕ್ಷನ್ ಇದಕ್ಕೆ ಬರುತ್ತದೆ ಎನ್ನುವ ಮಾತುಗಳನ್ನು ಹೇಳಿದ್ದಾರೆ. ಸಿವಿಲ್ ಪ್ರೊಸೀಜರ್ ಕೋಡ್ ಇದಕ್ಕೆ ಅಪ್ಲೈಯಾಗುವುದಿಲ್ಲ ಎಂದೂ ಹೇಳಿದ್ದೀರಿ. ಇದರಲ್ಲಿ ನಗರ ಮತ್ತು ಹಳ್ಳಿಗಾಡಿನ ಪ್ರದೇಶದ ಜನರಿಗೂ ಒಂದೇ ವ್ಯವಸ್ಥೆಯಾಗತಕ್ಕಂತಹದ್ದು ಸೂಕ್ತ. ನಗರದ ಪ್ರದೇಶಗಳಲ್ಲಿ 500 ರೂಪಾಯಿಗಳು ಬರಬೇಕಾಗಿದ್ದರೂ ದಾವಾ ಹಾಕಿದರೆ ಸಿವಿಲ್ ಪ್ರೊಸೀಜರ್ ಅನ್ವಯವಾಗದಿದ್ದರೆ ಸ್ವಲ್ಪ ಸ್ವಲ್ಪ ಭಾಗ ಅನ್ವಯವಾಗತಕ್ಕಂತಹದ್ದರಲ್ಲಿ ಡಿಸ್‌ಕ್ರಿಮಿನೇಟ್ ಆಗತಕ್ಕಂತಹ ಪರಿಸ್ಥಿತಿ ಇದೆ. ತಾವು ಕೂಡ ಸಿವಿಲ್ ಪ್ರೊಸೀಜರ್ ಕೋರ್ಟ್ ಅಪ್ಲೈಯಾಗುವುದಿಲ್ಲವೆನ್ನುವ ಮಾತನ್ನು ಹೇಳಿದ್ದೀರಿ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಲ್ಯಾಂಡ್ ಟ್ರಿಬ್ಯುನಲ್ ಕೇಸುಗಳಲ್ಲಿ ಜ್ಯೂರಿಸ್‌ಡಿಕ್ಷನ್ ಇಲ್ಲವೆಂದು ಕೆಲವಾರು ಕೇಸುಗಳಲ್ಲಿ ಕೋರ್ಟಿನವರು ಹಾಗೆ ಸ್ಟೇ ಕೊಟ್ಟಿದ್ದಾರಲ್ಲವೇ.

ಶ್ರೀ ಕೆ. ಹೆಚ್. ರಂಗನಾಥ್.—ಸ್ಮಾಲ್ ಕಾಸ್ ಕೋರ್ಟಿನಲ್ಲಿ 100 ರೂಪಾಯಿ. 200 ರೂಪಾಯಿಗಳಿಗೆಲ್ಲಾ ದಾವ ಹಾಕಿದರೆ, ಸ್ಮಾಲ್ ಕಾಸ್ ಕೋರ್ಟ್ ಜ್ಯೂರಿಸ್‌ಡಿಕ್ಷನ್ ಇರತಕ್ಕಂಥ ಹಳ್ಳಿಗಾಡಿನ ನ್ಯಾಯ ಪಂಚಾಯತಿಯಲ್ಲಿ ಬರೀ ಸಿವಿಲ್ ಪ್ರೊಸೀಜರ್ ಕೋಡ್ ಅಪ್ಲೈ ಮಾಡತಕ್ಕಂತಹದ್ದು ಎಂದು ಹೇಳಿದ್ದೀರಿ. ಇದೂ ಕೂಡಾ ಕಾನೂನು ಚೌಕಟ್ಟಿನಲ್ಲಿ ಸರಿ ಹೋಗಲಾರದು ಎಂಬುದು ನನ್ನ ಅಭಿಪ್ರಾಯ. ಇದರಿಂದ ಡಿಸ್‌ಕ್ರಿಮಿನೇಟಾಗುತ್ತದೆ. There will be discrimination between the same Citizens. ಒಂದೇ ರಾಜ್ಯದಲ್ಲಿರತಕ್ಕಂತಹ ಹಳ್ಳಿಗಾಡಿನಲ್ಲಿ ವಾಸ ಮಾಡತಕ್ಕಂತಹ ಕಾರಣದಿಂದ ಅವರು ನ್ಯಾಯ ಪಂಚಾಯತಿಯ ವ್ಯಾಪ್ತಿಯೊಳಗೆ ಬರುವುದರಿಂದ ಮತ್ತು ದಾವಾವನ್ನು ಹಾಕುವುದರಿಂದ ಸಿವಿಲ್ ಪ್ರೊಸೀಜರ್ ಕೋಡ್ ಅಪ್ಲೈಯಾಗುವುದಿಲ್ಲವೆನ್ನುವ ಮಾತನ್ನು ಒಂದು ಕಡೆ ಹೇಳಿದ್ದೀರಿ. ಅದೇ ಪಟ್ಟಣದಲ್ಲಿ ಸ್ಮಾಲ್‌ಕಾಸ್ ಕೋರ್ಟ್ ಜ್ಯೂರಿಸ್‌ಡಿಕ್ಷನ್ ಬರುವುದರಿಂದ ಸಿವಿಲ್ ಪ್ರೊಸೀ ಕೋಡ್ ಅಪ್ಲೈಯಾಗುತ್ತದೆ ಎಂದು ಮತ್ತೊಂದು ಕಡೆ ಹೇಳಿದ್ದೀರಿ. ಇದರಿಂದ ಹಳ್ಳಿಗಾಡಿನ ಜನರಿಗೂ ಪಟ್ಟಣದ ಜನರಿಗೂ ಡಿಸ್‌ಕ್ರಿಮಿನೇಷನ್ ಆಗುತ್ತದೆ. ಇದನ್ನು ವಿಚಾರ ಮಾಡತಕ್ಕಂತಹದ್ದು ಉತ್ತಮವೆಂಬುದು ನನ್ನ ಅಭಿಪ್ರಾಯ. ನನ್ನ ದೃಷ್ಟಿಯಲ್ಲಿ ಇದು ಸರಿಹೋಗಲಾರದೆಂದು ಹೇಳುತ್ತೇನೆ. ಕೆಲವು "Suits for money due on contract." "Suits for the recovery of any moveable property or the value thereof ಎಂದು ಇದೆ. ಇದನ್ನು ಯೋಚನೆ ಮಾಡಿದ್ದೀರಾ ? ಏನು ಬೇಕಾದರೂ ಹೇಳಬಹುದೇ ?

K. G. Maheshwarappa.—Some time, mone matter referred to in the Nyaya panchayat Bill amounts to discrimination. Certain offences committed in the City will have to go before the Criminal Court and certain. Onecs will have to go before the Civil Court.

Shri K. H. Ranganath.—The Hon'ble member has thrown further light on the proposition. I quite agree with his point. Even from that angle also this matter will have to be looked into. I am thankful to the Hon'ble Member. ನ್ಯಾಯ ಪಂಚಾಯತಿಯ ಬಗ್ಗೆ ಉದ್ದೇಶಪೂರ್ವಕವಾಗಿ ನಾನು ಹೇಳುತ್ತಿಲ್ಲ. ನ್ಯಾಯ ಪಂಚಾಯತಿಯನ್ನು ಮಾಡಬೇಕೆನ್ನತಕ್ಕಂತ ಉದ್ದೇಶ ನಿಮಗೆ ಇರುವುದರಿಂದ ಮತ್ತು ಅದು ರಾಜ್ಯಾಂಗದ ಚೌಕಟ್ಟಿನೊಳಗೆ ಬರತಕ್ಕಂತಹ ಅವಕಾಶ ಇರುವುದರಿಂದ ಹಳ್ಳಿಗಾಡಿನಲ್ಲಿರತಕ್ಕಂತಹ ಒಬ್ಬ ವ್ಯಕ್ತಿಗೆ ಒಂದು ಅದೇ ಪಟ್ಟಿ ಇದರಲ್ಲಿರತಕ್ಕಂತಹ ಒಬ್ಬ ವಕ್ತಿಗೆ ಮತ್ತೊಂದು. ಈ ರೀತಿ ಡಿಸ್‌ಕ್ರಿಮಿನೇಟ್ ಆಗತಕ್ಕಂತಹ ಪರಿಸ್ಥಿತಿ ಇದೆ. ಈ ಬಿಲ್ಲಿನ ಷೆಡ್ಯೂಲ್‌ನಲ್ಲಿ ನೋಡಿ ಕೇಸುಗಳನ್ನು ಹಾಕಿದರೆ ಹೇಗೆ ? ಎಂಬುದನ್ನು ಮಾತ್ರ ಹೇಳಿದ್ದೇನೆಯೇ ಹೊರತು ಉದ್ದೇಶದಿಂದಲ್ಲ. ಅದು ಷೆಡ್ಯೂಲ್–1ರಲ್ಲಿ ಎಂದು ಕಾಣುತ್ತದೆ.

Dy. Speaker.—That is in vogue.

Shri K. H. Ranganath.—Then clause regarding appearace by authorised person. What is meant by "authorised person ನ್ಯಾಯ ಪಂಚಾಯತಿ ಆದರೆ ವಕೀಲರ ಹತ್ತಿರ ದನಗಳು ಹೋಗುವಂತಹ ವ್ಯವಸ್ಥೆಮಾಡಿದ್ದೀರಿ, ಆಮೇಲೆ 215ನೇ ಕಲಮಿನಲ್ಲಿ ಏನು ಹೇಳಿದ್ದೀರಿ ಅಂದರೆ.

(b) Ceases to reside for a period of three months within the jurisdiction of the Mandal Panchayat, without obtaining leave of absence which leave shall not exceed four months in any calendar year : or

(c) resigns his seat by writing under his hand addressed to the Mukhya Ficharaka ;

(2) Where a member of aMandal Panchayat is elected to be a member of Naya panchayat, his seat in the Mandal Panchayat, shall become vacant "

ತಮ್ಮ ಉದ್ದೇಶ ಏನಿದೆ ಎಂದರೆ ಹಳ್ಳಿಯಲ್ಲಿ ಆಗಬಹುದಾದ ತೊಂದರೆಗಳನ್ನು ಅಲ್ಲಿಯೇ ತಕ್ಷಣ ತೀರ್ಮಾನವಾಗಿ ಹೆಚ್ಚು ತೊಂದರೆಯಾಗದೆ ನ್ಯಾಯ ದೊರಕಬೇಕು ಎಂಬುದು. ಆದರೆ ಆ ಉದ್ದೇಶ ವನ್ನು ವಿಳಂಬ ಮಾಡುವುದಕ್ಕೆ ಅನುಕೂಲವಾಗತಕ್ಕಂತಹ ಕಲಮುಗಳು ಸುಮಾರು ಇವೆ. ಅದರ ಬಗ್ಗೆ ತಾವು ವಿಚಾರ ಮಾಡಬೇಕು. ಹೊಸ ವಿಚಾರ ಏನಿದೆ ? ಕಾನೂನು ಎಷ್ಟು ಹೆಚ್ಚು ಮಾಡುವುದರಿಂದ ತೊಂದರೆ ಕೂಡ ಜಾಸ್ತಿಯಾಗುತ್ತದೆ. ಮತ್ತೆ 215ರಲ್ಲಿ ಇನ್ನೊಂದು ಇದೆ. Leave of absence ಯಾರಿಂದ ಪಡೆಯತಕ್ಕಂತಹದ್ದು ? ನಿಮ್ಮ ಬಿಲ್ಲಿನಲ್ಲಿ ಅದು ಸೈಲೆಂಟ್. ನಿಯಮದ ಪ್ರಕಾರ ಸದಸ್ಯರ ತಾವು 60 ದಿವಸಗಳವರೆಗೆ ಆಬ್ಸೆನ್ಸ್ ತೆಗೆದುಕೊಳ್ಳಬೇಕಾದರೆ ತೆಗೆದುಕೊಳ್ಳಬಹುದು. 229ರ ಪ್ರಕಾರ ಲಿಮಿಟೇಶನ್ ಕೂಡಾ ಹಾಕಿದ್ದೀರಿ.

229. Limitation.—Every suit of the nature referred to in Section 224 instituted before a Nyaya Panchayat after the expiry of the period specified in respect thereof in the table below shall be dismissed although limitation has not been set up as a defence".

ಮತ್ತೆ ಕ್ರಿಮಿನಲ್ ಕೇಸುಗಳ ಬಗ್ಗೆ ಕಲಮು 235ರ ಪ್ರಕಾರ

Criminal cases : Clause 234.

"Limitation for Criminal proceedings, subject to the provisions of any law for the time being in force :-

No Nyaya Panchayat shall take cognizance of any offence under this Act after the expiry of there months from the date on which the offence was committed.

ಉದ್ದೇಶ ಪೂರ್ವಕವಾಗಿ ಏನಾದರೂ ಮಾಡಿ 3 ತಿಂಗಳು ಅವನು ಅಲ್ಲಿಗೆ ಹೋಗದ ಹಾಗೆ ಮಾಡಿ ಯಾರಿಂದಲೋ ಕೊಟ್ಟ ಹಾಗೆ ವ್ಯವಸ್ಥೆ ಮಾಡಿಬಿಟ್ಟರೆ ಅವನು ಏನು ಮಾಡಿದರೂ ನಡೆಯುತ್ತದೆ.

4 p. m.

ಮಾಡಿದ ಅಪರಾಧದಿಂದ ಬಚಾವ್ ಆಗಬಹುದು. ಈ ಬಿಲ್ಲಿನ Intention may be good. Don't you think that there is scope for misuse of this clause ? ಮಿಸ್‌ಯುಸ್ ಆಗುವುದಕ್ಕೆ ಸಾಧ್ಯತೆ ಇದೆ. ಮುಂದೆ ಕ್ಲಾಸ್ 241 ರಲ್ಲಿ ಈ ರೀತಿ ಹೇಳಿದ್ದೀರಿ. Disqualifications for trying a case :- (1) A Member of a Nyaya Panchayat, who is personally interested in any suit of criminal proceedings pending before is shall be disqualified from trying that case.

(2) If a party to a suit of criminal proceeding before a Nyaya Panchayat objects to any member thereof on the ground that he is personally interested in the suit or proceedings, and the member does not thereupon withdraw from the Nyaya Panchayat, the grounds of objection and the reasons for the contiuance of the member shall be recorded.' ನೀವು ಇದನ್ನು ಜಾರಿಗೆ ತರುವಾಗ ಪ್ರತಿ ಹೆಜ್ಜೆಯಲ್ಲೂ ಅಡ್ಡಿ ಆತಂಕಗಳು ಇರತಕ್ಕ ಕಲಂಗಳು ಇವೆ. ಕ್ಲಾಸ್ 246 ರಲ್ಲಿ ಈ ರೀತಿ ಹೇಳಿದ್ದೀರಿ.

"Appearance by authorised person etc :- Notwithstanding anything

contained in Section 245 a party to a proceeding may in writing authorise, any person, not being a legal practioner, to appear and plead for him before the Nyaya Panchayat". 245ರಲ್ಲಿ ವಕೀಲರು ಹಾಜರಾಗಬಹುದೆಂದು ಹೇಳಿದ್ದೀರಿ, ಆದರೆ 246 ರಲ್ಲಿ ಫೊಟ್ ಲಾಯರ್ ಹಾಜರಾಗಬಹುದೆಂದು ಹೇಳಿದ್ದೀರಿ. ಎಂದರೆ ಆದರಲ್ಲಿ ಫೂಟ್ ಲಾಯರ್ ಅಂಥ ಹೇಳಲಿಲ್ಲ. ಆದರೆ Not beeu local practitiner ಅಂದರೆ tout or foot-lawyer ಎಂದು ಅರ್ಥ ಬರುತ್ತದೆ.

Sri K. G. Mahewarappa :—Who is that any person ?

Sri K. H. Ranganath :—Probably the professional man i. e., a foot-lawyer. ಹಳ್ಳಿಗಾಡಿನಲ್ಲಿ ಇಂಥಾ ಜನರು ಹಾಜರಾಗತಕ್ಕದ್ದು.

ಶ್ರೀ ಅಬ್ದುಲ್ ನಜೀರಸಾಬ್.—ಫೂಟ್ ಲಾಯರ್ ಏತಕ್ಕೆ ಆಗಬಾರದು ? ನನ್ನ ತಮ್ಮ ಇರುತ್ತಾನೆ, ನನಗೆ ಹುಷಾರು ಇಲ್ಲದಿದ್ದರೆ ಆತನು ಏತಕ್ಕೆ ಹಾಜರಾಗಬಾರದು. ಈ ಸಂದರ್ಭದಲ್ಲಿ ನನಗೆ ಒಂದು ಕತೆ ನೆನಪಿಗೆ ಬರುತ್ತದೆ. "ಒಂದು ಸಾರಿ ಒಬ್ಬ ಗಾಣಿಗನು ಗಾಣ ಹೊಡೆಯುತ್ತಿದ್ದನಂತೆ, ಆತನು ತನ್ನ ಎತ್ತುಗಳ ಕೊರಳಿಗೆ ಗಂಟೆ ಕಟ್ಟಿದ್ದನಂತೆ, ಆ ಸಮಯದಲ್ಲಿ ಯಾರೋ ಒಬ್ಬರು ಬಂದು ಏತಕ್ಕೆ ಈ ರೀತಿ ಎತ್ತುಗಳ ಕೊರಳಿಗೆ ಗಂಟೆ ಕಟ್ಟಿದ್ದೀಯಾ ಎಂದು ಕೇಳಿದ್ದಕ್ಕೆ, ಆ ಗಾಣಿಗ ಹೇಳಿದನಂತೆ, ನಾನು ಮನೆಗೆ ಊಟಕ್ಕೆ ಹೋದಾಗ ಈ ಎತ್ತುಗಳು ಸುಮ್ಮನೆ ನಿಂತಿರುತ್ತವೆಯೋ ಅಥವಾ ಗಾಣವನ್ನು ಹೊಡೆಯುತ್ತಿರುವುವೊ ಎಂದು ಗೊತ್ತಾಗುವುದಕ್ಕೆ ಎಂದು ಹೇಳಿದನಂತೆ. ಒಂದು ಪಕ್ಷ ಅವು ನಿಂತುಕೊಂಡೆ ತನ್ನ ತಲೆಯನ್ನು ಅಲ್ಲಾಡಿಸಿದರೆ ಏನು ಮಾಡುತ್ತೀಯ ಎಂದು ಕೇಳಿದನಂತೆ'' ಹಾಗಾಯಿತು ಇದು.

Sri K. G. Maheswarappa.—Qualified person is excluded. So you say foot-lawyer.

ಶ್ರೀ ಕೆ. ಹೆಚ್. ರಂಗನಾಥ.—ಮಂತ್ರಿಗಳು ವಕೀಲರಲ್ಲ, ಉಪಾಧ್ಯಕ್ಷರು ವಕೀಲರಾಗಿದ್ದರು ಅವರಿಗೆ ಗೊತ್ತಿದೆ. ಅಂದರೆ ಹಳ್ಳಿಗಳಲ್ಲಿ ಇದನ್ನು ಬಳಸತಕ್ಕ ಭಾಷೆ, ಅದೃಷ್ಟಿಯಿಂದ ನಾನು ಹೇಳಿದೆ. ಈ ಅವಕಾಶವನ್ನು ಏತಕ್ಕೆ ಇಟ್ಟಿದ್ದೀರಿ ? ತೆಗೆದುಬಿಡಿ. ಪ್ರತಿ ಹೆಜ್ಜೆಯಲ್ಲೂ ಕೂಡ ತೊಡಕು ಇವೆ ಎಂಬುದು ನನ್ನ ಅಭಿಪ್ರಾಯ. ಪ್ರಬುದ್ಧತೆಗೆ 40 ವರ್ಷ ಮಾತ್ರ ಇರಬೇಕು ಎಂದು ಮಿತಿ ಇಟ್ಟಿದ್ದೀರಿ. ಅಂದರೆ ಆ ವಯಸ್ಸಿಗೆ ಪ್ರಬುದ್ಧತೆ ಬರಬಹುದೆಂದು ನಿಮ್ಮ ಅಭಿಪ್ರಾಯವೇ ? ಕೆಲವರಿಗೆ ವಿಷ್ಟು ವಯಸ್ಸಾದರೂ ಪ್ರಬುದ್ಧತೆ ಬರುವುದಿಲ್ಲ, ಕೆಲವರಿಗೆ ಚಿಕ್ಕ ವಯಸ್ಸಿನಲ್ಲಿಯೇ ಪ್ರಬುದ್ಧತೆ ಬರುತ್ತದೆ. 30 ವರ್ಷ 40 ವರ್ಷ ಏತಕ್ಕೆ ಮಾಡಿದರೋ ಗೊತ್ತಿಲ್ಲ. ಈ ವಿಚಾರಗಳು ಪ್ರವಾದೀ ಜನಗಳಿಗೆ ಒಳಪಟ್ಟಿರತಕ್ಕ ವಿಚಾರವಾದುದರಿಂದ ಟೀಕೆ ಟಿಪ್ಪಣಿಗಳು ಹೆಚ್ಚಾಗಿ ಬರಲಿಲ್ಲ. ಭೂ ನ್ಯಾಯ ಮಂಡಳಿಗಳು ಆದಾಗ ನ್ಯಾಯಾಧೀಶರು ಕೂಡ ಅದನ್ನು ಟೀಕೆ ಮಾಡಿದರು. ಏತಕ್ಕೆ ಎಂದರೆ ಅವರ ಆಸ್ತಿ ಹೋಗುತ್ತಿತ್ತು. ಇಲ್ಲಿ ಇರತಕ್ಕಂಥ ಜನ ಅಂಥಹವರೇ ಆಗಿರುವುದರಿಂದ ಟೀಕೆ ಬರಲಿಲ್ಲ. ಆ ದೃಷ್ಟಿಯಿಂದ ಓಪನ್ ಆಗಿ ದೊಡ್ಡ ದೊಡ್ಡ ಜನ ಸ್ಟೇಟ್‌ಮೆಂಟ್ ಕೊಡಲಿಲ್ಲ. Clause 247 says : "When any Nyaya Panchayat is of the opinion that any suit or criminal proceeding before it is of such a nature or is so difficult or important that it ought to be tried by a court or that the accused in the criminal proceeding ought to receive a punishment different in kind or more severe than that which the Nyaya Panchayat is empowered to inflict it shall stay the suit or criminal proceeding and refer the matter to the District court or the court of session, as the case may be, for orders." ನಿಮ್ಮ ಉದ್ದೇಶ ಇಲ್ಲಿ ಸಫಲವಾಗಿದೆಯೇ ? ಇದು ಹೆಚ್ಚು ಕಾಲ ಎಳೆಯುವುದಕ್ಕೆ ಸಾಧ್ಯವಾಗಿದೆಯೆ ? ಹೀಗಿರುವುದರಿಂದ ಅಲ್ಲಿ ತೀರ್ಮಾನವಾಗದೇ ವಾಪಸ್ಸು ಕಳುಹಿಸುವ ಪ್ರಸಂಗ ಬರುತ್ತದೆ. ಬರವಣಿಗೆ ಬರೆಯು ತಕ್ಕ ಕಾರಕೂನರು ಎಲ್ಲಿ ಏನೇನು ಇಡುತ್ತಾರೆ ಎಂಬುದನ್ನು ನೋಡುವುದು ಬಹಳ ಕಷ್ಟವಾಗುತ್ತದೆ. ಚಾಪ್ಟರ್ 14ರಲ್ಲಿ ಕೆಲವು ವಿಷಯಗಳನ್ನು ಹೇಳಿದ್ದಾರೆ. Clause 249 is relating to Power to transfer crimial proceedings. It reads : "If it is made to appear to the Court of Sessions that in the interest of justice it is necessary so to do, it may

on application made to it in this behalf transfer any criminal proceeding pending before a Nyaya Panchayat to another Nyaya Panchayat. ತಮ್ಮ ಎಲ್ಲಾ ಉದ್ದೇಶಗಳು ಇಲ್ಲಿ ವಿಫಲವಾಗುತ್ತವೆ.
5 ಜನ ಚುನಾಯಿತ ನ್ಯಾಯ ಪಂಚಾಯತ್ ಸದಸ್ಯರು ಏನು ಇದ್ದಾರೆ ಅವರಿಂದ ಪ್ರೊಪ್ರೈಟಿ ಆಫ್ ಲೀಗಾಲಿಟಿ, ಕರೆಕ್ಟ್‌ನೆಸ್ ಆಫ್ ದಿ ಡಿಕ್ರೀ ಮತ್ತು ಕ್ರಿಮಿನಲ್ ಪ್ರೊಸೀಡಿಂಗ್ಸ್ ಬಯಸುತ್ತೀರೊ ನೀವು? ಇದು ಸಾಧ್ಯವೇ? ರಿವಿಷನ್ ಆಫ್ ಕ್ರಿಮಿನಲ್ ಕೇಸುಗಳಲ್ಲೂ ಕೂಡ ಹೀಗೆ ಇದೆ. ಹೀಗೆ ಪ್ರತಿ ಹೆಜ್ಜೆ ಹೆಜ್ಜೆಗೂ ತೊಂದರೆ ಇರುತ್ತದೆ ಆದ್ದರಿಂದ ನ್ಯಾಯ ಪಂಚಾಯತಿಯನ್ನು ಪೂರ್ಣವಾಗಿ ಕೈಬಿಡಿ. ಜಿಲ್ಲಾ ಪರಿಷತ್‌ನವರು ಯಾರು ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆಯೋ ಅವರು ಮಾಡಿ ಕೊಳ್ಳಲಿ ಎಂದು ಹೇಳಿದ್ದೀರಿ. ಆದರೆ ಇದರಲ್ಲಿ ಇಂಥಹ ಕಷ್ಟಗಳಿಗೆ ಒಳಪಡುವುದರಿಂದ ಪುನರ್ ಪರಿಶೀಲನೆ ಮಾಡುವುದಕ್ಕೆ ಸ್ವಲ್ಪ ಅವಕಾಶ ಇರುವುದರಿಂದ ನ್ಯಾಯ ಪಂಚಾಯತ್‌ನ್ನು ಕೈಬಿಡುವುದು ಒಳ್ಳೆಯದೆಂದು ಹೇಳಬಯಸುತ್ತೇನೆ. ನ್ಯಾಯ ಪಂಚಾಯತ್ ಸದಸ್ಯರನ್ನು ತೆಗೆಯುವುದಕ್ಕೂ ಕೂಡ ಅವಕಾಶ ಮಾಡಿಕೊಟ್ಟಿದ್ದೀರಿ. ಈ ರೂಲ್ಸ್‌ನಲ್ಲಿ ಇನ್ನು ಸ್ವಲ್ಪ ಹೆಚ್ಚು ತೊಡಕು ಇರತಕ್ಕಂಥಾದ್ದು ಇದೆ, ನ್ಯಾಯ ಪಂಚಾಯತ್ ರೂಲ್ಸ್ ಷೆಡ್ಯೂಲ್ ಹಾಕಿ ಏನು ರೂಲ್ಸ್ ಮಾಡಿದ್ದೀರಿ ಅದರಲ್ಲಿ ಬಹಳ ತೊಡಕಿದೆ. Issue of summons, disposal of suits restoration ಇತ್ಯಾದಿಗಳಿಗೆ ಅರ್ಜಿ ಹಾಕತಕ್ಕದ್ದು. ಇದೆಲ್ಲಾ ವಕೀಲರಿಗೆ ಗೊತ್ತಿರತಕ್ಕ ವಿಚಾರ. ಇಲ್ಲಿ ವಿನಾಕಾರಣ ಎಷ್ಟು ದಿವಸ ಮುಂದಕ್ಕೆ ಕೇಸನ್ನು ಎಳೆಯುವುದಕ್ಕೆ ಸಾಧ್ಯವೋ ಅಷ್ಟು ದಿವಸ ಮುಂದಕ್ಕೆ ಎಳೆಯುವುದಕ್ಕೆ ಬೇಕಾದ ಕಲಂಗಳು ಇವೆ. ದೋಷರಹಿತವಾದ ಕಲಂಗಳ ವ್ಯವಸ್ಥೆ ಆಗಿಲ್ಲ. ಕಲಂಗಳು ಪೂರ್ಣವಾಗಿ ದೋಷಯುಕ್ತವಾಗಿವೆ. ಆದ್ದರಿಂದ ನನ್ನ ದೃಷ್ಟಿಯಲ್ಲಿ ನ್ಯಾಯ ಪಂಚಾಯಿತಿಗಳನ್ನು ಕೈಬಿಡತಕ್ಕದ್ದು ಸೂಕ್ತ. ಜಂಟಿ ಸಲಹಾ ಸಮಿತಿಯಲ್ಲಿ ವಿಚಾರ ಮಾಡಿ ಯಾವುದಾದರೂ ನ್ಯಾಯ ಪಂಚಾಯಿತಿಯನ್ನು ಉಳಿಸಿಕೊಳ್ಳಬೇಕು ಎಂದು ಜಿಲ್ಲಾ ಪರಿಷತ್‌ನವರು ಕೇಳಿಕೊಂಡರೆ ಅದಕ್ಕೆ ಏನು ಅವಕಾಶ ಮಾಡಿಕೊಟ್ಟಿದ್ದೀರಿ. ಆ ಪ್ರಕಾರ ಮಾಡಿದರೂ ಕೂಡ ಅದರಲ್ಲಿ ದೋಷಗಳು ಇರುವುದರಿಂದ ಜನರು ಕೋರ್ಟಿಗೆ ಹೋದರೆ ಯಾವ ತೊಂದರೆಯನ್ನು ಅನುಭವಿಸುತ್ತಾರೋ ಅದಕ್ಕಿಂತ ಹೆಚ್ಚು ತೊಂದರೆಯನ್ನು ಇಲ್ಲಿ ಅನುಭವಿಸಬೇಕಾಗಿರುವುದರಿಂದ ಮತ್ತು ಅಲ್ಲಿಗೆ ಹೋಗತಕ್ಕ ಜನರು ಬಹಳ ಮುಗ್ಧರಾಗಿರುವುದರಿಂದ ಈ ಪರಿಸರದಲ್ಲಿ ತೊಂದರೆ ಕೊಡುವ ಅವಕಾಶ ಇರುವುದರಿಂದ ಇದನ್ನು ಕೈಬಿಡುವುದು ಒಳ್ಳೆಯದೆಂದು ನಾನು ಹೇಳುತ್ತೇನೆ. ಇನ್ನೊಂದು ಪ್ರಮುಖವಾದ ವಿಚಾರ ಇದೆ. ಈ ವಿಷಯದಲ್ಲಿ ಮಾನ್ಯ ಮಹೇಶ್ವರಪ್ಪನವರು ಪರೋಕ್ಷವಾಗಿ ಸಹಾಯ ಮಾಡಿದ್ದಾರೆ. ರಾಜ್ಯದ ನಾಗರೀಕರಲ್ಲಿ ತಾರತಮ್ಯ ಮಾಡಿರುವ ಬಗ್ಗೆ ವಿಚಾರ ಮಾಡಬೇಕಾಗಿದೆ. ಹಣಕಾಸಿನ ಬಗ್ಗೆ ಹೇಳುವುದಾದರೆ ಪಂಚಾಯತ್ ಫಂಡ್, ಜಿಲ್ಲಾ ಪರಿಷತ್ ಫಂಡ್ ಏನು ಇದೆ ಅದನ್ನು ಸಾಧ್ಯವಾದರೆ ಮತ್ತೊಂದು ಸಾರಿ ವಿಚಾರ ಮಾಡಿ ತಿದ್ದುಪಡಿ ಯಾವುದರ ಮುಖಾಂತರ ವ್ಯವಸ್ಥೆ ಮಾಡುವುದಾದರೆ ಮಾಡಬೇಕೆಂದು ಹೇಳುತ್ತಾ ಇನ್ನೊಂದು ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಗ್ರಾಮಸಭೆಗಳ ಬಗ್ಗೆ ತಾವು ಚಿಂತನೆ ಮಾಡಿದ್ದೀರಿ. ಅಶೋಕಮೆಹ್ತಾ ರಿಪೋರ್ಟ್‌ನಲ್ಲೂ ಕೂಡ ಇದು ಪ್ರಸ್ತಾಪವಾಗಿದೆ, ಆ ವಿಚಾರವನ್ನು ತೆಗೆದುಕೊಂಡು ಹೇಳಿದ್ದೀರೋ ಏನೋ ನನಗೆ ಗೊತ್ತಿಲ್ಲ. ಅದನ್ನು ತಾವು ಸೇರಿಸಿದ್ದೀರಿ, ಅದನ್ನು ಸೇರಿಸಿ ಈ ಮಸೂದೆಯನ್ನು ತಂದಿದ್ದೀರಿ. ಗ್ರಾಮಸಭೆಗೆ ಪ್ರಾಧಾನ್ಯತೆ ಅಷ್ಟು ಇಲ್ಲ. ಮಂಡಲ್ ಪಂಚಾಯತಿ, ಗ್ರೂಪ್ ಪಂಚಾಯತಿ ಇರುವಾಗ ಆ ಗ್ರಾಮದ ಗ್ರಾಮಸಭೆ ಏನಿರುತ್ತದೆ, ಅವರು ಮತದಾರರಿಂದ ಆಯ್ಕೆಯಾಗಿ ಸದಸ್ಯರಾಗಿರುತ್ತಾರೆ. ಅವರ ಅಭಿಪ್ರಾಯಕ್ಕೆ ಮನ್ನಣೆ ಕೊಡತಕ್ಕದ್ದು ಇಲ್ಲಿ ಇಲ್ಲ. ಮೇಬಿ ಕನ್ಸೀಡರ್ ಎನ್ನುವ ಮಾತು ಇದೆ. ಈ ವಿಚಾರದ ಬಗ್ಗೆ ಮರು ಚಿಂತನೆ ಮಾಡತಕ್ಕದ್ದು ಅವಶ್ಯಕ. ಗ್ರಾಮಸಭೆಯಿಂದ ಬರತಕ್ಕ ಶಿಫಾರಸ್ಸು ಮತ್ತು ಸಲಹೆಗಳನ್ನು ಅದ್ಯತೆ ಕೊಟ್ಟು ಮಂಡಲ್ ಪಂಚಾಯತ್‌ನಲ್ಲಿ ಬೇಕು ಎನ್ನುವ ಮಾತನ್ನು ತಾವು ಹೇಳಿದ್ದೀರಿ. ಇದಕ್ಕೆ ಎಷ್ಟು ಪ್ರಾಮುಖ್ಯತೆಯನ್ನು ಕೊಡಬೇಕಾಗಿತ್ತೋ ಅಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿಲ್ಲ. ಇದರ ಬಗ್ಗೆ ಕೂಡ ಚಿಂತನೆ ಮಾಡಬೇಕೆಂದು ನಾನು ಹೇಳುತ್ತೇನೆ. ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಖಾಜಿ ನ್ಯಾಯದ ತರಹ ಮಾಡಿ ವಿಧಾನಸಭೆಯ ಸದಸ್ಯರನ್ನು ತಾಲ್ಲೂಕು ಪಂಚಾಯತಿಯ ಅಧ್ಯಕ್ಷರನ್ನಾಗಿ ಮಾಡುವುದಕ್ಕೆ ಹೊರಟಿದ್ದೀರಿ. ನಾನು ವೈಯಕ್ತಿಕವಾಗಿ ಈ ಅಭಿಪ್ರಾಯಕ್ಕೆ ವಿರೋಧವಾಗಿದ್ದೇನೆ. ಅದು ಸರಿಯಲ್ಲ ತಾಲ್ಲೂಕು ಅಭಿವೃದ್ಧಿ ಮಂಡಳಿಗಳಿಗೆ ಯಾವರೀತಿ ಚುನಾವಣೆ ಮಾಡುತ್ತಾರೆ ಆ ರೀತಿ ಚುನಾವಣೆ ಮಾಡತಕ್ಕ ವ್ಯವಸ್ಥೆಯಾಗಬೇಕು. ಆಗಮಾತ್ರ ತ್ರಿಟೈರ್ ಸಿಸ್ಟಮ್ ಏನಿದೆ ಅದಕ್ಕೊಂದು ಅರ್ಥ ಬರುತ್ತದೆ. ಚುನಾವಣೆ ಮಾಡಿ ಎಲೆಕ್ಟ್ ಮಾಡುವ ಪದ್ಧತಿ ಇರಬೇಕು. ಇಲ್ಲದಿದ್ದರೆ ಬರುವುದು ತ್ರಿಸಿಸ್ಟಮ್ ಬರುವುದಕ್ಕೆ ಸಾಧ್ಯವಿಲ್ಲ. ಶಾಸಕರನ್ನು ತಾಲ್ಲೂಕು ಪಂಚಾಯತಿಗಳಿಗೆ

ಅಧ್ಯಕ್ಷರನ್ನಾಗಿ ಮಾಡುವುದಕ್ಕೆ ಹೊರಟಿರುವುದು ಸರಿಯಲ್ಲ. ತಾವು ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಲಿಕ್ಕೆ ಯಾವರೀತಿ ಚುನಾವಣೆಯಾಗುತ್ತದೆ ಅದೇರೀತಿ ತಾಲ್ಲೂಕು ಪಂಚಾಯತಿ ಅಧ್ಯಕ್ಷರನ್ನು ಆಯ್ಕೆ ಮಾಡುವಾಗ ಚುನಾವಣೆಯ ವ್ಯವಸ್ಥೆ ಇರಬೇಕು. ಇದರ ಬಗ್ಗೆ ಮರು ಚಿಂತನೆ ಮಾಡಬೇಕೆಂದು ಹೇಳಿ ನನಗೆ ಮಾತನಾಡಲು ಸಮಯ ಕೊಟ್ಟಂತಹ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರಾದ ರಂಗನಾಥ್‌ರವರು ಪಂಚಾಯತಿ ಮತ್ತು ಜಿಲ್ಲಾ ಪರಿಷತ್‌ನ ಒಂದು ಮೌಲ್ಯ, ಸಿದ್ಧಾಂತ ಈಗ ನಮ್ಮ ಮುಂದಿರತಕ್ಕ ಮಸೂದೆಯಲ್ಲಿ ಯಾವರೀತಿಯಲ್ಲಿದೆ ಎಂಬುದನ್ನು ವ್ಯವಹಾರಿಕವಾಗಿ ಮತ್ತು ನೈತಿಕವಾಗಿ ಹೇಗೆ ಕೆಲವು ಅಸಂಘಟಿತ ವಿಚಾರಗಳನ್ನು ಹೊಂದಿಕೊಂಡಿದೆಯೆಂದು ಹೇಳಿದ್ದಾರೆ. ಈ ಮಸೂದೆ ಪ್ರಗತಿಪರವಾದ ಮಸೂದೆ, ಅದರಲ್ಲಿ ಭಿನ್ನಾಭಿಪ್ರಾಯ ವಿಲ್ಲ. ಈ ಮಸೂದೆಯನ್ನು ನಮ್ಮ ಪಕ್ಷ ಕಟ್ಟಕಡೆಯಲ್ಲಿರತಕ್ಕ ವ್ಯಕ್ತಿ ಯಾರಿದ್ದಾನೆ ಅವನಿಗೂ ಕೂಡ ಸಾಮಾಜಿಕ ನ್ಯಾಯ ಆರ್ಥಿಕ ನ್ಯಾಯ ಸಿಗುವಂತಹ ದಿಸೆಯಲ್ಲಿ ಆಗಾಗ ಇಂತಹ ಪ್ರಯೋಗಗಳು ಆಗುತ್ತಿರಬೇಕು. ಇಂತಹ ಪ್ರಯೋಗಗಳು ಆದಾಗ ಮಾತ್ರ ನಾವು ಇಟ್ಟುಕೊಂಡಂತಹ ಉದ್ದೇಶಗಳನ್ನು ಸಾಧನೆ ಮಾಡಲಿಕ್ಕೆ ಸಾಧ್ಯವಾಗುತ್ತದೆ. 1956ನೇ ಇಸವಿಯಲ್ಲಿ ಮಾಡಿದಂತಹ ಪ್ರಯೋಗ ಸರಿ ಎಂದರೆ ಆಡಳಿತ ವಿಕೇಂದ್ರೀಕರಣದಲ್ಲಿ ಪಂಚಾಯತಿ ತತ್ವವನ್ನು ಅನುಷ್ಠಾನ ಮಾಡತಕ್ಕ ದಿಸೆಯಲ್ಲಿ ಆಲೋಚನೆ ಮಾಡಬಾರದೆಂದು ಇದ್ದರೆ, ಅದು ಬದಲಾವಣೆಯಾಗತಕ್ಕ ಸಮಾಜಕ್ಕೆ ವಿರೋಧದ ಹಾದಿಯಲ್ಲಿ ಹೋದಹಾಗೆ ಆಗುತ್ತದೆ. 1956ನೇ ಇಸವಿಯಲ್ಲಿ ಅಂತಹ ಬದಲಾವಣೆಯ ಬಗ್ಗೆ ಯೂ ಸಹ ಸಾಕಷ್ಟು ಸದಸ್ಯರು ವಿಚಾರ ಮಾಡಿದ್ದಾರೆ. ನಾವು ಮದ್ರಾಸ್ ಪ್ರಾಂತ್ಯದಲ್ಲಿ ಇದ್ದಾಗ ಡಿಸ್ಟ್ರಿಕ್ಟ್ ಬೋರ್ಡ್ ಎಂದು ಇತ್ತು. ಆಗ ತಾಲ್ಲೂಕುಬೋರ್ಡ್‌ಗಳು ಇರಲಿಲ್ಲ. ಪಂಚಾಯತಿಗಳನ್ನು ಮಾಡಿದ್ದುದು ಅದು ಒಂದು ಪ್ರಯೋಗ. ಅದು ಕೂಡ ಆಗಿನ ಕಾಲಕ್ಕೆ ಅದೊಂದು ಪ್ರಯೋಗ. ಈಗ ಅದು ಯಶಸ್ವಿಯಾಗಿದೆಯೇ ? ಎಸ್. ಕೆ. ಡೇ ಅವರು ಇವೊತ್ತು ಇಲ್ಲ. ಅವರು ಬ್ಲಾಕ್ ಮಟ್ಟದಲ್ಲಿ ಅದನ್ನು ಪ್ರಯೋಗ ಮಾಡಿದರು ; ಇವೊತ್ತು ನಾವು ಅನೇಕ ಕಟ್ಟಡಗಳನ್ನು ನೋಡುತ್ತೇವೆ. ಕೃಷಿ ಅಭಿವೃದ್ಧಿ. ಕೃಷಿಯ ವಿಸ್ತರಣಾ ಕ್ಷೇತ್ರದಲ್ಲಿ ಆ ಸಂದರ್ಭದಲ್ಲಿ ಒಂದು ರೀತಿಯ ಕ್ರಾಂತಿಯಾದದ್ದನ್ನು ಕೂಡ ನಾವು ಚಿಕ್ಕವರಿದ್ದಾಗ ನೋಡಿದ್ದೇವೆ. ಆಗ ನಾವು ಹಳ್ಳಿಯ ಮಕ್ಕಳು, ಕೃಷಿ ಮಾಹಿತಿಗೆ ಬೇಕಾದ ವಿವರಗಳು ಯಾವರೀತಿ ಪಬ್ಲಿಷ್ ಆಗುತ್ತಿತ್ತು, ಅಂತಹ ಉಪಯುಕ್ತವಾದ ಪತ್ರಿಕೆಗಳು ಇವೊತ್ತು ಇಲ್ಲ. ಆವೊತ್ತು ನನಗೆ ಎಸ್. ಎಸ್. ಎಲ್. ಸಿ. ಕೂಡ ಆಗಿರಲಿಲ. ಪಬ್ಲಿಷ್ ಆಗುತ್ತಿದ್ದ ಪುಸ್ತಕಗಳನ್ನು ಆಗ ನಮಗೆ ಓದಲಿಕ್ಕೆ ಸಹ ಗೊತ್ತಿಲ್ಲ. ಆದರೂ ಕೂಡ ಆ ಪುಸ್ತಕಗಳ ಸೈಜು, ಬಣ್ಣ ಎಲ್ಲಾ ನನಗೆ ನೆನಪು ಇದೆ. ನಾವು ಆಗ ಚಿಕ್ಕ ಮಕ್ಕಳು, ಯಾವರೀತಿ ಮರದ ಎಲೆಗಳಿಂದ ಗೊಬ್ಬರ ಮಾಡುವುದು, ಯಾವ ಸಸಿಗಳನ್ನು ನೆಡುವುದು ಕೆಲವು ಪ್ರಯೋಗಗಳನ್ನು ಮಾಡುವಂತಹದ್ದು ಇತ್ತು. ಈಗ ಅಂತಹ ಸಾಹಿತ್ಯ ಕಾಣುತ್ತಿಲ್ಲ. ಸಾಮಾನ್ಯ ವಿದ್ಯೆ, ಕೃಷಿ ಮಾಡುವ ಪದ್ಧತಿ ಗ್ರಾಮಾಂತರ ಪ್ರದೇಶಗಳಿಗೆ ಹೋಗಿದೆಯೆ ? ಈಗ ಅಂತಹ ಒಂದು ಪುಸ್ತಕ ಕೂಡ ಕಾಣುತ್ತಿಲ್ಲ. ಹೊಸ ಪ್ರಯೋಗಗಳನ್ನು ನಾವು ಮಾಡಬೇಕು, ಕೃಷಿಯಲ್ಲಿ ಹೆಚ್ಚು ಉತ್ಪಾದನೆ ಬರುವಂತೆ ಮಾಡಬೇಕು ಇದರ ಬಗ್ಗೆ ಹೆಚ್ಚು ಚಿಂತನೆ ನಮಗೆ ಕಾಣುತ್ತಿಲ್ಲ. ಪಂಚಾಯತಿ ಪದ್ಧತಿ ಬಂತು, ತಾಲ್ಲೂಕುಬೋರ್ಡ್ ಆಯಿತು. ಆಮೇಲೆ ಜಿಲ್ಲಾಮಟ್ಟದಲ್ಲಿ ಚುನಾಯಿತರಾದ ಪ್ರತಿನಿಧಿಗಳು ಬೇಡವೆನ್ನುವ ಅಭಿಪ್ರಾಯಕ್ಕೆ ಬಂದಿದ್ದಾರೆ. ನಾನು ಅದರ ಬಗ್ಗೆ ಸೂಕ್ಷ್ಮವಾಗಿ ಪ್ರಸ್ತಾಪಮಾಡುತ್ತೇನೆ. ಹೆಚ್ಚು ವಿವರಣೆಗೆ ನಾನು ಹೋಗುವುದಿಲ್ಲ. ತಾಲ್ಲೂಕು ಮಟ್ಟದಲ್ಲಿ ಹೆಚ್ಚು ಆಡಳಿತ ಕೊಟ್ಟಮೇಲೆ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಕೈಗೊಂಡಿದ್ದಾರೆ. ಹೆಚ್ಚು ಕಾರ್ಯಕ್ರಮಗಳನ್ನು ಕೊಟ್ಟು ನೋಡಿದ್ದೇವೆ. ಎನ್. ಆರ್. ಇ. ಪಿ. ಮತ್ತು ಐ.ಆರ್. ಡಿ. ಪಿ. ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲಿಕ್ಕೆ ತಾಲ್ಲೂಕುಬೋರ್ಡ್‌ನವರು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ನಾವು ಅವರಿಗೆ ಈ ಕೆಲಸಗಳನ್ನು ವಹಿಸಿಕೊಟ್ಟಾಗ ಅವರು ಬಹಳ ಯಶಸ್ವಿಯಾಗಿ ಪರಿಣಾಮಕಾರಿಯಾಗಿ ಮಾಡಿದ್ದಾರೆ. ಪಂಚಾಯತಿಗಳು ಕೂಡ ಒಳ್ಳೆಯ ಕೆಲಸಗಳನ್ನು ಮಾಡಿವೆ. ಕೆಲವು ಪಂಚಾಯತಿಗಳು ಧಕ್ಷತೆಯಿಂದ ಕೆಲಸಮಾಡದೆ ಇರಬಹುದು, ಆದರೆ ಇವರು ನಾವು ಕೊಟ್ಟಂತಹ ಯೋಜನೆಗಳನ್ನು ಪ್ರಗತಿಪರವಾಗಿ ಜಾರಿಗೆ ತಂದಿವೆ. ಆರ್ಥಿಕಸಂಪನ್ಮೂಲವನ್ನು ಹೆಚ್ಚು ಮಾಡಿಕೊಳ್ಳಲಿಕ್ಕೆ ಆಡಳಿತ ವಿಕೇಂದ್ರೀಕರಣವನ್ನು ಮಾಡಿ ಒಂದು ಕಾರ್ಯಕ್ರಮ ಕೊಟ್ಟಾಗ ಅದನ್ನು ಯಶಸ್ವಿಯಾಗಿ ಅನುಷ್ಠಾನದಲ್ಲಿ ತಂದಂತಹ ತಾಲ್ಲೂಕು ಬೋರ್ಡ್‌ಗಳು ಪಂಚಾಯತಿಗಳನ್ನು ನಾವು ನೋಡಿದ್ದೇವೆ. ನಾವು ಮಾಡಿದಂತಹ ಪ್ರಯೋಗ ಯಶಸ್ವಿಯಾಗಿದೆ. ಎನ್. ಆರ್. ಡಿ. ಪಿ. ಕಾರ್ಯಕ್ರಮಗಳನ್ನು ಮತ್ತು ಅನೇಕ ಕಾರ್ಯಕ್ರಮಗಳನ್ನು ಈ ಸಂಸ್ಥೆಗಳು ಯಶಸ್ವಿಯಾಗಿ ನಿರ್ವಹಿಸಿವೆ. ಅಂತಹ ಸಂಸ್ಥೆಗಳಿಗೆ ಅವು ಮಾಡಿದಂತಹ ಕೆಲಸಕಾರ್ಯಗಳಿಗೆ ಸರ್ಟಿಫಿಕೇಟ್ ಕೊಡಲಾಗಿದೆ. ನಾವು ಎಷ್ಟೇ ಕೆಲಸ

ಕಾರ್ಯಗಳನ್ನು ಕೊಟ್ಟರೂ ಆ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿದಂತಹ ಸಂಸ್ಥೆಗಳನ್ನು ನಾವು ಈಗ ಕೈಬಿಡುತ್ತಿದ್ದೇವೆ. ಈಗ ಒಂದು ಹೊಸ ಮಂಡಳದ ಒಂದು ಪ್ರಯೋಗ ಮಾಡೋಣ, ಜಿಲ್ಲಾ ಪರಿಷತ್‌ನ ಪ್ರಯೋಗ ಮಾಡೋಣವೆಂದು ತಾವು ಹೊರಟಿದ್ದೀರಿ.

ಈ ದೇಶದಲ್ಲಿ ನಾವು ಇದ್ದೇವೆ. ಈ ಸಿದ್ಧಾಂತದ ಬಗ್ಗೆ ನಮ್ಮ ವಿರೋಧ ಇಲ್ಲ. ನಾವು ನೀವು ಈ ಮೂಲಭೂತವಾದ ಪ್ರಶ್ನೆಗೆ ಹಿಂದೂ ಕೂಡ ಮಾತನಾಡಿದ್ದೇವೆ. ಈ ದೇಶದಲ್ಲಿ ಜಿಲ್ಲಾ ಪರಿಷತ್‌ಗಳು ಒಂದು ಪ್ರಯೋಗ ಮಾಡುವುದಕ್ಕೆ ನಾವೇನೂ ಅಡ್ಡ ಬರುವುದಿಲ್ಲ ಜಿಲ್ಲಾ ಮಟ್ಟದಲ್ಲೂ ಕೂಡ ಅಧಿಕಾರದ ಒಂದು ಪ್ರಯೋಗ ಆಗಬೇಕು ಎನ್ನುವ ಇಚ್ಛೆಯೂ ಕೂಡ ಆಗಿದೆ. ಮಾನ್ಯ ಅಧ್ಯಕ್ಷರೇ ಇವೊತ್ತಿನ ದಿವಸ ಯಾವುದೇ ಒಂದು ಪ್ರಯೋಗ ಭರತಖಂಡದ ಒಂದು ದೇಶದಲ್ಲಿ ಮಾಡಬೇಕಾದರೆ ನಾವು ಈ ಒಂದು ಪ್ರಯೋಗವನ್ನು ಮಾಡತಕ್ಕಂಥ ಒಂದು ದೃಷ್ಟಿಯಲ್ಲಿ ಏನು ಮಾಡಬೇಕು ಎಂದರೆ ದಲಿತರ ಪ್ರಭಾವ ಇರಬೇಕು, ಪ್ರತಿ ಹೆಜ್ಜೆಯಲ್ಲೂ ಇರಬೇಕು. ದಲಿತರ ಉದ್ಧಾರದ ಪ್ರಭಾವದ ಕಡೆ ನಮ್ಮ ಈ ಮಸೂದೆ ಇರಬೇಕು, ಅದು ಕಾರ್ಯಾಚರಣೆಯಲ್ಲೂ ಕೂಡ ಬರಬೇಕು. ಈ ದೃಷ್ಟಿಯನ್ನಿಟ್ಟುಕೊಂಡು ನೋಡಿದರೆ ನಾವು ಇದನ್ನು ಸ್ಥೂಲವಾಗಿ ಪ್ರಸ್ತಾಪ ಮಾಡುವುದಾದರೆ ಈಗಾಗಲೇ ಇದರ ವಿವರಗಳಲ್ಲೂ ಆಗಿಬಿಟ್ಟಿದೆ. ಇನ್ನು ಏನು ಮಾಡುವುದಕ್ಕೂ ಖಂಡಿತ ಹೋಗುವುದಕ್ಕಾಗುವುದಿಲ್ಲ. ಆದರೆ ಈ ದೃಷ್ಟಿಯನ್ನಿಟ್ಟುಕೊಂಡು ನೋಡಿದಾಗ ಈ ಮಸೂದೆಯಲ್ಲಿ ಎಷ್ಟರಮಟ್ಟಿಗೆ ಸಾಮಾಜಿಕ ನ್ಯಾಯವನ್ನು ಉಂಟು ಮಾಡುವುದಕ್ಕೆ ಮತ್ತು ಇದರ ಉದ್ದೇಶ ಏನು ಇದೆ ಅದನ್ನು ನೆರವೇರಿಸುವುದಕ್ಕೆ ಆಗುತ್ತದೆಯೋ ಎನ್ನುವುದನ್ನು ನೋಡಬೇಕಾಗಿದೆ. ಈ ಮಸೂದೆಯ ಉದ್ದೇಶ ಏನು ಇದೆ ಇದರ ಬಗ್ಗೆ ನಾವು ಚರ್ಚೆ ಮಾಡುತ್ತಾ ಇಲ್ಲ, ನೀವು ಚರ್ಚೆ ಮಾಡುತ್ತಾ ಇಲ್ಲ. ಈಗ ಗ್ರಾಮಾಂತರ ಪ್ರದೇಶದಲ್ಲಿ ಯಾವ ಸಂಪನ್ಮೂಲಗಳು ಇವೆ ಅವುಗಳ ಒಂದು ವಿತರಣೆ ಸಾಮಾಜಿಕ ನ್ಯಾಯವನ್ನು ಕೊಡತಕ್ಕಂಥ ದೃಷ್ಟಿಯಲ್ಲಿ ಆಗಬೇಕು. Equitable distribution of resources in rural sector. ಇದು ಬಹಳ ಪ್ರಾಮುಖ್ಯವಾದ ಉದ್ದೇಶ. ಎರಡನೆಯದಾಗಿ, ಇನ್ನು ಏನಾಗಬೇಕು ಎಂದರೆ ರಾಜಕೀಯ ನೀತಿ ಮತ್ತು ನ್ಯಾಯ ಇದು ಗ್ರಾಸ್‌ರೂಟ್ ಲೆವಲ್‌ನಿಂದ ಬರಬೇಕು. ಆರೀತಿ ಹೋದಾಗ ಈಗ ಇರತಕ್ಕಂಥ ಪಟ್ಟಭದ್ರ ಹಿತಾಸಕ್ತಿಗಳವರಿಗೆ ಸ್ಥಳೀಯವಾಗಿ ಇರತಕ್ಕಂಥ ಜನಕ್ಕೆ ಕಡಿವಾಣ ಹಾಕಿದಂತಾಗುತ್ತದೆ. ಅಲ್ಲದೆ ಈ ಒಂದು ತಂತ್ರದಿಂದ ಮ್ಯಾನ್ಯುಪ್ಯಲೇಷನ್ ಆಗುವುದೂ ತಪ್ಪುತ್ತದೆ. ಈ ಒಂದು ರೂಟ್‌ನಲ್ಲಿ ಇದನ್ನು ತೆಗೆದುಕೊಂಡು ಹೋಗಬೇಕಾದಂಥ ಅವಶ್ಯಕತೆ ಇದೆ, ನಾನು ಮೊದಲೇ ಹೇಳಿದ ಹಾಗೆ ಇದನ್ನು ಗ್ರಾಸ್‌ರೂಟ್‌ನಲ್ಲಿ ತೆಗೆದುಕೊಂಡು ಹೋದರೆ ಸ್ಥಳೀಯ ಯೋಜನೆಗಳನ್ನು ಏನು ಹಾಕಿಕೊಂಡಿದ್ದೀರಿ ಆ ಯೋಜನೆಗಳನ್ನು ಹೆಚ್ಚು ಪರಿಣಾಮಕಾರಿಯಾದ ರೀತಿಯಲ್ಲಿ ಯಶಸ್ವಿಯಾಗಿ ಆ ಸಂಸ್ಥೆಗಳು ಮಾಡಿಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ. ನಾವು ಮೊದಲಿನಿಂದಲೂ ಕೂಡ ಈ ಮಾತನ್ನು ಹೇಳುತ್ತಿದ್ದೇವೆ. ಆದರೆ ಈ ಒಂದು ಪ್ರಯತ್ನದಲ್ಲಿ ತಮ್ಮ ಮಸೂದೆ ಬಂದರೆ ಯಾವ ಒಂದು ಉದ್ದೇಶದಿಂದ ಈ ಮಸೂದೆಯನ್ನು ಈ ಸದನದಲ್ಲಿ ತಂದಿದ್ದೀರೋ ಆ ಉದ್ದೇಶ ಖಂಡಿತ ಸಾಧನೆಯಾಗುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಈ ಮಸೂದೆಯಲ್ಲಿ ಒಂದು ಸಂಶಯ ಬರುತ್ತದೆ. ಈ ಸಂಶಯವನ್ನು ನಿವಾರಣೆಮಾಡಬೇಕು. ತಾತ್ವಿಕವಾಗಿ ಸೈದ್ಧಾಂತಿಕವಾಗಿ ಇದು ಕಾರ್ಯಾಚರಣೆಯಲ್ಲಿ ಬರಬೇಕು ಎಂದು ನಾನು ಆಗಾಗ್ಗೆ ಹೇಳುತ್ತಿದ್ದೇನೆ. ಇದರಲ್ಲಿ ಒಂದು ಸಂದೇಹ ಏನು ಬರುತ್ತದೆ ಎಂದರೆ, This may result into an elected buracracy ಎಂದು. ಹಾಗಾಬಾರದು. ಆಗ ನಾವು ಆಶ್ಚರ್ಯಪಡಬೇಕಾಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಗ್ರಾಮಸಭೆ ಏನು ಇದೆ ಅದು ತನ್ನ ಅಧಿಕಾರದಲ್ಲಿ ಒಂದುರೀತಿಯಾಗಿ ಜಾತ್ರೆ ನಡೆದ ಹಾಗೆ ನಡೆಯಬಹುದು. ಯಾವುದಾದರೂ ಹಳ್ಳಿಯಲ್ಲೋ, ಇಲ್ಲವೇ ಸೊರಬದಲ್ಲೋ ಇಲ್ಲವೇ ಗುಂಡ್ಲುಪೇಟೆಯಲ್ಲೋ ಯಾವರೀತಿಯಾದ ಒಂದು ಜಾತ್ರೆ ನಡೆಯುತ್ತದೋ ಆರೀತಿಯಾದ ಹಾಗೆ ಆಗುತ್ತದೆ. ಹಾಗಾಗಬಾರದು. ಆದುದರಿಂದಲೇ ನಾನು ಹೇಳುವುದು ಇದಕ್ಕೆ ಒಂದು ಸೈದ್ಧಾಂತಿಕ ಹಿನ್ನೆಲೆ ಕೊಟ್ಟು ಇದನ್ನು ಪುಷ್ಟೀಕರಿಸುವಂಥ ಶಕ್ತಿ ಕೊಡಬೇಕು. ಗ್ರಾಸ್ ರೂಟ್ ಲೆವಲ್‌ನಲ್ಲಿ ಈಗ ಅಧಿಕಾರಇಲ್ಲ. ಈ ಮಸೂದೆಯಲ್ಲಿ ಏನು ಮಾಡಿದ್ದೀರಿ ಎಂದರೆ ಪರಿಷತ್ತಿನಿಂದ ತಾಲ್ಲೂಕು ಸಮಿತಿಗೆ, ತಾಲ್ಲೂಕು ಸಮಿತಿಯಿಂದ ಮಂಡಲ ಪಂಚಾಯಿತಿಗೆ, ಮಂಡಲ ಪಂಚಾಯಿತಿಯಿಂದ ಗ್ರಾಮಸಭೆಗೆ ಅಧಿಕಾರ ಕೊಟ್ಟಿದ್ದೀರಿ. ಈ ಗ್ರಾಮ ಸಭೆಗೆ ಅಧಿಕಾರ ಬರುವ ಹೊತ್ತಿಗೆ ಅಧಿಕಾರವೆಲ್ಲಾ ಡೈಲ್ಯೂಟ್ ಆಗಿರುತ್ತದೆ. ಒಟ್ಟಿನಲ್ಲಿ ಇದರ ತಾತ್ಪರ್ಯ ಹೇಳಬೇಕಾದರೆ ಗ್ರಾಮಸಭೆಯಿಂದ ರಾಜ್ಯ ಮಟ್ಟಕ್ಕೆ ಅಧಿಕಾರ ವಿಕೇಂದ್ರೀಕರಣ ಆಗಬೇಕೇ ವಿನಾಹ ರಾಜ್ಯಮಟ್ಟದಿಂದ ಗ್ರಾಮಸಭೆಗೆ ಆಗಬಾರದು. ಗ್ರಾಮಸಭೆಗೆ ಅಧಿಕಾರ ಬರುವ ಹೊತ್ತಿಗೆ ಅಧಿಕಾರವೆಲ್ಲಾ ಫಿಲ್ಟರ್ ಆಗಿಬಿಡುತ್ತದೆ. ಇವೆಲ್ಲಾ ಲೆಕ್ಕದಪ್ರಕಾರ ಬರುತ್ತದೆ. ಕೊನೆಗೆ ಆ ಗ್ರಾಮಸಭೆಗೆ ಅಧಿಕಾರ ಏನೂ ಉಳಿಯುವುದಿಲ್ಲ. ಕೊನೆಗೆ ಸಂತೆ ತರಹ ಆಗುತ್ತದೆ. ಡ್ರಾಫ್ಟ್ ಮಾಡಿರುವವರು ಈ ಮಸೂದೆಯನ್ನು ಸರಿಯಾಗಿ ಡ್ರಾಫ್ಟ್

ಮಾಡಿಲ್ಲ. ಅವರಿಗೆ ಸೋಷಿಯಾಲಿಜಿಕಲ್ ಬ್ಯಾಕ್‌ಗ್ರೌಂಡ್ ಇಲ್ಲ ಮತ್ತು ಸೊಸೈಟಿಗೆ ಕಮಿಟ್‌ಮೆಂಟ್ ಇಲ್ಲ. ಇದು ಮೆಕ್ಯಾನಿಕಲ್ ಡ್ರಾಫ್ಟಿಂಗ್ ತರಹ ಆಗಿದೆ. ನಾನು ಈ ಮಸೂದೆಯ ಉದ್ದೇಶವನ್ನು ಪ್ರಶ್ನೆ ಮಾಡುತ್ತಾ ಇಲ್ಲ. ನಾವು ಪ್ರಾರಂಭದಲ್ಲೇ ಹೇಳಿದೆವು. ಗ್ರಾಮಸಭೆಗೆ ಮೊದಲು ಅಧಿಕಾರ ಕೊಟ್ಟು, ನಂತರ ತಾಲ್ಲೂಕು ಸಮಿತಿ, ನಂತರ ಜಿಲ್ಲಾ ಸಮಿತಿಗೆ ಅಧಿಕಾರ ಕೊಡಬೇಕು ಎಂದು ಅದೇಕೋ ನಮ್ಮ ದೃಷ್ಟಿಕೋಣ ನಿಮಗೆ ಸರಿಬರಲಿಲ್ಲ. ಈ ಮಸೂದೆಯನ್ನು ನಾನು ಅಭ್ಯಾಸ ಮಾಡಿ ನೋಡಿದಾಗ ಒಂದನೆಯ ಸೆಕ್ಷನ್, ಎರಡನೆಯ ಸೆಕ್ಷನ್ ಮತ್ತು ಸಬ್‌ಕ್ಲಾಸ್ ಇವನ್ನೆಲ್ಲಾ ನೋಡಿದೆ ಅದರಲ್ಲಿ ನಾನು ಹೇಳುವುದನ್ನೆಲ್ಲಾ ಸರಿಪಡಿಸಿ ಇಲ್ಲಿ ತರಲಿಕ್ಕಾಗುವುದಿಲ್ಲ. ಗ್ರಾಮಾಂತರ ಪ್ರದೇಶದಲ್ಲಿರುವ ಜನರ ಜೀವನದ ನೋವಿನ ಬಗ್ಗೆ ಹೃದಯ ಸ್ಪಂದನ ಇದರಲ್ಲಿ ಆಗಬೇಕು, ಇದು ಆದಾಗ ಮಾತ್ರ ಇದು ಸಾಧ್ಯ. ಇಲ್ಲದೇ ಹೋದರೆ ಇದು ಎಲೆಕ್ಟೆಡ್ ಬ್ಯೂರೋಕ್ರಸಿ ಆದ ಹಾಗೆ ಆಗುತ್ತದೆ. ಪ್ರತಿಯೊಂದು ಇಂಚೂ ಕೂಡ ಗ್ರಾಮಾಂತರ ಪ್ರದೇಶದ ಜನರ ಏಳಿಗೆಯ ದೃಷ್ಟಿಯಿಂದ ನೋಡಬೇಕಾಗುತ್ತದೆ. ನಾವು ಆ ಗ್ರಾಮಾಂತರ ಪ್ರದೇಶದ ಜನರ ಹೃದಯದ ಮಿಡಿತವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾದಂಥ ಅವಶ್ಯಕತೆ ಇದೆ. ಮಾನ್ಯ ಸಚಿವರು ತಪ್ಪಾಗಿ ತಿಳಿಯಬಾರದು. ಯಾವುದೇ ಒಂದು ಮಸೂದೆಯನ್ನು ಡ್ರಾಫ್ಟ್ ಮಾಡಬೇಕಾದರೆ ಸರಿಯಾದಂಥ ರೂಪರೇಷೆಗಳನ್ನಿಟ್ಟುಕೊಂಡು ಮಾಡಬೇಕು, ಸರಿಯಾದ ವಿನ್ಯಾಸ ಇಟ್ಟುಕೊಂಡು ಮಾಡಬೇಕಾಗುತ್ತದೆ. ಮೊದಲು ವಿನ್ಯಾಸ ಮಾಡಬೇಕು, ವಿನ್ಯಾಸ ಮಾಡದೇ ಕಟ್ಟಡ ಕಟ್ಟುವುದಕ್ಕೆ ಬರುವುದಿಲ್ಲ.

4-30 p.m.

ಶ್ರೀ ಎಸ್. ಸೂರ್ಯನಾರಾಯಣರಾವ್.—ಈ ಮಸೂದೆಯಿಂದ ಸಮಾಜ ಆಮೂಲಾಗ್ರವಾಗಿ ಬದಲಾವಣೆಯಾಗುತ್ತದೆಂದು ತಿಳಿದುಕೊಳ್ಳುವುದು ಸರಿಯಲ್ಲ; ಈ ಮಸೂದೆಯ ಉದ್ದೇಶ ಅದಲ್ಲ. ದಲಿತರಿಗೆ, ಬಡತನದ ರೇಖೆಯಿಂದ ಕೆಳಗೆ ಇರತಕ್ಕವರಿಗೆ ಇದರಿಂದ ದೊಡ್ಡ ದೊಡ್ಡ ಜನರ ಹೃದಯಪರಿವರ್ತನೆಯಾಗಿ ಸಾಮಾಜಿಕ ನ್ಯಾಯ ಸಿಗುತ್ತದೆಂದರೆ ಅದು ಈ ಮಸೂದೆಯಿಂದ ಸಾಧ್ಯವಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—ಪ್ರಶ್ನೆ ಅದಲ್ಲ. ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಬದಲಾವಣೆಯ ಮೂಲಕ ಸಮಾಜದ ಕಟ್ಟಕಡೆಯ ಮನುಷ್ಯ ಯಾರಿದ್ದಾನೆ; ಅಂಥವರು ನೂರಕ್ಕೆ 80 ರಷ್ಟು ಜನ ಯಾರಿದ್ದಾರೆ ಅವರಿಗೆ ಅನುಕೂಲವಾಗತಕ್ಕಂಥ ರೂಪುರೇಷೆಯನ್ನು ತಾವು ಮಾಡಬೇಕಾಗಿತ್ತು. ಶಿಲ್ಪಿ ವಿನ್ಯಾಸ ಮಾಡಿದಮೇಲೆ ಕಟ್ಟಡ ಕಟ್ಟಬೇಕು; ಕಟ್ಟಡ ಕಟ್ಟಿ ಶಿಲ್ಪಿಯನ್ನು ವಿಚಾರ ಮಾಡಬೇಕಾಗಿಲ್ಲ. The Architect has not been consulted. The building has already come up and now they are going for consultation with the architect. ಇಂಥ ಪರಿಸ್ಥಿತಿ ಒಟ್ಟು ಅಭಿಪ್ರಾಯದಲ್ಲಿ ಆಗಿದೆ. ಇದು ಮನವೊಲಿಸತಕ್ಕ ಪ್ರಶ್ನೆಯಲ್ಲ. ಸಮಾಜದ ರೂಪವನ್ನು ಬದಲಾಯಿಸುವ ದಿಸೆಯಲ್ಲಿ ಹೆಜ್ಜೆ ಇಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದ್ದರೆ ಇದರಿಂದ ಸಂಪೂರ್ಣವಾಗಿ ಸಾಧನೆಯಾಗುವುದಿಲ್ಲ ಎನ್ನುವ ಸಂಶಯವನ್ನು ವ್ಯಕ್ತಪಡಿಸಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು ಸರ್ವೋದಯದ ತತ್ವ; ಗಾಂಧೀವಾದವನ್ನು ಮೂಲವಾಗಿ ಇಟ್ಟುಕೊಂಡಿದ್ದೇವೆಂದು ಹೇಳುತ್ತಿದ್ದೀರಿ. ಗಾಂಧೀ ವಾದಕ್ಕೆ ಅಂಟಿಕೊಂಡಿರುವುದಾಗಲೀ; ಸರ್ವೋದಯದ ತತ್ವವಾಗಲೀ ಇದರಲ್ಲಿ ಖಂಡಿತ ಇಲ್ಲ. ಏಕೆಂದರೆ, ದಿ ಕಾನ್‌ಸೆಪ್ಟ್ ಆಫ್ ದಿ ಪೊಲಿಟಿಕಲ್ ಆಬ್ಲಿಗೇಷನ್ ಎನ್ನುವ ಪುಸ್ತಕದಲ್ಲಿ ಇದರ ಬಗ್ಗೆ ಒತ್ತಿ ಹೇಳಿದ್ದಾರೆ. ಪ್ರತಿ ಗ್ರಾಮದವರೂ ಪಂಚಾಯ್ತಿ ಕೇಳಿದರೆ; ಪಂಚಾಯ್ತಿ ಮಾಡಬೇಕು; ಪಂಚಾಯ್ತಿ ವ್ಯವಸ್ಥೆಯಲ್ಲಿ ಗ್ರಾಮರಾಜ್ಯದ ಮುಖಾಂತರ ರಾಮರಾಜ್ಯ ಸ್ಥಾಪನೆ ಮಾಡಬೇಕೆಂಬುದು ಮಹಾತ್ಮಗಾಂಧೀಜಿಯವರ ಉದ್ದೇಶವಾಗಿತ್ತು.

> "In order to underline the princple of decentralisation of public power and economy, Gandhiji said, 'Go babk to villages under Platos inspiration. He maintained that every village should become selfsufficient republic and that their ideal population should not exceed one thousand."

ಅವರ ಅಭಿಪ್ರಾಯ ಪ್ರಕಾರ ಒಂದು ಸಾವಿರ ಜನಸಂಖ್ಯೆ ಇರಬೇಕು; ಅದಕ್ಕೆ ಮೀರಬಾರದು ಎನ್ನುವ ಉದ್ದೇಶ ಇತ್ತು; ಇಲ್ಲಿ ತಾವು 10, 11, 10 ಸಾವಿರ ಎಂದು ಹೇಳಿದ್ದೀರಿ ಜಂಟೀ ಪರಿಶೀಲನಾ ಸಮಿತಿಯಲ್ಲಿ ಮಲೆನಾಡು ಪ್ರದೇಶಕ್ಕೆ 5,000 ಇರಬೇಕೆಂದು ಮಾಡಿದ್ದೀರಿ. ಗಾಂಧೀ ತತ್ವಕ್ಕೆ ಅನುಗುಣವಾದಂಥ ಒಂದು ವ್ಯವಸ್ಥೆಯನ್ನು ಇದರಲ್ಲಿ ಮಾಡಲಾಗಿದೆ ಎಂದು ಪ್ರಾರಂಭದಿಂದಲೂ ಏನು ಹೇಳಿಕೊಂಡು ಬಂದಿದ್ದೀರಿ ಆ ಒಂದು ಉದ್ದೇಶ ಪರಿಪೂರ್ಣವಾಗಿಲ್ಲ. ಜೆ.ಪಿ.ಯವರ ಸರ್ವೋದಯದ ತತ್ವಕ್ಕೂ ಅನುಗುಣವಾಗಿ ಈ ಮಸೂದೆ ಬಂದಿಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ, There is no direction in

the Bill for decentralisation. ಈಗ ವಿಕೇಂದ್ರೀಕರಣಕ್ಕೆ ಅನುಗುಣವಾದಂಥ ಮತ್ತು ಆ ದಾರಿಯಲ್ಲಿ ಹೋಗದೇ ಇರುವಂಥ ಒಂದು ಬಿಲ್ ಬಂದಿರುವುದರಿಂದ ಏನು ಹೇಳಬೇಕು. That is why I call it as an elected bureaucracy. ಆದ್ದರಿಂದ, ತಾವು ಲೋಕಲ್ ಬಾಡೀಸುಗಳನ್ನು ಮುಗಿಸುವಂಥ ತಮ್ಮ ಒಂದು ಉದ್ದೇಶ ಸಾಧನೆಯಾಗುವುದಿಲ್ಲ. ಇದು ಆಗತಕ್ಕಂಥ ದೃಷ್ಟಿಯಲ್ಲಿ ಇವೊತ್ತು ಇಲ್ಲ ; ಕೆಲವೊಂದು ತಿದ್ದುಪಡಿಗಳನ್ನು ತಂದಿದ್ದೇವೆ ; ಅವುಗಳ ವಿಚಾರ ಬಂದಾಗ ನಾನು ಮಾತನಾಡಬಹುದು. ಅದರಲ್ಲಿ ಕೊನೇ ಪಕ್ಷ ಕೆಲವು ಪರಿಣತರು ಅಭ್ಯಾಸ ಮಾಡಿ ಏನು ಹೇಳಿದ್ದಾರೆ. ಮಂಡಳಿ ಮತ್ತು ಗ್ರಾಮ ಸಭೆಗಳ ವ್ಯವಸ್ಥೆ ಅಪೂರ್ಣವಾಗಿದೆ ; ಇವುಗಳ ಮಧ್ಯೆ ಸರಿಯಾದಂಥ ಕೊಂಡಿ ಇಲ್ಲ, ಗ್ರಾಮ ಗ್ರಾಮಗಳ ಮಧ್ಯೆ ಅಸ್ತವ್ಯಸ್ತ್ಯ ಬರಬಹುದೆಂದು ಅನೇಕ ಸಲಹೆಗಳನ್ನು ಪರಿಣತರು ಕೊಟ್ಟಿದ್ದಾರೆ. ಆ ಸಲಹೆಗಳ ವಿಚಾರದಲ್ಲಿ ಸರ್ಕಾರ ವಿಶೇಷವಾಗಿ ಅಲೋಚನೆ ಮಾಡ ಬೇಕಾದಂಥ ಆಗತ್ಯ ಇದೆಯೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಹಣಕಾಸಿನ ವಿಷಯದಲ್ಲೂ ಕೂಡ Report on Local Finances, Karnataka Taxation Review Committee ಈ ತಮ್ಮ ವರದಿಯಲ್ಲಿ ಅನೇಕ ಸಲಹೆಗಳನ್ನು ವಿವಾರವಾಗಿ ಕೊಟ್ಟಿದ್ದಾರೆ. ಈ ಮಸೂದೆಯಲ್ಲಿ ಲೋಕಲ್ ಫೈನಾನ್ಸ್ ಯಾವರೀತಿ ಪೂಬಲೈಸ್ ಮಾಡಬೇಕು. ಮಂಡಲ್ ಪಂಚಾಯಿತ್ತಿಯಲ್ಲಾಗಲಿ, ಜಿಲ್ಲಾ ಪರಿಷತ್ತಿನಲ್ಲಾಗಲೀ, ಇಲ್ಲಿ ಗ್ರಾಮ ಸಭಾ ಪ್ರಶ್ನೆ ಇಲ್ಲವೇ ಇಲ್ಲ. This has become ultimately Two-tier ಮಂಡಲ್ ಪಂಚಾಯ್ತು ಮತ್ತುಜಿಲ್ಲಾ ಪರಿಷತ್ತುಗಳಿಗೆ ಯಾವರೀತಿ ಹಣ ಸಂಗ್ರಹಣೆ ಮಾಡತ್ತೀರಿ ? ಸಂಪನ್ಮೂಲಗಳನ್ನು ಕ್ರೋಢೀಕರಿಸುತ್ತೀರಿ ಎನ್ನುವುದನ್ನು ಇಲ್ಲಿ ತೋರಿಸಬೇಕಾಗಿತ್ತು. ಅದನ್ನು ಇಲ್ಲಿ ತೋರಿಸಿಲ್ಲ ' Again, the Mandal Panchayat and Zilla Parishad have got to be under the mercy of the State Government. ಸಂಪನ್ಮೂಲಗಳನ್ನು ಏನು ಕೊಡುತ್ತೀರಿ ? ಸ್ವಾವಲಂಬನೆ ಜೀವನವನ್ನು ಹಳ್ಳಿಯಲ್ಲಿರುವರರು ಗ್ರಾಮಾಂತರ ಪ್ರದೇಶದಲ್ಲಿರುವವರು ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದ್ದರೆ ಸಂಪನ್ಮೂಲಗಳ ವ್ಯವಸ್ಥೆ ಮಾಡಬೇಕಾಗಿತ್ತು ; ಇವೊತ್ತು ಅದನ್ನು ಬಿಟ್ಟು ಚುನಾಯಿತ ಸಂಸ್ಥೆಗಳು ಪರಾವಲಂಬಿಗಳಾಗುವುದನ್ನು ನಾವು ಕಾಣುತ್ತಿದ್ದೇವೆ. ರೂಲ್ಸ್ ಮಾಡುವಾಗ ಇದನ್ನೆಲ್ಲಾ ಹಾಕುತ್ತೇವೆಂದು ತಾವು ಹೇಳಬಹುದು. The taxation power cannot be conferred under the rules. ಸರ್ಕಾರಕ್ಕೆ ನಿಜವಾದಂಥ ಅಧಿಕಾರ ವಿಕೇಂದ್ರೀಕರಣ ಮಾಡತಕ್ಕಂಥ ಉದ್ದೇಶ ಇದಿದ್ದರೆ ಸಬೆಸ್ಟ್ಯಾನ್ಸಿಯಲ್ ಟ್ಯಾಕ್ಸೇಷನ್ ಮೆಸ್ಯೂರ್ಸನ್ನು ಮಂಡಲಿ ಪಂಚಾಯಿತ್ತಿಗಳು ಮತ್ತು ಜಿಲ್ಲಾ ಪರಿಷತ್‌ಗಳು ಮಾಡುವಂಥ ವ್ಯವಸ್ಥೆಯನ್ನು ಧೈರ್ಯದಿಂದ ಮಾಡಿಕೊಡಬೇಕು. ತಾವು ರಾಜ್ಯ ಮತ್ತು ಕೇಂದ್ರಸರ್ಕಾರದ ಮಧ್ಯೆ ಚರ್ಚೆಯನ್ನು ಮಾಡುತ್ತೀರಿ. ಆದರೆ, ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡುವಂಥ ಅಧಿಕಾರವನ್ನು ಜಿಲ್ಲಾ ಪರಿಷತ್ತಿಗೆ ಮತ್ತು ಮಂಡಲಿ ಪಂಚಾಯಿತ್ತಿಗೆ ಕೊಡುವುದಕ್ಕೆ ಅನುಮಾನ ಮಾಡುತ್ತೀರಿ. ಅಧಿಕಾರ ತಮ್ಮ ಕೈಯಿಂದ ಹೋಗುತ್ತದೆ ಎನ್ನುವ ಆತಂಕ ನಿಮಗೆ ಇದೆ: ಜಿಲ್ಲಾ ಪರಿಷತ್ತುಗಳು ಮಿನಿ ವಿಧಾನ ಸಭಾಗಳು ಅಲ್ಲ ಯಾರಾದರೂ ಅಧಿಕಾರ ಚಲಾವಣೆ ಮಾಡುತ್ತಾರೆ. The most ineffective control you will have over the administration. ಮಿನಿ ವಿಧಾನ ಸಭಾಗಳು ಆಡಳಿತ ಮಾಡುವುದಕ್ಕೆ ಆಗುವುದಿಲ್ಲ. ಅದುದರಿಂದ ನಾವು ಈ ವಿಚಾರಗಳನ್ನು ತಿಳಿಸಬೇಕಾಗುತ್ತದೆ ಇಲ್ಲದಿದ್ದರೆ ಇದು ಪರಿಣಾಮಕಾರಿ ಚರ್ಚೆಯಾಗುವುದಿಲ್ಲ. ಕೊನೆಯದಾಗಿ ಯಾರು ಅಧಿಕಾರ ನಡೆಸುತ್ತಾರೆ ಎಂದರೆ ಸ್ಟೇಟ್ ಮಿನಿಸ್ಟರ್ ಗ್ರೇಡ್ ಕೊಟ್ಟಂಥ ಒಬ್ಬ ವ್ಯಕ್ತಿ ಮಾಡುತ್ತಾನೆ. ಇಲ್ಲಿ ಯಾರು ಮಾಡುತ್ತಾರೆ ? ಸೆಕ್ರಟರಿ ಕೆಲಸ ಮಾಡತಕ್ಕವರು ಡಿ.ಸಿ. ಮಾಡುತ್ತಾರೆ. Again the entire power will concentrate either in the Secretary or that President who will be given the power of a State Minister.

ಅದುದರಿಂದ ಇವೊತ್ತು ಅವರು ಒಟ್ಟು ಒಂದು ಅಭಿಪ್ರಾಯದ ಮೇಲೆ ಕೆಲಸ ಮಾಡುತ್ತಾರೆ ಎಂದು ಹೇಳಿ ಯಾವುದೇ ಒಂದು ಭ್ರಮೆ ಇಟ್ಟುಕೊಂಡಿದ್ದರೆ, ಅದು ಭ್ರಮೆಯಾಗಿ ಉಳಿಯುತ್ತದೆಯೇ ಹೊರತು ನಿಜವಾಗಿಯೂ ಚುನಾಯಿತ ಪ್ರತಿನಿಧಿಗಳು ಆಡಳಿತವನ್ನು ಯಶಸ್ವಿಯಾಗಿ ನಡೆಸುವುದಕ್ಕಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಖಂಡಿತವಾಗಿ ಹೇಳಬೇಕಾಗಿದೆ.

ಇನ್ನು ಮಂಡಲ್ ಪಂಚಾಯತ್ ಬಗ್ಗೆ ಈಗಾಗಲೇ ಹೇಳಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಅಧಿಕಾರವನ್ನು ಇವೊತ್ತು ಚಲಾವಣೆ ಮಾಡಬೇಕೆಂದು ಹೇಳಿ ಮಹಾತ್ಮಾ ಗಾಂಧಿಯವರು

ಬಯಸಿದ್ದರು. ಅವರ ಬಯಕೆಗೆ ಅವರ ಆಸೆ ಆಕಾಂಕ್ಷೆಗಳಿಗೆ ಇವರು ತಿಲಾಂಜಲಿಯನ್ನು ಈ ಬಿಲ್ಲಿನ ಮುಖಾಂತರವಾಗಿ ಕೊಡುತ್ತಿದ್ದಾರೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಈ ದೇಶದಲ್ಲಿ ಅದಕ್ಕೆ ಯಾವತ್ತೋ ತಿಲಾಂಜಲಿಯನ್ನು ನೀವು ಕೊಟ್ಟು ಬಿಟ್ಟಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ತಿಲಾಂಜಲಿಯನ್ನು ಕೊಡಬೇಕೆಂದು ನೀವು ಮಾಡುತ್ತಿದ್ದೀರಿ. Even I am suggesting that they should also change the concept. The power has been concentrated in the Kulaks and vested interests. In Andhra Pradesh they have wrested the power from the poor. That is why we lost power in Andhra Pradesh. The whole democratic setup was destroyed as far as Andhra Pradesh concerned. ಶ್ರೀ ಎನ್. ಟಿ. ರಾಮರಾವ್‌ರವರೇ ಬಂದರು ಎಂದು ನೀವು ಹೇಳಬಹುದು. ಇದರ ಬಗ್ಗೆ ಹಿಂದೆಯೇ ನಾನು ಒಂದು ನೋಟನ್ನು ಕಳುಹಿಸಿದ್ದೇನೆ. I had sent a note to the High Command that by not contesting and leaving to the vested interests and the Kulaks we have lost power in Andhra Pradesh.

ಇವೊತ್ತು ಆ ಒಂದು ಭಯ ನಮ್ಮ ನಮ್ಮ ಕರ್ನಾಟಕ ರಾಜ್ಯದಲ್ಲಿಯೂ ಕಾಣುತ್ತಿದೆ. ಯಾವ ಒಂದು ಪಟ್ಟಭದ್ರ ಹಿತಾಸಕ್ತಿಗಳು ಗ್ರಾಮಾಂತರ ಪ್ರದೇಶದಲ್ಲಿದ್ದು ಅನೇಕ ರೀತಿಯಲ್ಲಿ ಸಮಾಜಿಕ ಮತ್ತು ಆರ್ಥಿಕ ಶೋಷಣೆಗಳನ್ನು ಮಾಡುತ್ತಿದ್ದರೋ ಅವರು ಕಳೆದ 10 ವರ್ಷಗಳಿಂದ ತುಳಿಯಲ್ಪಟ್ಟಿದ್ದರು. ಆದರೆ ಅವರು ಈಗ ಪುನಃ ತಲೆ ಎತ್ತತಕ್ಕ ಪ್ರಸಂಗ ಈ ನಿಮ್ಮ ಮಸೂದೆಯಿಂದ ಬಂದರೆ ಅದಕ್ಕಿಂತ ಒಂದು ದುರಂತ ಪ್ರಸಂಗ ಕರ್ನಾಟಕದಲ್ಲಿ ಮತ್ತೊಂದು ಇಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಜನತಾ ಪಕ್ಷದವರು ಆರ್ಥಿಕ ಸಾಮಾಜಿಕ ಸಮಾನತೆಯನ್ನು ತರುತ್ತೇವೆಂದು ಹೇಳತಕ್ಕವರು ಇದರ ಬಗ್ಗೆ ವಿಶೇಷವಾಗಿ ಚಿಂತನೆ ಮಾಡಬೇಕಾದ ಪ್ರಸಂಗವಿದೆ. ಇವೊತ್ತು ಈ ಮಸೂದೆಯನ್ನು ಒಂದು ಕಾನೂನಿನ ಚೌಕಟ್ಟಿನಲ್ಲಿ ಜಾರಿಗೆ ತರುತ್ತೇವೆಂದು ತಾವು ತಿಳಿದುಕೊಳ್ಳಬಾರದು. ಇದರಲ್ಲಿ ಆರ್ಥಿಕ ಸಾಮಾಜಿಕ ತತ್ವ ಕೂಡ ಇದೆ ಇದನ್ನು ತಾವು ಗ್ರಹಿಸಿಕೊಂಡು ಮುಂದುವರಿಯ ಬೇಕಾದಂಥ ಪ್ರಸಂಗ ಇದೆ. ಬೇರೆ ರಾಜ್ಯಗಳಲ್ಲಿ ಇಲ್ಲದೇ ಇರತಕ್ಕಂಥ ಒಂದು ಮಸೂದೆಯನ್ನು ಇಲ್ಲಿಗೆ ತಂದು ಪ್ರಯೋಗ ಮಾಡುತ್ತಿದ್ದಾರೆಂದು ಹೇಳಿದರೆ I don't think that you are the champion of the status quo society. No, ನಾನು ಈ ವಿಷಯದ ಬಗ್ಗೆ ಮಾತನಾಡಲು ಹಲವಾರು ಪುಸ್ತಕಗಳನ್ನು ತಂದಿಟ್ಟುಕೊಂಡಿದ್ದೇನೆ. ಅದನ್ನು ಬೇಕಾದರೆ ಕೋಟ್ ಮಾಡಿ ತಮಗೆ ಹೇಳಬಹುದು ಆದರೆ ಸಮಯದ ಕೊರತೆ ಇದೆ. ಆದುದರಿಂದ ಅನಾವಶ್ಯಕವಾಗಿ ವೇಳೆಯನ್ನು ತೆಗೆದುಕೊಳ್ಳಬೇಕು ಎನ್ನತಕ್ಕದ್ದು ಕೂಡ ನನ್ನ ಉದ್ದೇಶವಿಲ್ಲ. 1964 ರಲ್ಲಿಯೇ ಪಂಚಾಯತ್ ರಾಜೇ ಬಂತು ಅಲ್ಲಿಂದ 1984 ರವರೆಗೆ ಏನೇನು ನಡೆದಿದೆ ಎನ್ನುವ ಬಗ್ಗೆ ನನ್ನ ಹತ್ತಿರ ಪೂರ್ಣ ವಿವರಗಳು ಇವೆ. ಆದುದರಿಂದ ಈಗ ನಾನು ಆ ವಿವರಕ್ಕೆ ಎಲ್ಲಾ ಹೋಗುವುದಿಲ್ಲ. The attitude in introducing some of the clauses ಮತ್ತೆ ಇದರಲ್ಲಿ ಬಳಸತಕ್ಕ ಭಾಷೆಯನ್ನು ಕೂಡ ನಾವು ನೋಡಿದಾಗ, ಇದರಲ್ಲಿ ಕ್ಲಾಸ್ (5) ರಲ್ಲಿ Clause five provides for reservation of seats to backward classes andscheduled castes and scheduled tribes. Sub clause three reads :

"Where no person belonging to Backward Classes is elected to a Mandal Panchayat Government shall nominate two persons belonging to the said classes to the Mandal Panchayats."

Sub-clause 4 reads :

"Seats shall be reserved in a Mandal Panchayat for Scheduled Castes and Scheduled Tribes the number of such seats bearing as nearly as may be the same proportion to the total number of seats in the Mandal Panchayat as the population of Scheduled Castes and Tribes in the Mandal bears to the total of the Mandal :

Provided that no set shall be reserved for the representatives of Scheduled Castes and Tribes in any Mandal Panchayat unless the

population of Scheduled Castes and Tribes in the Mandal is fifty for more."

ಬಾಕ್‌ವಡ್ ಕ್ಲಾಸ್‌ನವರು ಇಲ್ಲವೆಂದರೆ ನೀವು ನಾಮಿನೇಟ್ ಮಾಡುತ್ತೀರಿ. ಆಗ ಅವರು ನಿಮ್ಮ ದಯಾ ದಾಕ್ಷಿಣ್ಯಕ್ಕೆ ಒಳಗಾಗಿ ಕೆಲಸ ಮಾಡಬೇಕಾಗುತ್ತದೆ. ಅವರು ಯಾವ ಒಂದು ಪಟ್ಟಭದ್ರ ಹಿತಾಶಕ್ತಿಗಳ ಕೈಗೂ ಸಿಕ್ಕಿಕೊಳ್ಳದೇ ತಮ್ಮ ಸ್ವಂತ ಶಕ್ತಿಯನ್ನು ಪ್ರದರ್ಶನ ಮಾಡಲು ಅವರಿಗೆ ಒಂದು ಸರಿಯಾದ ಅವಕಾಶವಿರಬೇಕಾಗುತ್ತದೆ. ಆ ರೀತಿಯಾಗಿ ಇಲ್ಲಿ ಅವಕಾಶವಿಲ್ಲ ಇದರಿಂದ ನಿಮ್ಮ ಉದ್ದೇಶ ಸಾಧನೆಯಾಗುತ್ತದೆಯೇ ? That means the backward classes should look to the mercy of the Government in regard to the provision for the effective representation of the backward classes.

ಆದುದರಿಂದ ಅವರನ್ನು ಸಹ ಎಸಕ್ಟ್ ಮಾಡುವುದಕ್ಕೆ ಪ್ರಾವಿಜನ್ ಮಾಡಿದಾಗ ಮಾತ್ರ ನಿಮ್ಮ ಉದ್ದೇಶ ಸಫಲವಾಗುವುದಕ್ಕೆ ಸಾಧ್ಯವಾಗುತ್ತದೆ. ಇನ್ನು 3 ಟೈರ್ ಸಿಸ್ಟಂ ಬಗ್ಗೆ ಈಗಾಗಲೇ ಹೇಳಿದ್ದೇನೆ. ತಾಲ್ಲೂಕ್ ಬೋಡ್ ಯಾವ ಒಂದು ಕೆಲಸಗಳನ್ನು ಇವತ್ತು ಮಾಡುತ್ತಿದೆ ಅದು ಎನ್.ಆರ್.ಇ. ಪಿ. ಆಗಲೀ ಐ. ಆರ್. ಡಿ. ಪಿ. ಆಗಲೀ ಇವುಗಳನ್ನು ಮಾಡತಕ್ಕದ್ದು ಈ ಸಂಸ್ಥೆಗಳಿಗೆ ಹೊರಟು ಹೋಗುತ್ತದೆ. ತಾವು ಈ ಮಸೂದೆಯನ್ನು ಮಾಡುವಾಗ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ನಾನಾ ರಾಜ್ಯಗಳಿಗೆ ಹೋಗಿ ನೋಡಿಕೊಂಡು ಬಂದು ಮಾಡಿದ್ದೀರಿ. ನಿಜ. ಆದರೂ ಕೂಡ ನಮ್ಮ ರಾಜ್ಯದಲ್ಲಿ ಏನು ಚುನಾಯಿತ ಪಂಚಾಯುತಿಗಳು ಇದ್ದವೋ ಅವುಗಳ ಹತ್ತಿರ ಕೂಡ ತಾವು ವಿಚಾರಗಳನ್ನು ತಿಳಿದುಕೊಳ್ಳಬಹುದ್ದಾಗಿತ್ತು. ಅವರಿಗೆ ಈ ಬಿಲ್ಲನ್ನು ಕಳುಹಿಸಿ, ಅವರ ಅಭಿಪ್ರಾಯಗಳನ್ನು ಸಂಗ್ರಹ ಮಾಡಬೇಕಾಗಿತ್ತು. ತಾವು ಅವರ ಟರ್ಮ್ ಆಯಿತು ಎಂದು ರದ್ದುಮಾಡಿದಿರಿ. ಚುನಾಯಿತ ಪ್ರತಿನಿಧಿಗಳ ಅಭಿಪ್ರಾಯ ಏನಿದೆ ಅದನ್ನು ಸಂಗ್ರಹಣೆ ಮಾಡತಕ್ಕ ಒಂದು ಅವಕಾಶವೇ ನಮಗೆ ತಪ್ಪಿ ಹೋಯಿತು. ಆದುದರಿಂದ ಇವೊತ್ತು ಈ ಅಭಿಪ್ರಾಯಗಳಿಲ್ಲದೆ ಈ ಮಸೂದೆಯನ್ನು ಜನರ ಮೇಲೆ ಪ್ರಯೋಗ ಮಾಡುತ್ತಾ ಇದ್ದೇವೆ. ಗ್ರಾಮೀಣ ಪ್ರದೇಶದ ಜನರ ಮೇಲೆ ಪ್ರಯೋಗ ಮಾಡುತ್ತಿದ್ದೇವೆ. ಈ ಪ್ರಯೋಗದಿಂದ ಏನಾಗುತ್ತದೆ ಎಂದರೆ ತಮಗೆ ಗೊತ್ತಿದೆ, ಲ್ಯಾಬೊರೇಟರಿಗಳಲ್ಲಿ ಮೊದಲು ಇಲಿಗಳ ಮೇಲೆ ಪ್ರಯೋಗ ಮಾಡುತ್ತಾರೆ. ಮನುಷ್ಯರ ಮೇಲೆ ಪ್ರಯೋಗ ಮಾಡುವುದಿಲ್ಲ. He will be cowitting murder, ಮೊದಲು ಇಲಿಗಳ ಮೇಲೆ ಪ್ರಯೋಗ ಮಾಡಬೇಕಾಗಿತ್ತು; ತಾವು ಈಗ ಮಾನವರ ಮೇಲೆ ಪ್ರಯೋಗ ಮಾಡುತ್ತಿದ್ದೀರಿ. ಗ್ರಾಮಾಂತ ಜನಜೀವದ ಮೇಲೆ ಪ್ರಯೋಗ ಮಾಡಲಿಕ್ಕೆ ಹೋಗುತ್ತಿದ್ದಿರಿ. ಇದನ್ನು ಲಘುವಾಗಿ ಮಾಡುತ್ತೇವೆಂದು ತಿಳಿದುಕೊಳ್ಳಬೇಡಿ. ಇವರೆಲ್ಲರ ಅಭಿಪ್ರಾಯಗಳನ್ನು ಸಂಗ್ರಹ ಮಾಡುವ ಬದಲು ಇಂತಹ ಪ್ರಯೋಗವನ್ನು ಕರ್ನಾಟಕ ರಾಜ್ಯದ ಜನತೆಯ ಮೇಲೆ ಹಾಕುತ್ತಿದ್ದೀರಿ. ಒಳ್ಳೆಯದಾದರೆ ಸಂತೋಷ. ಇದರಿಂದ ಜನಜೀವನ ಅಸ್ತವ್ಯಸ್ತವಾದರೆ ಯಾರು ಕಾಪಾಡುತ್ತಾರೆ ?

ಶ್ರೀ ಅಬ್ದುಲ್ ನಜೀರಸಾಬ್.—ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಸ್ವಾಮಿ, ಈ ಒಂದು ಮಸೂದೆಗೆ ಚುನಾಯಿತ ಪ್ರತಿನಿಧಿಗಳ ಅಭಿಪ್ರಾಯ ಪಡೆದಷ್ಟು ಇನ್ಯಾವ ಮಸೂದೆಗೂ ಪಡೆದಿಲ್ಲ, ಇದಕ್ಕೆ ಮಾನ್ಯ ವಿರೋಧಪಕ್ಷದ ನಾಯಕರೇ ಸಾಕ್ಷಿ. ಅವರ ಜಿಲ್ಲೆಯಲ್ಲಿ ಪಂಚಾಯಿತಿ ಅಧ್ಯಕ್ಷರ ಸಮ್ಮೇಳನದಲ್ಲಿ ಅವರೂ ನಾನೂ ಜಂಟಿಯಾಗಿ ಭಾಗವಹಿಸಿದ್ದೇವೆ, ಹೀಗೆ 9 ಜಿಲ್ಲೆಗಳಲ್ಲಿ ಪ್ರಮುಖವಾಗಿ ಮಾಡಿದ್ದೇವೆ ಇದಕ್ಕೆ ಸಂಬಂಧಪಟ್ಟ ಎಲ್ಲಾ ಸಂಸ್ಥೆಗಳ ಸಾಕ್ಷಿಯನ್ನು, ಅಭಿಪ್ರಾಯವನ್ನು ನಾವು ಪಡೆದಿದ್ದೇವೆ. ಇಷ್ಟು ವ್ಯಾಪಕವಾಗಿ ಅಭಿಪ್ರಾಯ ಸಂಗ್ರಹಣೆ ಮಾಡಿರತಕ್ಕಂಥಾದ್ದು ಮಾನ್ಯ ಪ್ರತಿಪಕ್ಷದ ನಾಯಕರಿಗೆ ಗೊತ್ತಿದ್ದೂ ಏಕೆ ಹೇಳುತ್ತಾ ಇಲ್ಲವೊ ಎಂದು ಸಂಕಟವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದನ್ನು ಹೇಳಬೇಕಾಗಿತ್ತು ಮರೆತುಬಿಟ್ಟೆ. ನಮ್ಮ ಜಿಲ್ಲೆಗೆ ಬಂದಿದ್ದಿರಿ, ಸೆಮಿನಾರ್ ಆಯಿತು. ನಾವಿಬ್ಬರೂ ಇದ್ದೆವು. ಅಲ್ಲಿ ಅಭಿಪ್ರಾಯ ಏನು ಹೇಳಿದರ ? ಆ ರೆಸಲ್ಯೂಷನ್ ಏನು ಮಾಡಿದಿರಿ ? ಅಲ್ಲಿ 5000 ಜನಸಂಖ್ಯೆಗೆ ಮಾಡಲಿಕ್ಕೆ ಹೇಳಿದರು, ತಾಲ್ಲೂಕು ಬೋರ್ಡ್ ಉಳಿಸಬೇಕು, ಪಂಚಾಯತಿಗಳನ್ನು ಉಳಿಸಬೇಕು ಎಂದು ಹೇಳಿ ಜಿಲ್ಲಾ ಪರಿಷತ್ತಿಗೆ ಒಪ್ಪಿಗೆ ಕೊಟ್ಟರು. 9 ರೆಸಲ್ಯೂಷನ್‌ಗಳನ್ನು ಕೊಡಿ. ಅವರು ಏನು ರೆಸಲ್ಯೂಷನ್ಸ್ ಪಾಸು ಮಾಡಿದ್ದಾರೆ, ಏನು ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ ಎನ್ನುವುದನ್ನು ಹೇಳಿ. ನನಗೆ ತಿಳಿದ ಪ್ರಕಾರ ಎಲ್ಲರೂ ಕೂಡ ತಾಲ್ಲೂಕು ಬೋರ್ಡನ್ನು ಉಳಿಸಬೇಕು, ಪಂಚಾಯತಿಗಳು ಇರಬೇಕು ಎಂದು ಒತ್ತಾಯ ಮಾಡಿ

ದ್ದಾರೆ. This is the paper report : I can produce the resolution. ನಮ್ಮ ಜಿಲ್ಲೆಯಲ್ಲಿ ನಿರ್ಣಯವಾಯಿತು. ನಮ್ಮ ಜಿಲ್ಲೆಯ ಅಭಿಪ್ರಾಯವನ್ನು ಹೇಳುವುದಾದರೆ, ಸಣ್ಣ ಪಂಚಾಯಿತಿಗಳು ಬೇಕು, ಜಿಲ್ಲಾ ಪರಿಷತ್ತು ಇರಲಿ ಎಂದು ಹೇಳಿದ್ದಾರೆ. ಮತ್ತು ಹೆಚ್ಚಿನ ಸಂಪನ್ಮೂಲಗಳನ್ನು ಒದಗಿಸಬೇಕು ಎಂದು ಒತ್ತಾಯ ಮಾಡಿದ್ದಾರೆ. ಆದುದರಿಂದ ನಿಮ್ಮ ಪತ್ರಿಕೆಯೇನು ? ಅದನ್ನು ತಾವು ಒಪ್ಪಲಿಲ್ಲ. ಅವರ ಅಭಿಪ್ರಾಯವನ್ನು ಸ್ವೀಕಾರ ಮಾಡಲಿಲ್ಲ. ಐಡಿಯಾಲಜಿಯನ್ನು ಬೆಳೆಸುತ್ತಾ ಇದ್ದೀರಿ. ಆ ಒಂದು ತಮ್ಮ ಐಡಿಯಾಲಜಿಯನ್ನು ಸಿದ್ಧಾಂತವನ್ನು ಅವರ ಮೇಲೆ ಹೊರಿಸಿ, ಹೊಸ ಪ್ರಯೋಗವನ್ನು ಮಾಡುತ್ತಾ ಇದ್ದೀರಿ. ಅದು ಸರಿಯಾದರೆ ಸರಿ ಎಂದು ಹೇಳೋಣ. ಈ ಸದನದಲ್ಲಿ ನಾವು ಇಲ್ಲದೇಹೋದರೂ ಯಾರಾದರೂ ಚರ್ಚೆ ಮಾಡಲಿಕ್ಕೆ ಬಂದೇ ಬರುತ್ತಾರೆ. Let it go on record as far as I am concerned. I am giving this signal. It may or it may not happen because this is a new experiment. ಆದರೆ ಅವರು ಅಭಿಪ್ರಾಯವನ್ನು. ಕನ್‌ಸೆನ್‌ಸಸ್ ಕ್ಷನಿದೆ ಎನ್ನುವುದನ್ನು ಇಂತಹ ಒಂದು ಬದಲಾವಣೆ ಮಾಡತಕ್ಕ ಸಂದರ್ಭದಲ್ಲಿ. What was the consensus among the elected representatives in the taluk board, in the Panchayat and the experts in tee field. ಅದನ್ನು ಸಂಗ್ರಹಣೆ ತಾವು ಮಾಡಲಿಲ್ಲ. ನಾವೇ ಎಕ್ಸಪರ್ಟ್ಸ್ ಡ್ರಾಫ್ಟ್ಸ್‌ಮನ್, ತಜ್ಞರು ಎಂದು ತಿಳಿದುಕೊಂಡರೆ ತಪ್ಪಾಗುತ್ತದೆ. ಸಾಮಾಜಿಕ ಮತ್ತು ಆರ್ಥಿಕ ನ್ಯಾಯವನ್ನು ಪಡೆದುಕೊಳ್ಳತಕ್ಕ ಜನರ ಮನಸ್ಸಿನ ಕಲ್ಪನೆಯನ್ನು ಹೆಕ್ಕಬೇಕೇ ಹೊರತು ಅದನ್ನು ಬಿಟ್ಟು ಹೋಗಬಾರದು. ಇಂತಹ ಸಿದ್ಧಾಂತವನ್ನು ಜನಗಳ ಮೇಲೆ ಪ್ರಯೋಗ ಮಾಡಿದರೆ ಏನಾಗುತ್ತದೆ. ಯಾವ ವಿಚಾರದಲ್ಲಿ ಸಂದೇಹವಿದೆ—ಅಷ್ಟನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವೊತ್ತು ನ್ಯಾಯ ಪಂಚಾಯಿತಿ ಇದೆ. ಈ ನಾಯ ಪಂಚಾಯಿತಿ ನೋಡಲಿಕ್ಕೆ ಬಹಳ ಒಳ್ಳೆಯದು. ಲ್ಯಾಂಡ್ ಟ್ರಿಬ್ಯುನಲ್‌ಗಳು ಇದ್ದುವು, ಅವು ಯಶಸ್ವಿಯಾಗಿದೆ ಎಂದು ತಾವು ಹೇಳಬಹುದು. ಅದರೆ ತಾವು ಒಂದು ವಿಚಾರವನ್ನು ಮರೆಯಬಾರದು, ಈಗ ಗ್ರಾಮಾಂತರ ಪ್ರದೇಶದ ಜನಜೀವನದಲ್ಲಿ ಈ ನ್ಯಾಯ ಪಂಚಾಯಿತಿಗಳಿಂದ ಏನು ಪರಿಣಾಮವಾಗುತ್ತದೆ ಎನ್ನು ಇತಿಹಾಸವನ್ನು ನಾವು ಓದಿದ್ದೇವೆ. ನಮ್ಮ ಸಮಾಜದಲ್ಲಿ ನೋಡುತ್ತ ಇದ್ದೇವೆ. ಮಾನ್ಯ ಸೂರ್ಯನಾರಾಯಣರಾವ್ ಅವರು ಇರಬಹುದು. I belong to a very small community. You cannot believe that there are as much as 6 sub sections in my small communit. ಈ ಸಬ್ ಸೆಕ್ಷನ್ಸ್ ಏಕೆ ಆಗಿದೆ ಎಂದರೆ, ನ್ಯಾಯ ಪಂಚಾಯಿತಿ ಆಯಿತು, ಒಂದೊಂದು ಕುಟುಂಬ ಓಂದೊಂದು ಜಾತಿಯಾಯಿತು. ಅದರಲ್ಲಿ ಸಬ್ ಕ್ಯಾಸ್ಟ್‌ಗಳಾಯಿತು. I belong to a microscopic community. ನಮ್ಮಲ್ಲಿ ಅನೇಕ ಜಾತಿಗಳಿವೆ. ಬೇರೆ ಯಾವುದೂ ಸಾಮಾಜಿಕ ಉದ್ದೇಶಕ್ಕೆ ಆದುದಲ್ಲ. ಒಬ್ಬ ಯಜಮಾನ ನ್ಯಾಯ ಮಾಡುತ್ತಾನೆ. ಅವನು ನಿಶ್ಚಯ ಮಾವ ಜಾತಿಯಿಂದ ಹೊರಗೆ ತೆಗೆದಿಡುತ್ತಾನೆ. ಆದುದರಿಂದ ಸಮಾಜದಲ್ಲಿ ಬೇಧಗಳು, ವೈಷಮ್ಯಗಳು ಇವೆಲ್ಲ ತಾಂಡವವಾಡುತ್ತಾ ಇಲ್ಲ ಎಂದು ಹೇಳಿದರೆ ನಾನು ನಂಬುವುದಿಲ್ಲ, ಇದನ್ನು ಈಗಲೂ ನೋಡುತ್ತಾ ಇದ್ದೇವೆ. ಇವೊತ್ತು ನ್ಯಾಯ ಪಂಚಾಯಿತಿಗಳನ್ನು ಬೇರೆ ರೀತಿಯಲ್ಲಿ ಮಾಡುತ್ತಾ ಇದ್ದೀರಿ. ಮುನ್ಸೀಫರಿಗೆ ಪರಮಾಧಿಕಾರ ಇದೆ. ಎಲೆಕ್ಷನ್ ಲಾ ಎಲ್ಲಾ ಇದೆ. ಇದನ್ನು ನಾನು ಓದಿದೆ.

Sri. Abdul Nazeer Sab.—I will read out '59 Act clause by clause.

Sri M. Veerappa Moily.--I have goue throught it. ಅದನ್ನು ನಾನು ವಿವರವಾಗಿ ಹೇಳಲಿಕ್ಕೆ ಹೋದರೆ ಗಂಟೆ ಹೊಡೆಯುತ್ತದೆ. ನ್ಯಾಯ ಸಮಿತಿಗೆ ಒತ್ತಾಯ ಮಾಡುವುದಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ನೆಮ್ಮದಿಯಾಗಿ ನಾಯಗಳು ಆಗಬೇಕು ಎಂದು ಕೈ ಜೋಡಿಸಿಕೊಳ್ಳುತ್ತೇನೆ. ಇದನ್ನು ನ್ಯಾಯಸಮಿತಿಗಳ ಮುಖಾಂತರ ಮಾಡಬೇಡಿ, ಮಂಡಲ್ ಪಂಚಾಯಿತ್ ಮತ್ತು ಜಿಲ್ಲಾ ಪರಿಷತ್ತಿನ ಮುಖಾಂತರ ಮಾಡುತ್ತಾ ಹೋಗಿ. ಅವರ ಮೇಲೆ ಎಕ್ಸ್‌ಪರಿಮೆಂಟ್ ಮಾಡಲಿಕ್ಕೆ ಹೋಗಬೇಡಿ. ಆಮೇಲೆ ಬೇಕಾದರೆ ತಿದ್ದುಪಡಿ ಮಾಡೋಣ ; ಈಗ ವೆಸ್ಟ್‌ಬೆಂಗಾಲ್‌ನಲ್ಲಿ ನ್ಯಾಯ ಪಂಚಾಯಿತಿ ಇದೆ ಎಂದು ಹೇಳಿದಿರಿ, ಅಲ್ಲಿ ಇಲ್ಲ.

Sri Abdul Nazeer Sab.—By statute, there is no Nyaya Panchayat in West Bangal.

ಶ್ರೀ ಎಂ. ವೀರಪ್ಪ ಮೋಯಿಲಿ.—ಅವರು ನ್ಯಾಯ ಸಮಿತಿಗಳನ್ನು ಏಕೆ ಮಾಡಲಿಲ್ಲ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಅದು ಜ್ಯೋತಿ ಬಸು ಮಾಡಿದ ಕಾಯಿದೆ ಅಲ್ಲ. ಮಾನ್ಯ ಸಿದ್ಧಾರ್ಥ ಶಂಕರರೇ ಅವರು ಮಾಡಿದ್ದನ್ನು ಪ್ರಾಮಾಣಿಕವಾಗಿ ಜಾರಿಗೆ ತಂದಿದಾ ರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸಿದ್ಧಾರ್ಥ ಶಂಕರ್‌ರೇ ಅವರು ಮಾಡಿರಲಿ ಅಥವಾ ಅದಕ್ಕಿಂತ ಹಿಂದೆ ಯಾರೇ ಮಾಡಿರಲಿ, ಆ ಪ್ರಶ್ನೆಯಲ್ಲ. ಆಯಾ ಕಾಲಕ್ಕೆ ಅವರು ಮಾಡಿರಬಹುದು. ಆದರೆ 1864ರಲ್ಲಿ ಕಾಂಗ್ರೆಸ್ ಮಾಡಿದೆ, 1984ರಲ್ಲಿ ನಾವು ಮಾಡುತ್ ಇದ್ದೇವೆ, ಅದನ್ನು ಸ್ವೀಕಾರ ಮಾಡಿ ಅಂದರೆ ನಾವು ಒಪ್ಪುವುದಿಲ್ಲ. 1964ರಲ್ಲಿ ಕಾಂಗ್ರೆಸ್‌ನವರು ಮಾಡಿದ್ದರೂ ಕೂಡ ಆದರಿಂದ ಸಮಾಜದ ಪ್ರಗತಿ ಆಗದೇಹೋದರೆ ಅದನ್ನು ಒಪ್ಪಬೇಕಾಗಿಲ್ಲ. ಕರ್ನಾಟಕ ರಾಜ್ಯದ ಪರಂಪರೆಗೆ ಅನುಗುಣವಾಗಿ, ನಮ್ಮ ಜನತೆಯ ಅನುಕೂಲಕ್ಕೆ ತಕ್ಕಹಾಗೆ ಕಾನೂನು ರೂಪಿಸಿಕೊಳ್ಳುವುದಾದರೆ ಅದಕ್ಕೆ ನಾವು ಹಿಂದುಮುಂದೆ ನೋಡಬೇಕಾದ ಅವಶ್ಯಕತೆಯಿಲ್ಲ ಎಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತಾ ಇದ್ದೇನೆ. ಆದುದರಿಂದ ನ್ಯಾಯಸಮಿತಿಗಳನ್ನು [illegible] ಬಂಗಾಲ್‌ನಲ್ಲಿ ಮಾಡಲಿಲ್ಲ ಅಂದರೆ, ಆ ಪ್ರಯೋಗ ಇಲ್ಲದೇಹೋದರೆ ಇಲ್ಲಿ ಏಕೆ ಮಾಡುತ್ತೀರಿ? ಶೋಷಣೆಗೆ ಒಳಪಟ್ಟ, ಅನ್ಯಾಯದ ಚಕ್ರವ್ಯೂಹದಲ್ಲಿ ಸಿಲುಕಿರತಕ್ಕ ಬಡ ಜನಗಳಿಗೆ ನ್ಯಾಯಪಂಚಾಯಿತಿಯಿಂದ ಪ್ರಯೋಜನ ಆಗಿದೆಯೋ ಎನ್ನುವು

5-09 p.m.

ದನ್ನು ನೋಡಬೇಕು. ಭೂ ಮಸೂದೆಯನ್ನು ತಂದಂತಹ ಸಂದರ್ಭದಲ್ಲಿ ಕೆಲವರು ತಿದ್ದುಪಡಿಯನ್ನು ಮಾಡಬೇಕೆಂದು ಪ್ರಯತ್ನ ಮಾಡಿದರೇ, ನ್ಯಾಯ ಪಂಚಾಯಿತಿ ಇಲ್ಲೇ ಆಗುತ್ತಿದೆ. ದೊಡ್ಡಬೋರೇಗೌಡರ ನ್ಯಾಯ ಪಂಚಾಯಿತಿಯೇ ಜಾಸ್ತಿಯಾಗಿದೆ.

ಭೂ ಮಸೂದೆ 1970-74ರಲ್ಲಿ ತಿದ್ದುಪಡಿಯಾಯಿತು. ಲ್ಯಾಂಡ್ ಟ್ರಿಬ್ಯುನಲ್ಸ್‌ಗಳ ಸ್ಥಾಪನೆಯಾಯಿತು. ನಾನೂ ಕೂಡ ವಕೀಲಿ ವೃತ್ತಿ ಮಾಡುತ್ತಿದ್ದೆ. ಬಹಳ ಚೆನ್ನಾಗಿ ನ್ಯಾಯವಾಗುತ್ತಿತ್ತು. ನ್ಯಾಯ ಏನು ಬೇಳುತ್ತದೆ ಗೊತ್ತೆ. 1974ರಲ್ಲಿ ಈ ಕಾನೂನು ಬಂತು. ಮೊದಲು ದಣಿ ಎಂದು ಇರುತ್ತಿದ್ದರು, ಕೋರ್ಟಿಗೆ ದಣಿ ಬಂದು ಇಂಜಂಕ್ಷನ್ ತೆಗೆದುಕೊಂಡುಬಿಡುವುದು. ಗೇಣದಾರ ಬೆಳೆಯನ್ನು ಬೆಳೆಸಿರುತ್ತಾನೆ, ಆದರೆ ದಣಿ ಇಂಜಂಕ್ಷನ್ ತೆಗೆದುಕೊಂಡಿರುವುದರಿಂದ ಬೆಳೆಯನ್ನು ಬೆಳೆದಿರುವವನು ಒಕ್ಕಲಲ್ಲವೆಂದು ಆ ಗೇಣದಾರರನ್ನು ಒಕಲೆಬ್ಬಿಸುವುದು ಇಂತವರ ಕೈಯಲ್ಲಿತ್ತು. ಇಂಜಂಕ್ಷನ್ ತೆಗೆದುಕೊಂಡು ಬಿಟ್ಟಮೇಲೆ, ಅವನ ಬೆಳೆ ಹೋಯಿತು. ಮುಂದೆ ಆ ಟೆನೇಸಿ ಅವನಧಲ್ಲ ಎನ್ನುವುದಕ್ಕೆ ಅನುಮತಿಯನ್ನೂ ಕೊಟ್ಟ ಹಾಗೆ ಆಯಿತು. ಅದಕ್ಕಾಗಿ ಅವನು ಏನು ಮಾಡುತ್ತಾನೆಂದರೆ ವಕೀಲನನ್ನು ನೇಮಕ ಮಾಡುತ್ತಾನೆ. ಆದರೂ ಕೊನೆಗೆ ಏನಾಗುತ್ತದೆಂದರೆ ಗೇಣದಾರರು ಇರುವಂತಹ ಆ ಭೂಮಿಯನ್ನು ನ್ಯಾಯ ದೃಷ್ಟಿಯಿಂದ ಸರೆಂಡರ್ ಮಾಡಬೇಕು. ಈ ರೀತಿಯ ಗ್ರಾಮಗಳಲ್ಲಿರತಕ್ಕ ನ್ಯಾಯವನ್ನು ನಾವು ನೋಡಬಹುದು. ಗ್ರಾಮದ ಮುಖಂಡ ತೀರ್ಮಾನ ಕೊಡಿದ ಪ್ರಕಾರ ಅವನ ಬೆಳೆ ಹೋದರೆ ಅವನ ಜೀವನ ಸಮಾಧಿಯಾಗುತ್ತದೆ. ಆದ್ದರಿಂದ ಅವನಿಗೆ ನಾಯ ಸಿಕ್ಕಬೇಕು. ನ್ಯಾಯವನ್ನು ಒದಗಿಸಿಕೊಡುವುದರಲ್ಲಿ ಕಸರತ್ತು ಆಗುತ್ತದೆ. ಕೊನೆಗೆ ಕಾಂಪ್ರಮೈಸ್ ಆಗುತ್ತದೆ. ಪೂರ್ತಿ ಬೆಳೆಗೆ 4—5 ಸಾವಿರ ಪರಿಹಾರವನ್ನು ಕೊಟ್ಟು, ಆ ಭೂಮಿ ಗೇಣದಾರರಿಗೆ ಇಲ್ಲದ ಹಾಗೆ ಆಗುತ್ತದೆ. ಅಷ್ಟೇ ಅಲ್ಲ, ಸರೆಂಟರ್‌ಡೀಡ್ ಆಗುತ್ತದೆ. ಆದರೆ ಆ ಗೇಣದಾರರನ್ನು ಭೂಮಿಯಿಂದ ಹೊರಗೆ ಹಾಕುವುದಿಲ್ಲ. ಭೂಮಿಯಲ್ಲಿರುವುದಕ್ಕೆ ಅಡ್ಡಿ ಇಲ್ಲ, ಆದರೆ ಸರೆಂಡರ್‌ಡೀಡ್ ಆದಂತಹ ಭೂಮಿಯಲ್ಲಿರಿ ಎಂದು ಹೇಳುತ್ತಾರೆ, ಒಂದು ಕಡೆ ಭೂಮಿ ಹೋಯಿತು. ಆಮೇಲೆ ಆ ಭೂಮಿಯನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ನಾನು ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದಿರತಕ್ಕಂತಹವನು. ಹೈಲಿ ಎಜುಕೇಟೆಡ್ ಜನರು ಇರತಕ್ಕ ಜಿಲ್ಲೆಯಲ್ಲೂ ಈ ತೊಂದರೆ ಯಾಗಿದೆ. ಗ್ರಾಮಗಳಲ್ಲಿ

ಆಗತಕ್ಕ ಅನ್ಯಾಯ ಇದು. ಇದೇ ರೀತಿಯ ಕಾನೂನನ್ನು ಭೂ ಮಸೂದೆಯ ಕಾನೂನಿನಲ್ಲೂ ತರುವು ದಕ್ಕೆ ಪ್ರಯತ್ನ ಮಾಡಿದರು. ಟ್ರಿಬ್ಯುನಲ್‌ನಲ್ಲಿ ರಾಜೀ ನ್ಯಾಯದ ಅವಕಾಶವನ್ನು ಈ ಕಾನೂನಿನಲ್ಲಿ ಇರುವಂತಹ ತಿದ್ದುಪಡಿಯನ್ನು ತರೋಣ ಎಂದು ಬಂದರು. ಅದಕ್ಕೆ ನಾವೆಲ್ಲಾ ವಿರೋಧ ಮಾಡಿದವು. ಗ್ರಾಮಗಳಲ್ಲಿ ಆಗತಕ್ಕ ನಾಯ್ಯ, ದಣ ಮತ್ತು ವಕ್ಕಲುಗಳ ಮಧ್ಯೆ ಆಗತಕ್ಕ ನ್ಯಾಯ, ಇದರಿಂದ ವಕ್ಕಲು ಅಂದರೆ ಗೇಣದಾರರಿಗೆ ಅನ್ಯಾಯವಾಗುತ್ತದೆಂದು ತಿಳಿದು ನಾವು ವಿರೋಧ ಮಾಡಿದೆವು. ಆ ರೀತಿ ಅವೊತ್ತು ವಿರೋಧ ಮಾಡಿದ್ದರಿಂದ ಬಹುತೇಕ ಗೇಣಿದಾರರಿಗೆ ಇವೊತ್ತು ಪ್ರಯೋಜನ ಕನಾಟಕ ರಾಜ್ಯ ದಲ್ಲಿ ಬಂದಿದೆ. ಅಂತಹ ಒಂದು ಅನುಕೂಲ ಇವೊತ್ತು ಹೋಗುತ್ತದೆ. ಭೂ ಮಸೂದೆಯಲ್ಲಿ ಸಿಕ್ಕಿದ ಭೂಮಿಯನ್ನು ಕೂಡ ಇಂತಹ ಒಂದು ನ್ಯಾಯ ಸಮಿತಿಗೆ ತೆಗೆದುಕೊಂಡು ಹೋಗಿ ಭೂ ಮಾಲೀಕರು ಯಾರು ಇದ್ದಾರೆ. ಅವರು 5-6 ಸಾವಿರ ರೂಪಾಯಿಗಳ ಹಣವನ್ನು ಗೇಣದಾರರಿಗೆ ಕೊಟ್ಟು ಆ ಭೂಮಿಯನ್ನು ಅಪಹರಿಸಲಿಕ್ಕೆ ಈ ನ್ಯಾಯ ಸಮಿತಿಯಿಂದ ಪ್ರಯೋಜನವಾಗುತ್ತದೆ. I will tell you by this way or that way the will use it as an instrument for harassment, You may are directly how it affeits ?

ಬೇರೆ ಬೇರೆ ರೀತಿಯ ಕೇಸುಗಳನ್ನು ಮಾಡಿಕೊಂಡು ಅವರನ್ನು ಆ ಊರಿನಿಂದ ಓಡಿಸತಕ್ಕ ಪ್ರಯತ್ನ ಇಂತಹ ನ್ಯಾಯ ಸಮಿತಿಗಳಿಂದ ಆಗುತ್ತದೆಂಬುದು ನನಗೆ ಗೊತ್ತಿದೆ.

Sri V. S. Aharya.—Otherwise there is no jurisdiction.

Sri M. Veerappa Moily,—Jurisdiction or non jurusdiction. They know how to use such Nyaya Panchayats. ಆದ್ದರಿಂದ ಈ ನ್ಯಾಯ ಸಮಿತಿಗಳನ್ನು ಮಾಡುವುದಕ್ಕೆ ನಮ್ಮ ಪೂರ್ತಿ ವಿರೋಧ ಇದೆ. ಇಂತಹ ನ್ಯಾಯ ಪಂಚಾಯಿತಿಗಳಿಂದ ಆಗತಕ್ಕ ರಕ್ತಪಾತವನ್ನು ನಿರೀಕ್ಷ ಮಾಡಿಕೊಂಡು ಕಡಿಮೆ ಪಕ್ಷ ಅದನ್ನು ವಿರೋಧಮಾಡತಕ್ಕ ಪ್ರಯತ್ನ ವನ್ನಾದರೂ ಮಾಡೋಣ ಎಂದು ನಾನು ನಿಂತಿದ್ದೇನೆ. ಆದ್ದರಿಂದ ಈ ನಾಯ ಸಮಿತಿಯ ಬಗ್ಗೆ ಮಾನ್ಯ ಹಿರಿಯ ಸದಸ್ಯರು ಹೇಳಿದ ಪ್ರಕಾರ ಒತ್ತಾಯ ಮಾಡತಕ್ಕ ಪ್ರಸಂಗಕ್ಕೆ ತಾವು ಹೋಗಬೇಡಿ. ಗ್ರಾಮಾಂ ತರ ಪ್ರದೇಶದ ಜನರ ಆಸ್ತಿಪಾಸ್ತಿಗಳನ್ನು ಉಳಿಸತಕ್ಕ ಯಾವ ಒಂದು ಉದ್ದೇಶದಿಂದ ಹೊರಟಿದ್ದೀರಿ, ಅದು ಈ ನ್ಯಾಯ ಮಂಡಳಿಯಲ್ಲಿ ಕೋರ್ಟುಗಳಿಗಿಂತ ಚೀಪಾಗುತ್ತದೆ ಎಂದು ತಾವು ತಿಳಿದುಕೊಂಡಿದ್ದರೆ; This will be the costliest affair as far as the poor man is concdrned, the weaker section is considered, and the Scheduled castes/scheduled Tribes are concerned ಆದ್ದರಿಂದ ಇಂತಹನ್ಯಾಯ ಸಮಿತಿಗಳನ್ನು ಮಾಡುವುದಕ್ಕೆ ತಾವು ದಯ ಮಾಡುವುದಕ್ಕೆ ಹೋಗಬೇಡಿ ಎಂದು ಕೂಡ ಹೇಳುತ್ತೇನೆ. ನ್ಯಾಯ ಪಂಚಾಯತಿ ಸಮಿತಿಗಳನು ಎಕ್ಸ್ ಪಿರಿಮೆಂಟ್ ಆಧಾರದ ಮೇಲೂ ಮಾಡುವುದಕ್ಕೆ ತಾವು ಹೋಗಬೇಡಿ. ಇದರಿಂದ ಸಾಕಷ್ಟು ತೊಂದರೆ ಯಾಗುತ್ತದೆಂದು ಹೇಳುತ್ತಿದ್ದೇನೆ. ಇದರ ಬಗ್ಗೆ ವಿಚಾರವಾದ ಚರ್ಚೆ ಈಗಾಗಲೇ ಆಗಿರುವುದರಿಂದ ನಾನು ವಿಶೇಷವಾಗಿ ಇದರ ವಿಸ್ತಾರ ಭಾಷಣಕ್ಕೆ ಇವೊತ್ತು ಹೋಗದೆ, ತಾವು ತಂದಿರುವಂತಹ ಮಸೂದೆ ಗ್ರಾಮ ಮಟ್ಟದಲ್ಲಿ ಯಾವ ರೀತಿ ಇತಿಹಾಸವನ್ನು ಹೇಳುತ್ತದೆ ಅದನ್ನು ನೋಡಬೇಕಾಗಿದೆ. ಮನುಕುಲ ದಿಂದ ಪರಂಪರಾನುಗತವಾಗಿ ಬಂದಂತಹ ಗ್ರಾಮ ಪಂಚಾಯಿತಿಯ ವ್ಯವಸ್ಥೆಗೆ ಇವೊತ್ತು ನಾವು ಇದ ರಿಂದ ಮಂಗಳವನ್ನು ಹಾಡುತ್ತಿದ್ದೇವೆ. ಮನುಕೂಲ ಶತಮಾನದಿಂದ ಅಲ್ಲ. ಸಾವಿರಾರು ವರ್ಷಗಳಿಂದ ಗ್ರಾಮ ಪಂಚಾಯಿತಿಯನ್ನು ಗ್ರಾಮಗಳಲ್ಲಿ ಸ್ಥಾಪನೆ ಮಾಡುವುದಕ್ಕೆ ಅನುಕೂಲವಾಗಿ ಬಂತು. ಇವೊತ್ತು ಇಂತಹ ಒಂದು ಮಸೂದೆಯಿಂದ ಆ ಗ್ರಾಮ ಪಂಚಾಯಿತಿಗಳ ಸಿದ್ಧಾಂತಕ್ಕೆ ಕರ್ನಾಟಕ ರಾಜ್ಯದಲ್ಲಿ

ಮಂಗಳವನ್ನು ಹಾಡುತ್ತಿದ್ದೇವೆ ಎಂದು ಹೇಳಿದರೆ ಅದು ಉತ್ಪ್ರೇಕ್ಷೆ ಏನಲ್ಲ. ಬಹಳ ಲಘುವಾಗಿ ಇದನ್ನು ತೆಗೆದುಕೊಂಡು ಹೋಗುವಂತಿಲ್ಲ. ಆದ್ದರಿಂದ ಇವೊತ್ತು ದಿನನಿತ್ಯ ಗ್ರಾಮಗಳಲ್ಲಿ ಸಮಸ್ಯೆಗಳಿದ್ದರೆ, ಅಲ್ಲಿರತಕ್ಕ ಏನರೇ ಅದನ್ನು ತಿಳಿಯನ್ನಾಗಿ ಮಾಡಿ, ದಿನನಿತ್ಯ ಇರುವಂತಹ ಸಮಸ್ಯೆಗಳನ್ನು ಪರಿಹಾರ ಮಾಡತಕ್ಕ ಸಮಿತಿಗಳಿಗೆ ಇವೊತ್ತು ಇತಿಶ್ರೀ ಹಾಡುತ್ತಿವೆ. ತಾಲ್ಲೂಕು ಮಟ್ಟದಲ್ಲಿ ಏನು ಜನತಾಂತ್ರಿಕ ವ್ಯವಸ್ಥೆ ಇತ್ತು. ಆ ಜನತಾಂತ್ರಿಕ ವ್ಯವಸ್ಥೆಗೂ ಇವೊತ್ತು ನಾವು ಮಂಗಳವನ್ನು ಹಾಡುತ್ತಿದ್ದೇವೆ. ತಾಲ್ಲೂಕು ಮಟ್ಟದಲ್ಲಿ ಅಧಿಕಾರಿಷಾಹಿ ಏನು ಇದೆ, ಅದನ್ನು ಕಡಿಮೆ ಮಾಡುವುದಕ್ಕೆ ಈ ಮಸೂದೆಯನ್ನು ಪಾಸ್ ಮಾಡಿದರೂ ಕೂಡ ಅದು ಸಾಧ್ಯವಾಗುವುದಿಲ್ಲ. ಇದನ್ನು ಖಂಡಿತವಾಗಿ ಮರೆಯುವುದಕ್ಕೆ ಸಾಧ್ಯವಿಲ್ಲ. ವ್ಯವಹಾರಿಕವಾಗಿ ನಾನು ಹೇಳುತ್ತಿದ್ದೇನೆ. ಏಕೆಂದರೆ ಇದನ್ನು ಸ್ಪಷ್ಟವಾಗಿ ತಿಳಿದುಕೊಂಡು ಇದರಿಂದ ಮುಂದೆ ಬರತಕ್ಕ ಬರತಕ್ಕೆ ಅನಾಹುತಗಳನ್ನು ತಡೆಹಿಡಿಯತಕ್ಕ ದೃಷ್ಟಿಯಿಂದ ಮೊದಲು ಚಿಂತೆಯನ್ನು ಮಾಡುವುದು ಒಳ್ಳೆಯದು. ಜಿಲ್ಲಾ ಪರಿಷತ್ತಿನ ಸ್ಥಾಪನೆ ಬಗ್ಗೆ ಅದಕ್ಕೆ ಸಂಪನ್ಮೂಲವನ್ನು ಒದಗಿಸಕೊಡಬೇಕು. ಅದಕ್ಕೆ [illegible] ಪಡಿಯನ್ನೂ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಇದರ ಜೊತೆಯಲ್ಲಿ ಅನೇಕ ಸಮಸ್ಯೆಗಳು ಜಿಲ್ಲಾ ಪರಿಷತ್ತಿನಲ್ಲೂ ಇವೆ. ಕೆಲವು ವಿವರಗಳನ್ನು ನಾವು ಕೂಡ ಪಡೆದಿದ್ದೇವೆ. ಆಂಧ್ರಪ್ರದೇಶದಲ್ಲಿ ಆ ಒಂದು ವ್ಯವಸ್ಥೆ ಇದೆ. ಕ್ಲಾಸ್‌ಬೈ ಕ್ಲಾಸ್ ಅಂಗೀಕರಿಸುವಾಗ ವಿವರವಾಗಿ ನಾನು ಹೇಳುತ್ತೇನೆ. ಅಲ್ಲಿ ಹರಿಜನ–ಗಿರಿಜನರಿಗೆ ಹಾಗೂ ಹಿಂದುಳಿದವರ್ಗದವರೂ ಅದರ ಅಧ್ಯಕ್ಷರಾಗುವುದಕ್ಕೆ ರಿಸರ್ವೇಸನ್ ಬೇಸಿಸ್ ಆ ರೀತಿ ಮಾಡಿದ್ದಾರೆ. ಇಲ್ಲೂ ಕೂಡ ಅದನ್ನು ಮಾಡುವಂತಹ ಅವಶ್ಯಕತೆ ಇದೆ. ಇಲ್ಲದಿದ್ದರೆ ಸರಿಯಾದ ನ್ಯಾಯ ಈ ವರ್ಗದ ಜನರಿಗೆ ಸಿಕ್ಕುವುದಿಲ್ಲ ಎಂದು ಹೇಳುತ್ತಿದ್ದೇನೆ. ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಿಶೇಷವಾಗಿ ವಂದಿಸಿ ದನ್ನ ಮಾತುಗಳನು ಮುಗಿಸುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಗ್ರಾಮಾಭಿವೃದ್ಧಿ ಹಾಗೂ ಪಂಚಾಯಿತಿ ರಾಜ್ ಮಂತ್ರಿಗಳು).–ಸನ್ಮಾನ್ಯ ಅಧ್ಯಕ್ಷರೆ, ಸುಮಾರು 45 ಮಂದಿ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ ಈ ಮಸೂದೆಯನ್ನು ವಿವಿಧ ದೃಷ್ಟಿಕೋನಗಳಿಂದ ನೋಡಿದ್ದಾರೆ. ಅವರಿಗೆ ತಮ್ಮ ಮೂಲಕ ನನ್ನ ನಮ್ರ ನಮನವನ್ನು ಸಲ್ಲಿಸಿ ಈ ಒಂದು ಪ್ರಯೋಗ ನಡೆದಾಗ ನಾನು ಪ್ರಾಸ್ತವಿಕ ಭಾಷಣದಲ್ಲಿ ಇದರ ಸಿದ್ಧಾಂತವನ್ನು ಹೇಳಿದ್ದೇನೆ. ಇದನ್ನು ಯಾವ ಸಿದ್ಧಾಂತದ ಹಿನ್ನೆಲೆಯಲ್ಲಿ ತಯಾರಿಸಿದ್ದೇವೆಬುದನ್ನು ಸಹ ಹೇಳಿದ್ದೇನೆ. ಇವೊತ್ತು ನನ್ನ ದೃಷ್ಟಿಯಲ್ಲಿ ಇದು ಒಂದು ಚಿಕ್ಕ ಮಸೂದೆ. ಈ ನಾಡಿನ ಅಭಿವೃದ್ಧಿ ಶೀಲ ಆಡಳಿತದ ಬಗ್ಗೆ ಹೊಸ ದೃಷ್ಟಿಕೋನ ಕೊಡುವ ಮಸೂದೆ. ಇದು ಕೇವಲ ನನ್ನ ಮತ್ತು ನಿಮ್ಮ ಪ್ರಯತ್ನ ಅಲ್ಲ, ಪ್ರಯೋಗ ಅಲ್ಲಿ. ಇದಕ್ಕೆ ಅಪಾರವಾದ ಹಿನ್ನೆಲೆ ಈ ದೇಶದಲ್ಲಿದೆ. ಆ ಹಿನ್ನೆಲೆಯಲ್ಲಿ ವಿಫುಲವಾಗಿ ತಾಂತ್ರಿಕ ಹಾಗೂ ವೈಜ್ಞಾನಿಕ ಚಿಂತನೆ ನಡೆದಿದ. ಅದರ ಆಧಾರದ ಮೇಲೆ ಈ ಮಸೂದೆಯನ್ನು ತಯಾರಿಸಿದ್ದೇವೆಂದು ಸಮ್ರವಾಗಿ ತಿಳಿಸಬಯಸಿ ಈ ಮಸೂದೆಯಲ್ಲಿ ಇಡೀ ಸಮಾಜದ ಗೋಳು ಏನಿದೆ, ನಾಡಿನ ಬಡತನ, ಅನಿಷ್ಟಗಳು ಏನಿವೆ ಅವನ್ನು ವಿಮರ್ಶಿಸಲು ಪ್ರಯತ್ನ ಮಾಡಿರುವ ಸಂದರ್ಭದಲ್ಲಿ ರಾಷ ಪಿತ ಮಹಾತ್ಮನ ಹೆಸರನ್ನು ಉಚ್ಚರಿಸುವುದಕ್ಕೆ ಆನಂದವಾಗಿದೆ ಎಂದು ಹೇಳುತ್ತೇನೆ. ಪಂಡಿತ್ ನೆಹರೂರವರು ಇಂಥ ಒಂದು ವ್ಯವಸ್ಥೆಯನ್ನು 15ನೇ ಮಾರ್ಚ್ 1962ರಲ್ಲಿ ದೇಶಾದ್ಯಂತ ತರಲು ಪ್ರಯತ್ನ ಮಾಡಿದಾಗ ರಾಜ್ಯಸಭೆಯಲ್ಲಿ ಮಾಡಿದ ಭಾಷಣವನ್ನು ಓದಿ ನನ್ನ ಭಾಷಣವನ್ನು ಪ್ರಾರಂಭಿಸುತ್ತೇನೆ. ಅದು ಈ ರೀತಿ ಇದೆ :

"Panchayat Raj is a mighty experiment. It might not succeed all over India, in every part of India, but the conception is a

tremendous one, and it is succeeding somewhere and it will succeed in the major part of India. You can pick out here and there and say that it has not succeeded. Some Panchas might have misbehaved as anybody has misbehaved. I would beg of the House to consider this entire background, this enormous country with an enormous population on the move, on the move in a certain direction which I think is the right direction. Many people stumble and fall. Many people make mistakes. Many people betray the objective we aim at. All this is happening and yet the whole trend is forward and in the right direction. What we are rather worried about is the pace of change, because there are certain trends in India and many trends in the world which may create difficulties for us unless the pase is faster, fast enought,"

ಈ ಒಂದು ಪ್ರಯತ್ನಕ್ಕೆ ಪ್ರಯೋಗಕ್ಕೆ, ದೇಶದಲ್ಲಿ ಸಾಕಷ್ಟು ಬೆಂಬಲಇಲ್ಲ ಎಂಬ ದೃಷ್ಟಿಯಲ್ಲಿ ನೆಹರೂರವರು ಈ ಪ್ರಯತ್ನವನ್ನು 1962ರಲ್ಲಿ ಪ್ರಯೋಗ ಮಾಡಿದಾಗ ನಾಡಿನಲ್ಲಿ ಜನರು ಹೇಳಿದ ಮಾತನ್ನು ಸದನದ ಎಲ್ಲಾ ಸದಸ್ಯರೂ ಮೆಚ್ಚುತ್ತಾರೆಂದು ನಂಬಿದ್ದೀನೆ. ಈ ಒಂದು ಮಸೂದೆಯಲ್ಲಿ ಈ ದೇಶದ ಸಮಾಜದ ಎಲ್ಲಾ ಅಸಮಾನತೆಗಳನ್ನು, ಅನಿಷ್ಟಗಳನ್ನು ತೊಡೆಯುವ ಪ್ರಯತ್ನ ನಡೆದಿದೆ ಎಂದೂ ಮತ್ತು ಯಾವುದೇ ಅಹಿತಕ್ಕೆ ಪ್ರಯತ್ನ ಮಾಡುವುದಿಲ್ಲವೆಂಬ ಅಭಿಪ್ರಾಯವನ್ನು ಹೇಳುತ್ತಾ, ಹಿರಿಯ ಸದಸ್ಯರಾದ ರಂಗನಾಥ್‌ರವರು ವಿಚಾರಪೂರ್ಣವಾದ ಹಾಗೂ ಮನು ಕಲಕುದ ಮಾತುಗಳನ್ನು ಆಡಿದರು. ಇರತಕ್ಕ ಸಮಾಜದ ಪರಿಸ್ಥಿತಿಯಲ್ಲಿ ಅಷ್ಟು ಪ್ರಾಜ್ಞವಾಗಿ ಹೇಳಿದ ಅವರು ನಮ್ಮ ಈ ಮಸೂದೆಯಲ್ಲಿ ಅದನ್ನು ಹೇಗೆ ಸಾಧಿಸುತ್ತೀರಿ ಎಂದು ಕೇಳಿದರು. ಈ ಸಂದರ್ಭದಲ್ಲಿ ತಮ್ಮ ಮೂಲಕ ಪ್ರಾರ್ಥಿಸುತ್ತೇನೆ 36 ವರ್ಷಗಳ ಕಾಲ ನಾವು–ನೀವು ಸೇರಿ ಮಾಡಿದ ಮಹಾಪಾಪದಿಂದಾಗಿ ಇವೊತ್ತು ಇಂಥ ಸಮಸ್ಯೆಗಳು ನಾಡಿನಲ್ಲಿವೆ. ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಗಳು ಸ್ವಾತಂತ್ರ್ಯನಂತರದ 36 ವರ್ಷಗಳಲ್ಲೂ ನಡೆಯುತ್ತಿದ್ದರೆ ಇದಕ್ಕೆ ಕಾರಣರು ಯಾರು? ಈ ಮಹಾಪಾಪದಲ್ಲಿ ನಾವು ನೀವು ಭಾಗಿಯಾಗಿದ್ದೇವೆ. ಇವನ್ನು ನಾವು ಹೋಗಲಾಡಿಸುವುದು ಹೇಗೆ ಎಂಬ ಬಗ್ಗೆ ಚಿಂತಿಸಬೇಕಾಗಿದೆ. ಕೆಲವರು ಮಾತನಾಡುತ್ತಾ ಗಾಂಧೀಜಿಯವರ ಹೆಸರನ್ನು ತಂದು ಗಾಂಧೀಜಿಯವರ ಕಲ್ಪನೆ ಈ ಮಸೂದೆಯಲ್ಲಿ ಇಲ್ಲವೆಂದರು. ನಾನು ಮೊದಲೇ ಹೇಳಿದೆ, ಆ ಮಹಾತ್ಮನ ಹೆಸರಿಗೆ ಅಪಚಾರ ಮಾಡುವುದಿಲ್ಲವೆಂದು. ಗ್ರಾಮ ಸ್ವರಾಜ್ಯದ ಕಲ್ಪನೆ ಏನಿದೆ ಅದು ಕೇವಲ ಗ್ರಾಮಕ್ಕೆ ಸೀಮಿತ ಅಲ್ಲ; ಅದು ರಾಷ್ಟ್ರ ಸ್ವರೂಪವಾಗಬೇಕು; ರಾಷ್ಟ್ರದ ಆರ್ಥಿಕ ರಚನೆ ಆಗಬೇಕು; ಆಗ ಗ್ರಾಮಸ್ವರಾಜ್ಯ ಬರಲು ಸಾಧ್ಯ. ಗಾಂಧಿಯ ರಾಜ್ಯಾಂಗದಲ್ಲಿ ನಾವು ಬದಕಿಲ್ಲ. ಗಾಂಧಿ ಹೇಳಿದ ರಾಜ್ಯಾಂಗದ ವಿಧಿಗಳಿಂದ ನಾವು ಬದುಕಿದ್ದೇವೆ. ಆ ದೃಷ್ಟಿಯಿಂದ ಆತನಿಗೆ ಅಪಚಾರವಾಗಬಾರದು. ಒಂದನ್ನು ಮಾತ್ರ ಇದರಲ್ಲಿ ಪ್ರಯತ್ನ ಮಾಡಿದ್ದೇವೆ. ಗಾಂಧಿಯ ಒಂದು. ಪದ್ಧತಿಯನ್ನು ಜಾರಿಗೆ ತರಲು ಒಂದು ದೃಷ್ಟಿಯಲ್ಲಿ ಪ್ರಯತ್ನ ಮಾಡಿದ್ದೇವೆ. ಈ ದೇಶದ ಸಾಧಾರಣ ಜನ ಮುಗ್ಧ ಜನ. ಯಾರಲ್ಲಿ ಸಂಶಯ ವ್ಯಕ್ತಪಡಿಸುತ್ತೀರಿ ? ಯಾರ ವಿಚಾರದಲ್ಲಿ ಒಂದು ಸಂಶಯವನ್ನು ಇಷ್ಟು ಬಲವಾಗಿ ವ್ಯಕ್ತಪಡಿಸಿದ್ದೇವೆ ಆ ಸಾಧಾರಣ ಮನುಷ್ಯನಲ್ಲಿ ಅಚಲವಾದ ನಂಬಿಕೆ ಬಾಪುಗೆ ಇತ್ತು. ಇವೊತ್ತು ಇರತಕ್ಕ ಒಂದು ಸಾಮಾಜಿಕ ಚೌಕಟ್ಟಿನೊಳಗೆ, ಇವೊತ್ತು ಇರತಕ್ಕ ಆರ್ಥಿಕ ಚೌಕ

ಟ್ಟಿನೊಳಗೆ, ಸಾಧಾರಣ ಮುಗ್ಧನ ಕೈಯಲ್ಲಿ ತನ್ನ ಭವಿಷ್ಯವನ್ನು ನಿರ್ಮಾಣ ಮಾಡತಕ್ಕ ಮತ್ತು ತನ್ನ ಅಗತ್ಯಗಳನ್ನು ತೀರ್ಮಾನ ಮಾಡತಕ್ಕ ಮತ್ತು ಈ ಚೌಕಟ್ಟಿನೊಳಗೆ ತೀರ್ಮಾನ ಮಾಡತಕ್ಕ ಅಭಿಪ್ರಾಯ ತಾಳಬೇಕೆಂದು....

ಶ್ರೀ ಕೆ.ಹೆಚ್. ರಂಗನಾಥ್.—ಅವನ ಮುಗ್ಧತೆಯ ಬಗ್ಗೆ ಸಂಶಯ ವ್ಯಕ್ತಮಾಡಿದ್ದಾರೆ. ಅವನನ್ನು ಶೋಷಣೆ ಮಾಡತಕ್ಕ ಪ್ರಭಾವಿ ಜನರು ಇದ್ದಾರೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಈ ಮಸೂದೆಯಲ್ಲಿ ಏನು ಮಾಡುತ್ತೇವೆ ?

ಶ್ರೀ ಕೆ.ಹೆಚ್. ರಂಗನಾಥ್.—ಸಂಶಯ ಅಲ್ಲಿ ಅಲ್ಲ. ಅವನನ್ನು ನೇರವಾಗಿ ಶೋಷಣೆ ಮಾಡತಕ್ಕವರು ಮತ್ತು ಅದಕ್ಕೆ ವ್ಯವಸ್ಥೆ ಮಾಡಿರತಕ್ಕ ಜನರು ಏನಿದ್ದಾರೆ ಅವರ ಕೈಯಲ್ಲಿ ಹೋಗುವುದರಿಂದ ಅವರಲ್ಲಿ ಸಂಶಯ ವ್ಯಕ್ತ ಮಾಡುತ್ತಿದ್ದೇನೆ. ಯಾವ ಮುಗ್ಧನ ಕೈಯಲ್ಲೂ ಅದು ಹೋಗುವುದಿಲ್ಲ. ಇವತ್ತು ಏನಾಗಿದೆ ಎಂದರೆ ತೋಳನನ್ನು ಕುರಿ ಕಾಯುವುದಕ್ಕೆ ಹಚ್ಚಿದಂತಾಗಿದೆ. ಸ್ವಾತಂತ್ರ್ಯಾನಂತರದ 36 ವರ್ಷಗಳಲ್ಲಿ ನಾವು-ನೀವು ಎನ್ನುವ ಮಾತನ್ನು ಹೇಳಿದರು. ನಾನು ಒಂದು ಮಾತನ್ನು ನೊಂದು ಹೇಳುತ್ತೇನೆಂದು ನಿನ್ನೆ ಕೂಡ ಹೇಳಿದ್ದೆ. ನಮ್ಮ ಮುಂದಿರತಕ್ಕ ಸಮಾಜ ಏನಿದೆ ಇದರಲ್ಲಿ ಇರತಕ್ಕ ಶ್ರಮ ಜೀವಿ ವರ್ಗದಲ್ಲಿ 100ಕ್ಕೆ 60-70 ಜನರು ಶೋಷಣೆಗೆ ಒಳಗಾದವರಲ್ಲಿ ಬಂದರೆ ಕೊನೆಯ ಹಂತದಲ್ಲಿ ಬರತಕ್ಕವನು ನಾನು. ನಾನು ಹುಟ್ಟಿರತಕ್ಕ ಸಮಾಜ ಅಂಥದ್ದು. ನಾನು ಯಾವ ರೀತಿ ಶೋಷಣೆ ಮಾಡತಕ್ಕ ವರ್ಗಕ್ಕೆ ಸೇರಿದ್ದೇನೆಂದರೆ....

ಶ್ರೀ ಅಬ್ದುಲ್ ನಜೀರ್ ಸಾಬ್.—ಕೊನೆಗೆ ಇದು ಎಲ್ಲಿಗೆ ನಿಲ್ಲಬೇಕು? ಅವರ ಕಳಕಳಿಯ ಮಾತು ನನ್ನ ಹೃದಯಕ್ಕೆ ಹೋಗಿದೆ.

ಶ್ರೀ ಕೆ.ಹೆಚ್. ರಂಗನಾಥ್.—ಒಂದು ಪಕ್ಷದ ಸದಸ್ಯನಾಗಿ ನಾನು ಮಾತನಾಡುತ್ತಿಲ್ಲ. ರಂಗನಾಥನಾಗಿ, ನಾನು ನನ್ನ ಅಭಿಪ್ರಾಯವನ್ನು ವ್ಯಕ್ತ ಮಾಡುವ ಸಲುವಾಗಿ ಮಾತನಾಡುತ್ತಿದ್ದೇನೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ವರ್ಗ ಸಂಘರ್ಷ ಆಗಬೇಕು; ಅಭಿಪ್ರಾಯ ಬದಲಾವಣೆ ಆಗಬೇಕು.

ಶ್ರೀ ಜೆ.ಹೆಚ್. ಪಟೇಲ್.—ರಂಗನಾಥರವರು ಹೇಳಿದ್ದು ಪತ್ರಿಕೆಯಲ್ಲೂ ಬಂದಿದೆ. ನಮ್ಮನ್ನು ತುಳಿದು ನಮ್ಮ ತಲೆಯ ಮೇಲೆ ಕಾಲಿಟ್ಟು ಮೇಲೆ ಹೋಗತಕ್ಕ ಜನರಿಗೆ ಮೆಟ್ಟಲು ಆಗಿರತಕ್ಕ ಸಣ್ಣ ವರ್ಗಕ್ಕೆ ಸೇರಿರತಕ್ಕ ಮನುಷ್ಯ ನಾನು ಎಂದು ಹೇಳಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್.—ಅಂಥ ಸಮಾಜದವನು ನಾನು. ನಮ್ಮ ಸಮಾಜಿಕ ಸೇರಿದ ಜನ ಸಂಖ್ಯೆ ರಾಷ್ಟ್ರ ಮಟ್ಟದಲ್ಲಿ 11 ಕೋಟಿ ಇದ್ದರೆ ರಾಜ್ಯಮಟ್ಟದಲ್ಲಿ 50 ಲಕ್ಷಕ್ಕೂ ಹೆಚ್ಚು ಇದೆ.

ಶ್ರೀ ಜೆ.ಹೆಚ್. ಪಟೇಲ್.—ಸಂಖ್ಯೆಯಲ್ಲಿ ಕಡಿಮೆ ಇದ್ದಾರೆಂದು ಹೇಳಲಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್.—ನಿನ್ನೆ ನಮ್ಮ ಸ್ನೇಹಿತರು ವರ್ಣಾಶ್ರಮ ಇಲ್ಲವೆಂದರು; ಎಷ್ಟು ಹೇಳಿದರೂ ಒಪ್ಪಲಿಲ್ಲ. ವೇದದಲ್ಲೂ ಹೇಳಿಲ್ಲವೆಂದರು.

ಶ್ರೀ ಜೆ.ಹೆಚ್. ಪಟೇಲ್.—ವ್ಯತ್ಯಾಸ ಇಷ್ಟೇ ಹೇಳುತ್ತಿರುವುದು. ಮನುಷ್ಯನಿಂದ ಮನುಷ್ಯ ಜಾತಿ ಪದ್ಧತಿ ಮೂಲಕ ಶೋಷಣೆ ಆಗುವುದು ಪ್ರಪಂಚದ ಎಲ್ಲಾ ದೇಶಗಳ ಅನುಭವ. ಬರೀ ನಮ್ಮದು ಮಾತ್ರವಲ್ಲ. ಬೇರೆ ದೇಶಗಳಿಗೂ ನಮ್ಮ ದೇಶಕ್ಕೂ ವ್ಯತ್ಯಾಸ ಏನೆಂದರೆ, ಬೇರೆ ದೇಶಗಳಲ್ಲಿ ನೀಗ್ರೋ ಜನಾಂಗದವರನ್ನು ಬಿಳಿ ಜನಾಂಗದವರು ಶೋಷಣೆ ಮಾಡುತ್ತಾ ಬಂದರು. ಅಲ್ಲಿ ದೇಹಬಲದಿಂದ (ಬಂದೂಕು ಬಲದಿಂದ) ಎಲ್ಲಿಯವರೆಗೆ ಶೋಷಣೆ ಮಾಡುವುದಕ್ಕೆ ಸಾಧ್ಯವಿದೆಯೋ ಅಲ್ಲಿಯವರೆಗೆ ಮಾಡಿದರು. ಅದನ್ನು ಪ್ರತಿಭಟಿಸಿದಾಗ ದೇಹ ಹೋದರೂ ಚಿಂತೆ ಇಲ್ಲವೆಂದು ಗುಂಡು ಹಾಕಿ ಶೋಷಣೆ ಮಾಡಿದರು. ನಮ್ಮ ದೇಶದಲ್ಲಿ ಬಂದೂಕು ಉಪಯೋಗಿಸಲಿಲ್ಲ. ಬಂದೂಕು ಉಪಯೋಗಿಸಿ ದೇಹ

ತೆಗೆದರೆ ನಾಳೆ ದಿವಸ ಕಸ ಗುಡಿಸುವವರು ಸಿಗುವುದಿಲ್ಲವೆಂದು ಆ ಕೆಲಸ ಮಾಡಲಿಲ್ಲ. ದೇಹ ಇರಬೇಕು, ಜೀವನು ಸಾಯಬಾರದು, ಆ ರೀತಿ ಶಿಕ್ಷೆ ಕೊಡಬೇಕೆಂದು ಕೊಟ್ಟರು. ಇದು ಅವನಲ್ಲಿ ಭೀತಿ ಮೂಡಿಸತಕ್ಕ ಕ್ರಮ ಎಂದು ತಿಳಿದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಎಲ್ಲರೂ ಕೂಡ ಮಾತನಾಡುತ್ತೇವೆ. ಆದರೆ ಏತಕ್ಕೆ ಹೀಗಿದ್ದೇವೆ ಎಂಬುದನ್ನು ಯೋಜನೆ ಮಾಡುತ್ತಿಲ್ಲ. ಬಡವರು ಹೇಗಿದ್ದಾರೆ, ಅಂಕಿಅಂಶ ಎಷ್ಟಿದೆ ಎಂಬುದನ್ನು ನಿನ್ನೆ ಮಾನ್ಯ ಸದಸ್ಯರು ಕೇಳಿದರು. 36 ವರ್ಷಗಳ ನಂತರ ಈ ನಾಡಿನ ಪರಿಸ್ಥಿತಿ ಏನಾಗಿದೆ ಎಂಬುದರ ಬಗ್ಗೆ ಪ್ರಸಿದ್ಧ ಅರ್ಥಶಾಸ್ತ್ರಜ್ಞನ ಲೇಖನ ಓದಿದರೆ ಗೊತ್ತಾಗುತ್ತದೆ. ಅನೇಕ ಬಡವರ ಕಾರ್ಯಕ್ರಮ ಮಾಡಿದ್ದೇವೆ, ಪ್ರಗತಿಪರವಾದ ಕಾನೂನು ಮಾಡಿದ್ದೇವೆ ಎಂದು ಕಂಠಶೋಷಣೆ ಮಾಡಿಕೊಳ್ಳುವವರು ಈ ಲೇಖನವನ್ನು ನೋಡಿದರೆ ಅವರ ಕಣ್ಣು ತೆರೆಯಬಹುದು. ಪ್ಲಾನಿಂಗ್ ಕಮಿಷನ್ ಸದಸ್ಯರಾಗಿದ್ದ ಶ್ರೀ ರಾಜಕೃಷ್ಣ ಅವರು, ಪ್ರಸಿದ್ಧ ಅರ್ಥಶಾಸ್ತ್ರಜ್ಞರು ಹೇಳಿರುವುದನ್ನು ಓದುತ್ತೇನೆ. ನಾನು ಎಲ್ಲಾ ಓದುವುದಕ್ಕೆ ಹೋಗುವುದಿಲ್ಲ. ಮುಖ್ಯವಾದ ನಾಲ್ಕು ಪಂಕ್ತಿಗಳನ್ನು ಮಾತ್ರ ಓದುತ್ತೇನೆ.

"For 32 years the rate of growth of national income has been stagnating around a miserable mean of about 3.5. per cent. This rate keeps India as low as 71st in the list of 104 countries ordered according to the rate of growth of income per capita.

We are the 3rd nation in technical manpower. While in the national income and per capita income we are 71st nation. Further he says :

"Over the same period the agricultural growth rate has averaged 2.6 per cent per annum. And, contrary to common belief, this rate has not been different, in a statistically significant sense, before and after the beginning of the green revolution in 1967. All that the revolution did was that, after it came, more than three-ourths of the growth of farm output has been due to the growth of productivity per hectare; before it came, a major part of it was due to the growth of cropped area. This means that the revolution only prevented a decline in the agricultural growth rate.

"On the distribution side we find that the co-efficient of the distribution of rural assets did not change in the 1960s. It was 0.55 in 1961–62 and 0.66 ten years later. The top 10 per cent of rural households commanded more than half (51 per cent) and the bottom 10 per cent only 0.1 per cent of the total stock of rural assets, both at the beginning and the end of the decade.

Agricultural land, of course, dominates the rural asset portfolio. Therefore, the implication of the stability of the rural asset co-efficient is that, in spite of the massive law-making and verbal fuss about land reform, no significant redistribution of land really came about. Overs 36 years ending June 1983 only 2 million acres, or 0.58 per cent of the total cultivated area of 347 million acres, has actually been distributed among the landless".

ಶ್ರೀ ಕೆ.ಹೆಚ್. ರಂಗನಾಥ್.—ಏತಕ್ಕೆ ಹೀಗಾಗಿದೆ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಕಾರಣ ಹೇಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ದಿವಂಗತ ಎಂ. ಎನ್. ರಾಯರ ಒಂದು ಪುಸ್ತಕವನ್ನು ತಾವು ಓದಿರಬಹುದು. ಅವರು ಅದರಲ್ಲಿ ಹೇಳಿದ್ದಾರೆ ಸ್ವಾತಂತ್ರ್ಯ ಪೂರ್ವದಲ್ಲಿ ಯಾರ ಕೈಯಲ್ಲಿ ರಾಷ್ಟ್ರದ ಸಂಪತ್ತು ಇತ್ತೋ ಸ್ವಾತಂತ್ರ್ಯ ಬಂದಮೇಲೆ ಅದನ್ನು ದ್ವಿಗುಣ ಮಾಡುವುದಕ್ಕಲ್ಲ, ಇನ್ನೂ ಸಾವಿರ ಪಟ್ಟು ಜಾಸ್ತಿ ಮಾಡಿಕೊಳ್ಳುವುದಕ್ಕೆ ಅವರಿಗೆ ಸ್ವಾತಂತ್ರ್ಯ ಬಂತು ಎಂದು. ರದ್ದರಿಂದ ಈ ಪರಿಸ್ಥಿತಿ ಇದೆ. He says also what was the wealth beforse independence held by Tata and Birla and subsequently what has happened. There might have been political changes-whether there was any change in the structure, or in the composition, or in the acquistion of the property and the wealth, Has it been changed ? ಎಕ್ಸ್‌ಪ್ಯಾನ್‌ಷನ್ ಆಗದೇ ಇದ್ದುದರಿಂದ ಇದು ಸೊನ್ನೆ ಆಗಿದೆ. ಪರ್‌ಕ್ಯಾಪಿಟಾ ಗ್ರೋತ್ ಜಾಸ್ತಿ ಇರಬಹುದು. ಅದನ್ನು ಪತ್ತೆ ಮಾಡಿ. ಈ ಪರಿಸ್ಥಿತಿಯಲ್ಲಿ ನಾಳೆ ಈ ಶೋಷಿತ ವರ್ಗದವರು ಎಷ್ಟು ಜನ ಮಂಡಲ್ ಪಂಚಾಯಿತಿಗಳಲ್ಲಿ ಮತ್ತು ಜಿಲ್ಲಾ ಪರಿಷತ್ತುಗಳಲ್ಲಿ ಸದಸ್ಯರಾಗಿ ಬರುತ್ತಾರೆ ಯಾವ ಪರಿಸ್ಥಿತಿ ಬರುತ್ತದೆ. ಅವರ ಕೈಯಲ್ಲಿ ಅಧಿಕಾರ ಬರದಿದ್ದರೆ ಏನಾಗಬಹುದು ಎಂಬ ವಿಚಾರವನ್ನು ತಮ್ಮ ಮುಂದೆ ಇಡುತ್ತಿದ್ದೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ರಂಗನಾಥ್ ಅವರ ಮಾತನ್ನು ವಾದಕ್ಕೆ ಒಪ್ಪಿದೆ. ಇಂಥ ಅಸಮಾನ ವ್ಯವಸ್ಥೆ ದೇಶದಲ್ಲಿದ್ದರೆ ಅದಕ್ಕೆ ಅವರ ವಿರೋಧವಿಲ್ಲ. ಆದರೆ ಮಂಡಲ್ ಪಂಚಾಯಿತಿಯಲ್ಲಿ ಅಥವಾ ಜಿಲ್ಲಾ ಪರಿಷತ್ತಿನಲ್ಲಿ ವಿರೋಧ ಏಕೆ ? ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ತುಗಳು ಇಂಥ ಅವ್ಯವಸ್ಥೆ ಮತ್ತು ಅಸಮಾನತೆಯನ್ನು ನಿರ್ಮಾಣ ಮಾಡುವ ಸಂಸ್ಥೆಗಳಲ್ಲಿ ಇದನ್ನು ನಿರ್ಮಾಣ ಮಾಡುವ ವ್ಯವಸ್ಥೆ ಇವೊತ್ತಿನ ರಾಜಕೀಯ ವ್ಯವಸ್ಥೆ ; ಇವೊತ್ತಿರತಕ್ಕ ಪಟ್ಟಭಧ್ರ ಹಿತಗಳು. ಮಾನ್ಯ ಜೆ. ಎಚ್. ಪಟೇಲರು ಏನು ಹೇಳಿದರು ಅದನ್ನು ಡಾಕ್ಟರ್ ಲೋಹಿಯಾ ಆವೂರ ಹೇಳಿದ್ದರು. ಪೌರೋಹಿತ್ಯ, ಧರ್ಮ, ಇದರಲ್ಲಿ ಶ್ಲೋಕಗಳಿಂದ ಮನುಷ್ಯನನ್ನು ಕೊಂದರು. ಹಾಗೆಯೇ ಅಧಿಕಾರವನ್ನು ಕೈಯಲ್ಲಿ ಹಿಡಿದಿರತಕ್ಕ ಆಡಳಿತ ವರ್ಗದವರು ಸ್ಲೋಗನ್‌ಗಳಿಂದ, ಅಂದರೆ ಘೋಷಣೆಗಳಿಂದ ಜನರ ಬಡತನವನ್ನು ಹೆಚ್ಚಿಸುತ್ತಿದ್ದಾರೆ, ಬಡಜನರ ಸಂಘಟನೆಯನ್ನು ಮುರಿಯುತ್ತಿದ್ದಾರೆ. ಆ ದೃಷ್ಟಿಯಿಂದ ಈ ಸಂಸ್ಥೆಗಳು ಅವರ ಚೈತನ್ಯವನ್ನು ಬೆಳೆಸಬೇಕು, ರಾಜ್ಯಕ್ಕೆ ಅವರು ಶಕ್ತಿಯಾಗಬೇಕು ಎಂದು ಹೇಳುತ್ತಿದ್ದೇನೆ. ಘೋಷಣೆಗಳಿಂದ ಏನೂ ಆಗುವುದಿಲ್ಲ ನಿಜ. ಜನತಂತ್ರವನ್ನು ನಾವು ಒಪ್ಪುತ್ತೇವೆ. ಇದರಲ್ಲಿ ಸಾಧನ ಯಾವುದು ? ಸಾಮಾಜಿಕ, ಆರ್ಥಿಕ ಬದಲಾವಣೆ ತರ

ಬೇಕಾದರೆ ಇರುವ ಸಾಧನವೇ ಜನಜಾಗೃತಿ. ಜನಜಾಗೃತಿಯಾಗಬೇಕಾದರೆ, ಜನತೆಯ ಹತ್ತಿರದ ಸಾಧನ ಆಗಬೇಕು. ಅದರ ಪರಮ ಉದ್ದೇಶವೇ ಜನತಾಂತ್ರಿಕ ವಿಕೇಂದ್ರೀಕರಣದ ಉದ್ದೇಶ. ಆಡಳಿತ ವಿಕೇಂದ್ರೀಕರಣದ ಉದ್ದೇಶ ಮಾತ್ರ ಇದಲ್ಲ. ಆಡಳಿತವನ್ನು ಅನೇಕ ಹಂತಗಳಲ್ಲಿ ವಿಕೇಂದ್ರೀಕರಣ ಗೊಳಿಸಬಹುದು. ಸರ್ಕಾರಿ ಆಡಳಿತದಿಂದ ಅದನ್ನು ಮಾಡಬಹುದು. ಆದರೆ ಇದು ಜನತಾಂತ್ರಿಕ ವಾದ ವಿಕೇಂದ್ರೀಕರಣ ಇದಕ್ಕೆ ಕೆಲವು ಸಿದ್ಧಾಂತಗಳುಂಟು ಕೆಲವು ಸಿದ್ಧಾಂತಗಳನ್ನು ಅಧರಿಸಿ ಇದನ್ನು ಮಾಡಬೇಕಾಗುತ್ತದೆ ಈ ಅಶೋಕ ಮೆಹ್ತ ಸಮಿತಿ ವರದಿಯನ್ನು ಗಂಭೀರವಾಗಿ ಆಧ್ಯಯನ ಮಾಡ ಲಾಗಿದೆ. 1962 ರಲ್ಲಿ ಒಂದು ರೀತಿಯ ಜನತಾಂತ್ರಿಕ ಸುಧಾರಣೆಯನ್ನು ತರಲು ಬಲವೆಂತರಾವ್ ಮೆಹ್ತ ಕಮಿಟಿ ಪ್ರಯತ್ನ ಮಾಡಿದೆ. ಅದನ್ನೇ ಆಧರಿಸಿ ಜನತಾ ಸರ್ಕಾರ ಅಧಿಕಾರದಲ್ಲಿದ್ದಾಗ ಒಂದು ಸಮಿತಿಯನ್ನು ಮಾಡಿದರು. ಆಗ ಅದರ ಉದ್ದೇಶವನ್ನು ನಿರ್ಣಯದ ಮುಖಾಂತರ ಹೇಳಿದ್ದಾರೆ. ಆ ಉದ್ದೇಶವನ್ನು ಆಧರಿಸಿ ಅದರ ಬಗ್ಗೆ ವೈಜ್ಞಾನಿಕ ಅಧ್ಯಯನ ಇಲ್ಲಿ ನಡೆದಿದೆ. ನಾಲ್ಕಾರು ಉದಾ ಹರಣೆಗಳೊಡನೆ ಮಾನ್ಯ ಸಭೆಯ ಗಮನಕ್ಕೆ ತರುತ್ತೇನೆ. 12ನೇ ಡಿಸೆಂಬರ್ 1977 ರಲ್ಲಿ ಕೇಂದ್ರಸರ್ಕಾರ ಈ ನಿರ್ಣಯವನ್ನು ಮಾಡಿತು. I will read resolution for the information of the House. It reads :

"The Government accords the highest priority to rural development, so as to increase agricultural production, create employment eradicate poverty and bring about an all round improvement in the rural economy. The Government considers that the maximum degree of decentralisation, both in planning and in implementation is necessary for the attainment of these objectives. It has accordingly been decided, in consultation with the State Governments and Union Territories, to set up a Committee to inquire into the working of the Panchayati Raj Institutions, and to suggest measures to strengthen them, so as to enable a decentralised system of planning and development to be effective." ಇದು ಆ ಹೊತ್ತಿನ ಉದ್ದೇಶವಾಗಿತ್ತು. ಈ ಅಶೋಕ ಮೆಹ್ತ ಕಮಿಟಿಯಲ್ಲಿ ಅವರೊಬ್ಬರೇ ಇರಲಿಲ್ಲ. ಅನೇಕ ವಿದ್ವಾಂಸರು ಸಮಿತಿಯಲ್ಲಿದ್ದರು ಅವರ ಹೆಸರುಗಳನ್ನು ಸದನದ ಗಮನಕ್ಕೆ ತಂದರೆ ಆಗ ಸಮಿತಿಯ ಮಹತ್ವ ಗೊತ್ತಾಗುತ್ತದೆ. ಅದನ್ನು ನಾನು ಹೇಳುತ್ತೇನೆ. ಅಶೋಕ ಮೆಹ್ತ, ಅಧ್ಯಕ್ಷರು : ಕರ್ಪೂರಿಠಾಕೂರ್, ಬಿಹಾರದ ಮುಖ್ಯಮಂತ್ರಿ ; ಪ್ರಕಾಶ್‌ಸಿಂಗ್ ಭಾದಲ್ ; ಎಂ. ಜಿ. ರಾಮಚಂದ್ರನ್ ; ಶಿವರಾಮನ್, ಯೋಜನಾ ಆಯೋಗದ ಸದಸ್ಯರು ; ಕುನ್ವರ್ ಮಹಮುದ್ ಆಲಿ ಖಾನ್ ; ಎಂ. ಪಿ. ಅಣ್ಣಾಸಾಹೇಬ್ ಪಿ. ಶಿಂಧೆ, ಎಂ.ಪಿ. ಇಂ. ಎಂ. ಎಸ್. ನಂಬೂದ್ರಿಪಾಡ್ ; ಎಸ್. ಕೆ. ಡೇ ; ಸಿದ್ಧರಾಜ್ ಧದ್ದ ; ಇಕ್ಬಾಲ್ ನರೇಯನ್ ; ಯೂನಿವರ್ಸಿಟಿ ಆಫ್ ರಾಜಾಸ್ತಾನ್, ಜಯಪುರ್ ; ವಲ್ಲಭಾಯ್ ಪಟೇಪ್, ಅಧ್ಯಕ್ಷರು, ಜಿಲ್ಲಾ ಪಂಚಾಯಿತ್, ರಾಜ್‌ಪುರ್ ಇವರುಗಳೆಲ್ಲಾ ಸೇರಿ ವರದಿಯನ್ನು ಸಿದ್ಧ ಮಾಡಿದರು. ನಾನು ಎಲ್ಲರೂ ಹೇಳಿದ ಮಾತುಗಳಿಗೆ ಉತ್ತರ ಕೊಡುವ ಬದಲು ಎಲ್ಲರ ಪೂರ್ಣ ವಿಚಾರಧಾರೆಯನ್ನು ಆಧರಿಸಿ ಉತ್ತರ ಹೇಳುತ್ತೇನೆ. ಬಹಳ ಚಿಕ್ಕ ಚಿಕ್ಕ ಗ್ರಾಮಗಳಿಗೆ ಗ್ರಾಮಪಂಚಾಯಿತಿ ಕೊಡಬೇಕೆಂದು ಗಾಂಧೀಜಿಯವರು ಹೇಳಿದರೆಂದು ಮಾನ್ಯ ಸದಸ್ಯರು ಹೇಳಿದರು. ಅದು ನಿಜ. ಗಾಂಧೀಜಿಯವರು ಹೇಳಿದ್ದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಎಂಥ ಗ್ರಾಮಗಳಿಗೆ ಕೊಡಬೇಕೆಂದು ಅವರು ಹೇಳಿದ್ದಾರೆ. ನಾನು ಕಾಲಾವಕಾಶ ಇಲ್ಲದಿರುವುದರಿಂದ ಅದನ್ನು ಓದುವುದಕ್ಕೆ ಹೋಗುವುದಿಲ್ಲ. ಅವರು ಒಂದು ಹಂತದಲ್ಲಿ ಹೇಳುತ್ತಾರೆ, ಇಡೀ ಗ್ರಾಮದ ಆಸ್ತಿ ಗ್ರಾಮದ ಸುತ್ತ ಆಗಬೇಕು ಎಂದು ಅವರ ಕಲ್ಪನೆ ಸಾಮೂಹಿಕ ಜೀವನದ ಕಲ್ಪನೆ. ವ್ಯಕ್ತಿ ಜೀವನ ಅಲ್ಲ. 1962ರಲ್ಲಿ ಈ ಬಗ್ಗೆ ದೇಶ ದಾದ್ಯಂತ ಪ್ರಯೋಗವನ್ನು ಮಾಡಲಾಯಿತು. ಪ್ರತಿಯೊಂದು ಗ್ರಾಮಕ್ಕೂ ಒಂದು ಪಂಚಾಯಿತಿ ಆಗಬೇಕೆಂದು ಏನು ಹೇಳುತ್ತಾರೆ ಅದರಲ್ಲಿ ಅರ್ಥವಿಲ್ಲ. 1959ನೇ ಆಕ್ಟ್ ಪ್ರಕಾರ ಕರ್ನಾಟಕದಲ್ಲಿ

ನಾಲ್ಕು ಗ್ರಾಮಗಳಿಗೆ ಸರಾಸರಿ ಒಂದು ಪಂಚಾಯಿತಿ ಇದೆ. ಅನೇಕ ದೃಷ್ಟಿಯಿಂದ ಸಣ್ಣ ಗ್ರಾಮಗಳಿಗೂ ಪಂಚಾಯಿತಿ ಆಗಿರತಕ್ಕ ವ್ಯವಸ್ಥೆ ಇದೆ. ತಾಲ್ಲೂಕು ಮಟ್ಟದಲ್ಲಿ ಒಂದು ವ್ಯವಸ್ಥೆ ಇತ್ತು. ಅದು ಪ್ರಸಿದ್ಧವಾದ ವ್ಯವಸ್ಥೆ. ಅದರಲ್ಲಿ ಎನ್‌ ಆರ್‌. ಇ. ಓ. ಕೆಲಸ ಮಾಡುತ್ತಿದ್ದವು ಎಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು. ಅಶೋಕ ಮೆಹ್ತ ಕಮಿಟಿಯವರು ಕರ್ನಾಟಕವೂ ಸೇರಿದಂತೆ ಎಲ್ಲಾ ವಿಮರ್ಶೆ ಮಾಡಿದ್ದಾರೆ. ಅವರ ಅಭಿಪ್ರಾಯವನ್ನು ಒಂದೆರಡು ಮಾತಿನಲ್ಲಿ ಹೇಳುತ್ತೇನೆ. 8,236 ಪಂಚಾಯಿತಿಗಳೇನಿದ್ದವು ಅವುಗಳ ಪರಿಸ್ಥಿತಿ ಹೇಗಿತ್ತು ಎಂಬುದು ಎಲ್ಲರಿಗೂ ಗೊತ್ತಿದೆ. ಕಾಯಿದೆಯಲ್ಲಿ ಒಂದು ಲೋಪ ಇತ್ತು. ಇಡೀ ದೇಶದಲ್ಲಿ ಬಲವಂತರಾವ್‌ ಮೆಹ್ತ ಅವರು ಹೇಳಿರ ತಕ್ಕದ್ದು ಮೂರು ಹಂತದ ಆಡಳಿತ ವ್ಯವಸ್ಥೆ. ಇವುಗಳಲ್ಲಿ ಒಂದಕ್ಕೊಂದು ನೇರವಾದ ಸಂಬಂಧ ಇರ ಬೇಕು. ಆದರೆ ದುರಾದೃಷ್ಟವಶಾತ, 1959ರ ಕರ್ನಾಟಕ ಕಾಯಿದೆಯಲ್ಲಿ ಈ ರೀತಿ ವ್ಯವಸ್ಥೆ ಮಾಡಿಲ್ಲ. ಹೈದರಾಬಾದಿನ ರೂರಲ್‌ ಡೆವಲಪ್ಮೆಂಟ್‌ ಇನ್‌ಸ್ಟಿಟ್ಯೂಟಿನ ರಾಮಚಂದ್ರನ್‌ ಅವರು ಪ್ರಸಿದ್ಧ ವಿದ್ವಾಂಸರು. ಅವರು ಇಡೀ ದೇಶದ ವ್ಯವಸ್ಥೆಯನ್ನು ಅಧ್ಯಯನ ಮಾಡಿದ್ದಾರೆ. ಹಾಗೆಯೇ ಅನೇಕ ಪ್ಲಾನಿಂಗ್‌ ಕಮಿಷನ್‌ ವರದಿ ಪ್ರಕಾರ there was absolutely no organic link between Village and the Taluk Board of the District Development Council or the Taluk Board.

5–30 p. m.

ಇದೇ ಒಂದು ಮಹತ್ವದ ಪರಿಣಾಮ ಆಯಿತು. ಹಳ್ಳಿಗಳು ತಮ್ಮ ಕಾಲಮೇಲೆ ನಿಲ್ಲುವುದಕ್ಕೆ ಸಾಧ್ಯ ವಾಗಲಿಲ್ಲ. ತಾವು ಅಪೇಕ್ಷೆ ಪಟ್ಟ ಕಾರ್ಯಗಳನ್ನು ಮಾಡುವುದಕ್ಕಾಗಲಿಲ್ಲ. ಇನ್ನು ಎರಡನೆಯದಾಗಿ ಹಳ್ಳಿಗಳಿಗೆ ಅವರದೇ ಆದ ಆದಾಯ 2 ಸಾವಿರದಿಂದ 5 ಸಾವಿರದವರೆಗೆ ಇರುತ್ತಿತ್ತು. ಈ ಒಂದ, ದೃಷ್ಟಿಯಿಂದ ಅವುಗಳಿಗೆ ಹೆಚ್ಚಿನ ಯಾವ ಸಂಪನ್ಮೂಲಗಳೂ ಇರಲಿಲ್ಲ ಮತ್ತು ಕಾನೂನಿನಲ್ಲಿ ಒಂದು ಲೋಪ ಕೂಡಾ ಇತ್ತು. ಜೊತೆಗೆ ರಾಜಕಾರಣದ ದೃಷ್ಟಿಯಿಂದ ಈ ಒಂದು ಸಂಸ್ಥೆಗಳಲ್ಲಿ ವಿಶ್ವಾಸ ಕೂಡಾ ಇರಲಿಲ್ಲ. ಬಲವಂತರಾಯ್‌ ಕಮಿಟಿಯವರು ಯಾವ ಒಂದು ಅಪೇಕ್ಷೆಯನ್ನು ಪಟ್ಟಿದ್ದರೋ ಆ ರೀತಿ ಇವು ಆಗಲಿಲ್ಲ. ಮೂರು ಹಂತದ ಅಭಿವೃದ್ಧಿ ವ್ಯವಸ್ಥೆ ಬಗ್ಗೆ ಬಲವಂತರಾಯ ಮೆಹತಾ ಅವರು ಹೇಳಿದ್ದರು ಅದೂ ಆಗಲಿಲ್ಲ, ಆಯಾಯ ಸ್ಥಳಕ್ಕೆ ಅನುಗುಣವಾಗಿ ಈ ವ್ಯವಸ್ಥೆಯನ್ನು ಮಾಡ ಬೇಕಾಗುತ್ತದೆ. ಯಾವುದೇ ದೇಶವನ್ನು ತೆಗೆದುಕೊಂಡು ನೋಡಿದರೂ ಅಲ್ಲಿ ಮೂರುಹಂತದ ಚುನಾವಣೆ ಇಲ್ಲ. ಪಶ್ಚಿಮ ಬಂಗಾಳವನ್ನು ಬಿಟ್ಟರೆ ಇನ್ನೆಲ್ಲೂ ಮೂರು ಹಂತದ ವ್ಯವಸ್ಥೆ ಇಲ್ಲ. ರಾಜಾಸ್ಥಾನದಲ್ಲಿ 1 ಹಂತದ, ಮಹಾರಾಷ್ಟ್ರದಲ್ಲಿ 2 ಹಂತದ, ಗುಜರಾತಿನಲ್ಲಿ 2 ಹಂತದ ಚುನಾವಣೆ ಇದೆ. ಮಧ್ಯದ ಹಂತದ ತಾಲ್ಲೂಕು ಸಮಿತಿಗಳಿಗೆ ಎಲ್ಲಾ ಚುನಾವಣೆ ಇಲ್ಲ. ಇದು ಏಕೆ ಇಲ್ಲ ಎಂಬುದನ್ನು ನಾವು ಯೋಜನೆ ಮಾಡಬೇಕಾಗುತ್ತದೆ. ಏಕೆಂದರೆ, ಒಂದು ಆರ್ಗಾನಿಕ್‌ ಲೈನ್‌ ಅನ್ನು ಪಂಚಾಯಿತಿ ಮತ್ತು ಜಿಲ್ಲೆಗೆ ನಿರ್ಮಾಣ ಮಾಡಬೇಕೆಂದು ಈ ಒಂದು ವ್ಯವಸ್ಥೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಆದರೆ ಇನ್ನೊಂದು ದೊಡ್ಡ ತಾಲ್ಲೂಕು ಅಡ್ಮಿನಿಸ್ಟ್ರೇಷನ್‌ ಇಲ್ಲಿ ನಡೆದಿರುವುದು. ಬೇರೆ ಕಡೆ 60 ಸಾವಿರ ಜನರಿಗೆ ಮಾತ್ರ ಪ್ಲಾಟ್‌. 60 ರಿಂದ 70 ಸಾವಿರ ಜನರಿಗೆ ಪ್ಲಾಟ್‌ ನಿರ್ಮಾಣ ಮಾಡಿ ಅಲ್ಲಿಗೆ ಚುನಾಯಿತ ಸಮಿತಿ ಮಾಡಿ, ಅವರ ಕೆಳಗೆ ಗ್ರಾಮೀಣ ಆಡಳಿತ ವ್ಯವಸ್ಥೆಯನ್ನು ಜಾರಿ ಮಾಡಿದ್ದಾರೆಯೇ ಹೊರತು ನಾವು ತಿಳಿದುಕೊಂಡಿರುವ ಹಾಗೆ ಒಂದು ದೇಶದಲ್ಲಿ ಇಡೀ ತಾಲ್ಲೂಕಿನಲ್ಲಿ ಅಂಥ ಲಿಂಕ್‌ ಇತ್ತು ಎಂದು ಇರಲಿಲ್ಲ. ಈ ಸಂಸ್ಥೆಗಳ ಬಗ್ಗೆ ಬಲವಂತರಾಯ್‌ ಮೆಹೆತಾ ಅವರು 3 ರೀತಿ ವಿಚಾರ ಮಾಡಿದ್ದಾರೆ. ಒಂದು ಇವುಗಳ ಉದ್ದೇಶ ಸಾಫಲ್ಯವಾಗದೇ ಹಾಳಾದ ಪರಿಸ್ಥಿತಿ ಎರಡು—ಈ ಸಂಸ್ಥೆಗಳು ಪ್ರವೃದ್ಧ ಮಾನಕ್ಕೆ ಬಂದ ಸ್ಥಿತಿ ಹಾಗೂ ಮೂರು—ಇವುಗಳು ನಿಂತ ನೀರಿ ನಂತೆ ಸ್ಟ್ಯಾಗ್ನೇಟ್‌ ಆಗಿರುವುದು. ಈ ಮೂರೂ ಹಂತದ ಬಗ್ಗೆ ವಿಚಾರ ಮಾಡಿ ಹೇಳುತ್ತಾರೆ. ಇವು ಪ್ರವೃದ್ಧ ಮಾನಕ್ಕೆ ಬರುವ ಸ್ಥಿತಿಯಲ್ಲಿ ರಾಜಕೀಯ ನಿರ್ಣಯ ಇತ್ತು ಇದಕ್ಕೆ ಬೇಕಾದ ಸಂಪನ್ಮೂಲ ಗಳನ್ನು ನಿರ್ಮಾಣ ಮಾಡಿತ್ತು. ಇಡೀ ರಾಷ್ಟ್ರೀಯ ಚಿಂತನೆ ಎಲ್ಲಿ ? ಇಡೀ ರಾಷ್ಟ್ರೀಯ ಯೋಜನೆ ಎಲ್ಲಿ ? ಗ್ರಾಮದ ಅಭಿವೃದ್ಧಿ ಬಗ್ಗೆ ಮಹತ್ವವನ್ನು ಎಲ್ಲಿ ಕೊಡಲಾಗಿತ್ತು ? ಆದರೆ ಮೂರನೆಯ ಯೋಜನೆ ನಂತರ ಆ ಮಹತ್ವ ಕಡಿಮೆ ಆಗುತ್ತಾ ಬಂತು. ಆ ದೃಷ್ಟಿಯಿಂದ ಈ ಗ್ರಾಮಗಳಿಗೆ ಸಲ್ಲತಕ್ಕ ಸಂಪನ್ಮೂಲವಾಗಲೀ, ಒಂದು ತಾಂತ್ರಿಕ ಸಹಾಯವಾಗಲೀ ದೊರೆಯದ ಕಾರಣ ಇವುಗಳು ಇಳಿಮುಖ ವಾದವೆಂಬ ಅಭಿಪ್ರಾಯಪಟ್ಟು ಇವೊತ್ತು ಇಂತಹ ಸಂಸ್ಥೆಗಳು ನಿರ್ಮಾಣವಾಗಬೇಕೆಂದು ಒಂದು ಅಭಿ ಪ್ರಾಯಕ್ಕೆ ಬಂದಿದ್ದಾರೆ. ಅವರು ಹೇಳಿರುವ ಒಂದು ವರದಿ ಪ್ರಕಾರ ಚಿಕ್ಕ ಗ್ರಾಮ ಏಕೆ ಬೇಡ್‌ ಇಂತಹ ಮಂಡಲ್‌ ಪಂಚಾಯಿತಿಗಳು ಏಕೆ ಬೇಕು ಎನ್ನುವ ಬಗ್ಗೆ ಏನು ಅಭಿಪ್ರಾಯ ಇಟ್ಟಿದ್ದಾರೆಂಬು

ದನ್ನು ನಾನು ಸಭೆಯು ಗಮನಕ್ಕೆ ತರುತ್ತೇನೆ. ವೈಜ್ಞಾನಿಕವಾಗಿ ಅವರು ಅಧ್ಯಯನ ಮಾಡಿ ಈ ರೀತಿ ಹೇಳಿದ್ದಾರೆ :—

"This under scores high–level technical support to them and local level organisation. The policies and strategies initiated since 1951 in general and since the availability of the Balvantray Mehta Study Team's report in 1957 in particular have made it possible for us to think of galvanising the socio-economic re-vitalisation of the village communities. The village community has long laid dormant under a stagnant agriculture and decay of the traditional rural industrial and technological skills. The economic stagnation of Indian village is in no small measure responsible for poisoning the quality of their social life by introducing a "zero-sum-game" attitude towards distribution of economic inputs and ouputs as also for the perpetuetion of exploitative relationships of caste and land holding. Ths increasing commercialisation of agriculture, renewed emphasit on rural industrialisation and upgradation of skills, developmen of remunerative non-farm enterprises like fisheries, piggeries, poultries and, above all, milk farming, electrification and energisation of dug-wells and tube–wells and considerable enhancement of minor irrigation facilities are some of the developments detailed earlier, which, in our opinion, would make it possible for us to view the development prospects of rural India in a new light. The new structures that we may design for rural development administration or local–level development management have to take into account the functional necessity of propelling the ongoing train of development. They should be able to build upon the mometum at appropiate leves, and transmit the impulses to the farmer throgh action suited for the area."

ಈ ಒಂದು ದೃಷ್ಟಿಯಿಂದಲೇ ಅವರು ಈ ಒಂದು ಗ್ರಾಮವು....

ಶ್ರೀ ಕೆ.ಹೆಚ್. ರಂಗನಾಥ್.—ಏನು ಸ್ವಾಮಿ ಬರೆಯುವುದು ? ಪ್ರೋಗ್ರಾಮ್ ಬೇಕು ಎಂದು ಹೇಳುತ್ತೇವೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಪ್ರೋಗ್ರಾಮನ್ನೇ ನಾನು ಹೇಳುತ್ತೇನೆ. ನನಗೆ ನೀವು ಹೇಳುವುದು ಅರ್ಥವಾಗುವುದಿಲ್ಲ. ಪ್ರೋಗ್ರಾಮ್ ಎಂದು ಅಂದರೆ -ಎ-ಬಿ-ಸಿ-ಡಿ- ಎಂದು ಅಥವಾ ರಾಮ ಗೋವಿಂದ–ನಾರಾಯಣ ಎಲ್ಲಾ ಸೇರಿ ಈ ರೀತಿ ಮಾಡಿದರು. ಎಂದು ಹೇಳಿದರೆ ಅದು ಪ್ರೋಗ್ರಾಮ್ ಆಗುವುದಿಲ್ಲ. ಇದನ್ನು ಹೇಳಬೇಕಾದರೆ ಬೇರೆ ರೀತಿ ಹೇಳಬೇಕಾಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್.—ಪ್ರೋಗ್ರಾಮ್ ಇಲ್ಲದೇ ಹೇಗೆ ಆಗುತ್ತದೆ ? ಹೀಗೆ ಹೇಳಿದರೆ ಬೆಳಿಗ್ಗೆ ಎಂದ್ದು ಸಂಧ್ಯಾವಂದನೆ ಮಾಡುವಾಗ ಮಂತ್ರ ಹೇಳಿದಹಾಗೆ ಆಗುತ್ತದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಡೆವಲಪ್‌ಮೆಂಟ್ ಎಂದರೆ "ongoiug train of developmeut" ಎದು ಹೇಳಲಾಗಿದೆ;

ಶ್ರೀ ಕೆ.ಹೆಚ್. ರಂಗನಾಥ್.—ನಿಮ್ಮ ಪ್ಲಾನ್‌ನಲ್ಲಿ what should be the course of the planning ? ಇಂತಹ ದೊಡ್ಡ ದೇಶದಲ್ಲಿ ಬರೀ ಬೆಣ್ಣೆ ಮಾಡುತ್ತೇವೆ, ಹಾಲು ಕರೆಯುತ್ತೇವೆ ಎಂದರೆ ಹೇಗೆ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಮುಂದೆ ನಡೆಯುತಕ್ಕ ಅಭಿವೃದ್ಧಿ-ಶೀಲ ವ್ಯವಸ್ಥೆಗೆ ಎಂತಹ ಒಂದು ಆಡಳಿತ ವ್ಯವಸ್ಥೆ ಇರಬೇಕು, ನೌಕರಶಾಹೀ ಡವಲಪ್‌ಮೆಂಟಲ್ ಅಡ್ಮಿನಿಸ್ಟ್ರೇಷನ್ ಬೇಕೇ ಅಥವಾ

ಜನತಾಂತ್ರಿಕವಾದ ಅಭಿವೃದ್ಧಿಶೀಲ ವ್ಯವಸ್ಥೆ ಬೇಕೇ ಎನ್ನುವುದರ ಬಗ್ಗೆ ಅನೇಕ ಪರಿಣಿತರುಗಳ ಅಭಿಪ್ರಾಯಗಳು ಇವೆ, ಅನೇಕ ಗ್ರಂಥಗಳು ಇವೆ. ಇದರ ಬಗ್ಗೆ ಅನೇಕ ರೀತಿಯ ಅಧ್ಯಯನಗಳನ್ನು ಮಾಡಿದ್ದಾರೆ. ನಮ್ಮ ದೇಶದಲ್ಲಿ ಬಡವರು ಪಾಲ್ಗೊಳ್ಳಬೇಕಾದ ಟಾರ್ಜೆಟ್ ಗ್ರೂಪ್ ಪ್ರೋಗ್ರಾಮ್‌ನಲ್ಲಿ ಅವರು ಪಾಲ್ಗೊಳ್ಳದೇ, ಈ ಒಂದು ಸಂಸ್ಥೆಗಳು ಇವನ್ನೆಲ್ಲಾ ದುರುಪಯೋಗ ಮಾಡಿಕೊಂಡುದರಿಂದ ಈ ರೀತಿಯ ಒಂದು ವ್ಯವಸ್ಥೆ ಆಗಬೇಕೆಂದು ಮಾಡಿದರು. ಇದರಲ್ಲಿ ಮೊದಲನೆಯ ಹಂತದಲ್ಲಿ, ಒಂದು ರಾಜ್ಯ ಸರ್ಕಾರ ತನ್ನ ಕೈಯಲ್ಲಿ ಇರತಕ್ಕ ಅಧಿಕಾರವನ್ನು ಇವರಿಗೆ ಕೊಟ್ಟು ಅಧಿಕಾರ ವಿಕೇಂದ್ರೀಕರಣ ಮಾಡತಕ್ಕದ್ದು, ಅಧಿಕಾರ ವಿಕೇಂದ್ರೀಕರಣ ಆಗಲಿಲ್ಲ. ನಾನು ಈ ಬಗ್ಗೆ ಮೊದಲೇ ಹೇಳಿದ್ದೇನೆ. ಇವೊತ್ತು ಅಲ್ಲಿ ಅಭಿವೃದ್ಧಿ ಆಗಬೇಕಾಗಿದೆ. ಒಂದು ಜಿಲ್ಲೆ, ಆಡಳಿತ ವ್ಯವಸ್ಥೆ ಇರತಕ್ಕ ಒಂದು ಜಿಲ್ಲೆ–ಎಲ್ಲಾ ತಾಂತ್ರಿಕ ಸೌಕರ್ಯ ದೊರೆಯುತಕ್ಕ ಒಂದು ಜಿಲ್ಲೆ–ಇವೊತ್ತೂ ಕೂಡಾ ನಾವು ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ಹಾಕಿರತಕ್ಕಂತಹ ವ್ಯವಸ್ಥೆಯನ್ನು ನಿಭಾಯಿಸತಕ್ಕ ವ್ಯವಸ್ಥೆ ಇರತಕ್ಕ ಜಿಲ್ಲೆ–ಈ ಹಂತದಲ್ಲಿ ಮೊದಲನೆಯ ಹಂತ ಆಗಬೇಕೆಂದು ಇದೆ. ಈ ಹಂತ ಮೊದಲನೆಯದಾಗಬೇಕು. ರಾಜ್ಯದಲ್ಲಿನ ಎಲ್ಲಾ ಅಭಿವೃದ್ಧಿಗೂ ಇದು ಮೊದಲ ಹಂತ ಆಗಬೇಕು. ಏಕೆಂದರೆ ಈಗಾಗಲೇ ನಮಗೆ ಅನುಭವ ಇದೆ. ಆ ಬಗ್ಗೆ ಬೇಕಾದ ಎಲ್ಲಾ ಅಧಿಕಾರಿಗಳ ಒಂದು ತಂಡ ದೊರೆಯುತ್ತದೆ. ಹಾಗೂ ತಾಂತ್ರಿಕ ಸಹಾಯ ದೊರೆಯುತ್ತದೆ. ಈ ಹಂತದಲ್ಲಿ ಮೊದಲ ವಿಕೇಂದ್ರೀಕರಣ, ಸರ್ಕಾರದ ಅಭಿವೃದ್ಧಿಶೀಲ ವಿಕೇಂದ್ರೀಕರಣ ಮೊದಲ ಹಂತವಾಗಿ ಜಿಲ್ಲೆಯಲ್ಲಿ ಆಗಬೇಕು. ಇನ್ನು 2ನೆಯ ಹಂತದ ಬಗ್ಗೆ ಹೇಳಬೇಕೆಂದರೆ ಈಗಾಗಲೇ ನಮ್ಮ ದೇಶದಲ್ಲಿ ಪ್ರಾಯೋಗಿಕವಾಗಿ ಬ್ಲಾಕ್ ಅನ್ನು ಒಂದು ಯೂನಿಟ್ ಮಾಡಿದ್ದಾರೆ. ನಮ್ಮ ತಾಲ್ಲೂಕುಗಳನ್ನು ತೆಗೆದುಕೊಂಡು ವಿಚಾರ ಮಾಡುವುದಲ್ಲ. ಒಂದು ಬ್ಲಾಕ್‌ನಲ್ಲಿ 60 ರಿಂದ 70 ಸಾವಿರ ಜನಸಂಖ್ಯೆಗೆ ಮತ್ತೊಂದು ಹಂತವನ್ನು ಸೃಷ್ಟಿಮಾಡಿ ಈ ಒಂದು ಯೋಜನೆಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು. ಈ ಒಂದು ಬ್ಲಾಕ್‌ನಲ್ಲೂ ಕೂಡಾ ನಮ್ಮ ಪ್ರಗತಿಯ ಚಿತ್ರಣದಲ್ಲಿ ಬದಲಾವಣೆಯಾಗುವುದರಿಂದ ಬ್ಲಾಕ್ ಕೂಡಾ ದೊಡ್ಡದಾಗುತ್ತದೆ. ಆದುದರಿಂದ ನೇರವಾಗಿ ಅಧಿಕಾರವನ್ನು ಕೊಡಬೇಕಾದರೆ ಒಂದು ಮಂಡಲ. 15 ರಿಂದ 20 ಸಾವಿರ ಜನಸಂಖ್ಯೆ ಉಳ್ಳ ಒಂದು ಮಂಡಲ. ಆ ಒಂದು ಮಂಡಲಕ್ಕೆ ಆ ಒಂದು ಅಧಿಕಾರವನ್ನು ಕೊಡಬೇಕು. ಆ ಒಂದು ಮಂಡಲದೊಳಗೆ ಬರತಕ್ಕ ಎಲ್ಲಾ ಯೋಜನೆಗಳು, ಅಭಿವೃದ್ಧಿಯನ್ನು ಮಂಡಲ ಉಸ್ತುವಾರಿ ಮಾಡಬೇಕು ಎನ್ನುವ ಉದ್ದೇಶವನ್ನು ಹೇಳಿದ್ದೇವೆ. ಆ ಒಂದು ಆದರ್ಶದಿಂದ ಇಡೀ ಶಾಸನವನ್ನು ನಾವು ಮಾಡಿದ್ದೇವೆ. ನನ್ನ ಅರ್ಥದಲ್ಲಿ ಹೇಳಬೇಕೆಂದರೆ, ಇದರ ಬಗ್ಗೆ ವಿಚಾರ ಮಾಡಿದ್ದೇವೆ. ಮಾನ್ಯ ಜವಹಾರಲಾಲ್‌ನೆಹರೂರವರು, ನಾವು ಒಂದು ಕೆಲಸ ಮಾಡುವುದರಲ್ಲಿ ಸೋಲಬಹುದು ಅಥವಾ ಗೆಲ್ಲಬಹುದು; ಆದರೆ ಕೆಲಸ ಮಾಡಬೇಕು ಎಂದು ಹೇಳಿದ್ದಾರೆ. ಒಂದು ಯೋಜನೆಯನ್ನು ತಂದಾಗ ನಾಲ್ಕು ಕಡೆ ದುರುಪಯೋಗಗಳಾಗಬಹುದು. ನಾನು ಇಲ್ಲ ಎಂದು ಹೇಳುವುದಿಲ್ಲ. ಈ ಒಂದು ಸಂಶಯ ನಮ್ಮ ಮನಸ್ಸಿನಲ್ಲಿದೆ. ಆದರೆ ಈ ದೇಶದಲ್ಲಿ ನಡೆಯುತಕ್ಕ ವ್ಯವಸ್ಥೆಯಲ್ಲಿ ಇದರ ಒಂದು ಮೂಲಭೂತವಾದ ಉದ್ದೇಶವನ್ನು ಅರ್ಥ ಮಾಡಿಕೊಳ್ಳಬೇಕೆಂಬುದು ನನ್ನ ಉದ್ದೇಶ. ಇನ್ನೊಂದು ಮಾತನ್ನು ಹೇಳಿದ್ದಾರೆ. ಎರಡುನೂರಕ್ಕೂ ಹೆಚ್ಚು ಮಂಡಲಗಳನ್ನು ನಿರ್ಮಾಣ ಮಾಡಿದಾಗ, ಕರ್ನಾಟಕದ ಪರಿಸ್ಥಿತಿಯನ್ನಾಧರಿಸಿ, ಕರ್ನಾಟಕದಲ್ಲಿರತಕ್ಕಂಥ ಪಂಚಾಯಿತಿಗಳನ್ನು ನಾಲ್ಕು ಗ್ರಾಮಗಳಿಗೆ ಒಂದು. ಇವೊತ್ತು ಸರಾಸರಿ ನನ್ನ ಲೆಕ್ಕದ ಪ್ರಕಾರ 7 ರಿಂದ 9 ಗ್ರಾಮಗಳು ಈ ಮಂಡಲಕ್ಕೆ ಸೇರುತ್ತವೆ. ಯಾವುದೇ ಒಂದು ಚದುರ ಮೈಲಿ ಪ್ರಕಾರ ಲೆಕ್ಕ ಹಾಕಿಲ್ಲ. ಅಂಕಿ ಅಂಶಗಳನ್ನು ಇಟ್ಟುಕೊಂಡಿದ್ದೇವೆ. 8296 ಪಂಚಾಯಿತಿಗಳು ಹೋಗಿ, 121 ಟೌನ್ ಪಂಚಾಯಿತಿಗಳು ಹೋಗಿ, ಒಟ್ಟು 3055 ಪಂಚಾಯಿತಿಗಳು ಆಗುತ್ತವೆ, 2 ಕೋಟಿ 69 ಲಕ್ಷ ನಮ್ಮ ಗ್ರಾಮೀಣ ಜನಸಂಖ್ಯೆ ಏನಿದೆ ಅದನ್ನು ಆಧರಿಸಿ, ಈ ಸಂಸ್ಥೆಗಳು ಆಗುತ್ತವೆ. 3055 ಸಂಸ್ಥೆಗಳನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯ ಈ ವ್ಯವಸ್ಥೆಯಲ್ಲಿ. ಮಧ್ಯದ ಹಂತಗಳೆಲ್ಲಾ ಹೋಗುತ್ತವೆ. ಹಾಗಾದರೆ ಈ ಹಂತದಲ್ಲಿ ಏನು ಮಾಡುವುದಕ್ಕೆ ಸಾಧ್ಯ ಎಂಬುದು ನಿಮ್ಮ ವಿಚಾರ, ಏನು ಮಾಡಲು ತಂದಿದ್ದೀರಿ, ಇದೊಂದೇ ಸಾಕು ಎನ್ನಬಹುದು. ಆದರೆ ಮೂರನೇ ಹಂತ ಯಾವುದು ? ಇದು ಬಹಳ ಪ್ರಮುಖವಾದ ಹಂತ. ಅದು ಗ್ರಾಮಸಭೆಗಳು. ಗ್ರಾಮಸಭೆಗಳಿಗೆ ಅಧಿಕಾರ ಕೊಟ್ಟಿಲ್ಲ. ಅದರಿಂದ ವಿಕೇಂದ್ರೀಕರಣ ಆಗಿಲ್ಲ ಎಂದು ಹೇಳಬಹುದು. ಗ್ರಾಮ ಸಭೆಗಳಿಗೆ ಅಧಿಕಾರ ಕೊಟ್ಟಿಲ್ಲ, ನಿಜ ಆದರೆ ಮೊದಲಬಾರಿಗೆ ಗ್ರಾಮ ಸಭೆಗಳ ಮುಖಾಂತರ ಜನರ ರಾಜಕೀಯ, ಆರ್ಥಿಕ ಮತ್ತು ಸಮಾಜಿಕ ಚೈತನ್ಯವನ್ನು ಜಾಗೃತಿಗೊಳಿಸುವ ಸಾಧನವಾಗಬಹುದು ಎಂದು ಭಾವಿಸುತ್ತೇನೆ, ಹೀಗೆ ಮೊದಲಬಾರಿಗೆ ಚುನಾಯಿತವಾದ ಮಂಡಲಿಗೆ, ಚುನಾವಣೆ ಆದಂಥ ಗ್ರಾಮ ಸಭೆಗೆ, ಅಧಿಕಾರ ಸಂವಿಧಾನಾತ್ಮಕ ವರದಿಯನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. On the report made by the Mandal Panchayat, Gram Sabha is Called to discuss. ಇವತ್ತು ಮೊದಲ

ದಾರಿಗೆ ಚುನಾಯಿತನಾದಂಥ ಒಬ್ಬ ವ್ಯಕ್ತಿ, ಆಡಳಿತದಲ್ಲಿರತಕ್ಕಂಥ ಮಂಡಳಿಯಲ್ಲಿರತಕ್ಕಂಥ ಅಧಿಕಾರಿ, ಗಾಮ ಸಭೆಯ ಮುಂದೆ ನಿಂತು ಸಾಕ್ಷಿಯನ್ನು ಕೊಡಬೇಕು ತನ್ನ ಕಾರ್ಯವನ್ನು ಸಮರ್ಥಿಸಿಕೊಳ್ಳಬೇಕಾದ ಪರಿಸ್ಥಿತಿಯನ್ನು ನಾವು ಮಾಡಿದ್ದೇವೆ. ಬಹುಶಹ ರಾಜಕೀಯ, ಸಾಮಾಜಿಕ ಶಾಸ್ತ್ರದಲ್ಲಿ ಪ್ರಥಮ ಸಲುಇದಕ್ಕಿಂತ ಜನಜಾಗೃತಿಯನ್ನು ಪ್ರಚೋದನೆಗೊಳಿಸತಕ್ಕಂಥ ಸಾಧನವನ್ನು ಒಂದು ಒತ್ತನ್ನು ಇದರ ಮುಖಾಂತರ ತರಲು ನಾವು ಪ್ರಯತ್ನಿಸಿದ್ದೇವೆ. ಈ ದೃಷ್ಟಿಯಿಂದ ಇದನ್ನು ನೋಡಬೇಕು. ಉದ್ದೇಶ ಪೂರ್ವಕವಾಗಿ ನಾವು ಅಧಿಕಾರವನ್ನು ಕೊಟ್ಟಿಲ್ಲ. ನಮ್ಮ ಉದ್ದೇಶವಾದರೂ ಈ ಗ್ರಾಮಸಭೆಗಳು ಪ್ರಾಯೋಗಿಕವಾಗಿ ಕೆಲಸ ಮಾಡಿದಾಗ, ಇದಕ್ಕಾಗಿ ಮುಂದಿನ ಹಂತದಲ್ಲಿ ಒಂದು ಗ್ರಾಮ ಸಮಿತಿಗಳನ್ನು ಚುನಾವಣೆ ಮಾಡಬೇಕು ಎಂಬುದು ನಮ್ಮ ಯೋಜನೆ. ಆದರೆ ಈ ಹೊತ್ತು ಇಷ್ಟಕ್ಕೇ ನಾವು ಗ್ರಾಮ ಸಭೆಯನ್ನು ಸೀಮಿತ ಮಾಡಿರುವುದು, ಪ್ರತಿಯೊಂದು ಗ್ರಾಮದಲ್ಲಿ, ಪ್ರತಿಯೊಬ್ಬ ಚುನಾಯಿತ ಪ್ರತಿನಿಧಿ ಪ್ರತಿಯೊಬ್ಬ ಮತದಾರ ಕೂಡಾ ಈ ಸಭೆಯಲ್ಲಿ ಭಾಗವಹಿಸಬಹುದು. ಕೆಲವು ಕಡೆ ಭಾಗವಹಿಸುವುದಿಲ್ಲ ಎಂದು ಹೇಳಬಹುದು. ಇವೊತ್ತು ನಮ್ಮಲ್ಲಿ ಒಂದು ಅಧ್ಯಯನ ನಡೆದಿದೆ. ಮಂಡ್ಯ ಜಿಲ್ಲೆ ಮಳವಳ್ಳಿಯಲ್ಲಿ, ಗುಲ್‌ಬರ್ಗಾ ಜಿಲ್ಲೆ ಪಟ್ಟಣದಲ್ಲಿ ನಡೆದಿದೆ. ಪ್ರಸಿದ್ಧ ವಿದ್ವಾಂಸರು ಅಧ್ಯಯನ ಮಾಡಿದ್ದಾರೆ. ಆ ಅಧ್ಯಯನದ ಪ್ರಕಾರ ರಾಷ್ಟ್ರದಲ್ಲಿ ಗ್ರಾಮ ಪಂಚಾಯಿತಿಗಳು ಇವೆಯಲ್ಲ. ಅದರಲ್ಲಿ 100ಕ್ಕೆ 70ರಷ್ಟು ಕೋರಮ್ ಇಲ್ಲದಿದ್ದರೂ ಮೀಟಿಂಗ್‌ಗಳು ನಡೆದಿವೆ ಎಂದು ಅವರು ಸರ್ವೆ ಮಾಡಿದ್ದಾರೆ. 100 ಕ್ಕೆ 90 ರಷ್ಟು ಪಂಚಾಯಿತಿಗಳಲ್ಲಿ ಮೀಟಿಂಗ್‌ಗಳೇ ಆಗಿಲ್ಲ. ಅವರ ಅಭಿಪ್ರಾಯ ಸಂಗ್ರಹಣೆ ಪ್ರಕಾರ ಯಾವುದೇ ರೀತಿಯ ಒಂದು ಪ್ರಚೋದನೆಯೇ ಇಲ್ಲ. ಮಾನ್ಯ ರಂಗನಾಥ್ ಅವರು ಹೇಳಿದರು ಯಾವುದಾದರೂ ಒಂದು ಮೋಟಿವೇಷನ್ ಆರ್ಥಿಕ ದೃಷ್ಟಿಯಿಂದ ಬರುತ್ತದೆ ಎಂದು ಹೇಳಿದರು. ಆರ್ಥಿಕ ಸೌಲಭ್ಯಗಳು ದೊರಕುವ ದೃಷ್ಟಿಯಿಂದ ಬರುತ್ತದೆ ಎಂದು. ಆದರೆ ಇದುವರೆಗೆ ಇವು ಯಾವುದೇ ಆರ್ಥಿಕ ಕಾರ್ಯಾಚರಣೆಯಲ್ಲಿ ಭಾಗವಹಿಸುವ ಕಾನೂನು ಇರಲಿಲ್ಲ. ಇಂತಹ ಮೋಟಿವೇಷನ್ ಕ್ರಿಯೇಷನ್ ಮಾಡುವಂತ ಸಂಸ್ಥೆಗಳೂ ಆಗಿರಲಿಲ್ಲ. ಈ ದೃಷ್ಟಿಯಿಂದ ಜನತಂತ್ರದಲ್ಲಿ ಅವು ನಿಜವಾದ ಉದ್ದೇಶ ಸಾಧನೆ ಮಾಡಲಿಲ್ಲ. ಈ ಮಹಾನ್ ಉದ್ದೇಶದಿಂದ ಅಭಿವೃದ್ಧಿಯ ಎಲ್ಲ ಅಂಗಗಳನ್ನೂ ಇವತ್ತು ಪ್ರಚೋದನೆ ಮಾಡಲು ಪ್ರಾರಂಭ ಮಾಡುತ್ತಿದ್ದೇವೆ ಎಂಬ ಸದುದ್ದೇಶವನ್ನು ಅರ್ಥ ಮಾಡಿಕೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಕೊನೆಯದಾಗಿ ನ್ಯಾಯ ಪಂಚಾಯತ್‌ಗಳ ಬಗ್ಗೆ ಬಹಳ ಮಟ್ಟಿಗೆ ಅನೇಕರಲ್ಲಿ ಸಂಶಯ ಇದೆ. ನನಗೆ ಇದು ಅರ್ಥವಾಗಲಿಲ್ಲ. ನಾವು ಕಾಲಮ್‌ಗಳನ್ನು ಓದಿದರೂ ಕೂಡಾ. ಯಾವ ಯಾವ ಅಧಿಕಾರವನ್ನು ಕೊಟ್ಟಿದ್ದೇವೆ ಎಂಬುದನ್ನು ಗಂಭೀರವಾಗಿ ವಿಮರ್ಶೆ ಮಾಡಿದರೂ ಕೂಡಾ, ಇದು ಹೇಗೆ ದಲಿತನ ವಿರುದ್ಧ ಆಗುತ್ತದೆ ಎಂಬುದು ನನ್ನ ಸಂಶಯ. ಈ ಬಗ್ಗೆ ಒಂದೆರಡು ಉದಾಹರಣೆಗಳನ್ನು ಹೇಳಬೇಕಾಗಿದೆ. ಇಂತಹ ವ್ಯವಸ್ಥೆ ಇವತ್ತೂ ಎಲ್ಲಾ ಕಡೆ ನಡೆದಿದೆ. ನಡೆಯುವುದಿಲ್ಲ ಎಂದು ಅಲ್ಲ, ಅನೇಕ ಕಡೆಗಳಲ್ಲಿ ಈ ವ್ಯವಸ್ಥೆ ನಡೆದಿದೆ. ಪಟ್ಟಭದ್ರಹಿತಗಳೇ ಇದನ್ನು ಮುಗಿಸಿದ್ದುದ್ದು. ಕೇಂದ್ರ ಸರಕಾರ 1962ರಲ್ಲಿ ಶ್ರೀ ಎ. ಕೆ. ಸೇನ್ ಅವರು, ಕಾನೂನು ಮಂತ್ರಿಗಳಾಗಿದ್ದಾಗ, ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದಾಗ, ಇಡೀ ದೇಶದ ಮಾಹಿತಿಯನ್ನು ಅವರು ಸಂಗ್ರಹ ಮಾಡಿದ್ದಾರೆ. ದೇಶಾದ್ಯಂತ ಅನೇಕ ವಿದ್ವಾಂಸರನ್ನು, ಸಾಧಾರಣ ಜನರನ್ನೂ ಅವರು ಭೇಟಿಯಾಗಿದ್ದಾರೆ. ಆ ಅಭಿಪ್ರಾಯವನ್ನು ತಮ್ಮ ಮುಖಾಂತರ ಮಾನ್ಯ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ.

> "The Government observe that the statistics bear testimo my to the growing popularity of the village courts. The Government are glad to note that an increasingly large number of citizems are taking recourse to the cheap and summary methods of settling petty diputes in civil and criminal cases. The Government trust that these village tribunals will unltimately help to minimise litigation and in general improve the social atmosphere of the villages".

This is the observation made in the Madras Administration Report for the year 1956, given in the Report of the Study Team on Nyaya Panchayats.

ಇದು ಆದಮೇಲೆ ಯಾವುದನ್ನು ಕುರಿತು ಹೇಳುತ್ತೇನೆ ಎಂದರೆ, ಮದ್ರಾಸಿನಲ್ಲಿ 1959 ರಲ್ಲಿದ್ದಂತ ಬೆಂಚ್ ಕೋರ್ಟ್ಸ್, ಬಿಹಾರದಲ್ಲಿದ್ದಂಥ ಸರಕಾರಿ 'ಗಾಂವ್ ಕಚೇರಿಯಾ ಮತ್ತು ಉತ್ತರ ಪ್ರದೇಶ

ದಲ್ಲಿದ್ದಂಥ ಅದಾಲತ್.ಎ. ಪಂಚಾಯತ್‌ಗಳ ಬಗ್ಗೆ ಹೇಳುತ್ತೇನೆ. 9 ಲಕ್ಷ ಸಣ್ಣ ಪುಟ್ಟ ಕೇಸುಗಳನ್ನು ಈ ಅದಾಲತ್.ಎ. ಪಂಚಾಯತ್‌ಗಳು ಮುಗಿಸಿದ್ದವು. ಅದರಲ್ಲಿ ಮೇಲುಗಡೆಗೆ ಅಪೀಲ್ ಹೋದದ್ದು ಕೇವಲ 2 ಪರ್ಸೆಂಟ್ ಮಾತ್ರ. ಸಾಧಾರಣ ಜನರನ್ನು ಅವರು ಭೇಟಿ ಮಾಡಿ ಕೇಳಿದಾಗ, ಅವರೆಲ್ಲರ ಅಭಿಪ್ರಾಯದ ಪ್ರಕಾರ ಇಂತಹ ಒಂದು ನ್ಯಾಯ ವ್ಯವಸ್ಥೆ ನಮಗೆ ಬೇಕು ಎಂದು ಹೇಳಿದ್ದಾರೆ. ನಾವು ಇವೊತ್ತು ತಂದಿರತಕ್ಕಂಥ ನ್ಯಾಯ ಪಂಚಾಯಗಳ ಕಾಲಮ್‌ಗಳು ಏನು ? ಹಳ್ಳಿಯಲ್ಲಿ ಒಂದು ಸಾವಿರ, ಎರಡು ಸಾವಿರ ರೂಪಾಯಿಗಳನ್ನು ಒಳಗೊಂಡ ಒಂದು ಸೂಟ್ ಬಗ್ಗೆ ತೀರ್ಮಾನ ಮಾಡತಕ್ಕದ್ದು, ಹಳ್ಳಿಯಲ್ಲಿ ಸಾಲ ತೆಗೆದುಕೊಳ್ಳುವವನು ಬಡವನೋ, ಬಲ್ಲಿದನೋ ಎಂಬುದನ್ನು ತಿರ್ಮಾನ ಮಾಡಬೇಕು. ಹಳ್ಳಿಯಲ್ಲಿ ಸಾಲ ತೆಗೆದುಕೊಳ್ಳುವವನು ಬಡವನಾಗಿರುತ್ತಾನೆ. ಅವನು ವಕೀಲರ ಮುಖಾಂತರ ಹೋಗಿ ತೀರ್ಮಾನ ಮಾಡಿಕೊಳ್ಳುವುದಕ್ಕೆ ಬದಲಾಗಿ, ಅವನ ಊರಿನಲ್ಲಿಯೇ, ಒಂದೇ ರೂಪಾಯಿನಲ್ಲಿ ತೀರ್ಮಾನ ಮಾಡಿಕೊಳ್ಳುವ ವ್ಯವಸ್ಥೆ ಮಾಡಿದ್ದೇವೆ. ಆತನಿಗೆ ಅನೇಕ ಲೀಗಲ್ ಟೆಕ್ನಿಕಲ್ ಜಾರ್ಗಾನ್‌ಗಳನ್ನು ನೋಡಲು ಸಾಧ್ಯವಿಲ್ಲ. ಮುಗ್ಧವಾದ ಜನ, ಮುಗ್ಧವಾದ ಸಮುದಾಯಗಳಲ್ಲಿ ಇರುವವರು ಈರೀತಿಯ ನ್ಯಾಯವನ್ನು ಪಡೆಯತಕ್ಕ ವ್ಯವಸ್ಥೆ ಮಾಡಬೇಕು. ಒಂದು ಸಮುದಾಯ ಇದೆ, ಆ ಊರಿನ ಪ್ರಭಲರು ತಮ್ಮ ಅಧಿಕಾರದಿಂದ ಹಣಕಾಸಿನ ಬಲ ಉಪಯೋಗಿಸಿಕೊಂಡು, ಅನೇಕ ಜಾತಿಗಳಿರತಕ್ಕಂಥ ಸಮಾಜದಲ್ಲಿ, ಶ್ರೀಮಂತರು ದಲಿತವರ್ಗದ ಮೇಲೆ ಪ್ರಹಾರ ಮಾಡಬಹುದು. ಆದರೆ ಈ ಕಾನೂನಿನಿಂದ ಅದಕ್ಕೆ ಎಡೆಯಿಲ್ಲ. ಒಂದೇಒಂದು ಅಭಿಪ್ರಾಯ ಮತ್ತು ಒಂದು ಸಾಮಾಜಿಕ ಪ್ರಕ್ರಿಯೆಯನ್ನು ನೋಡೋಣ. ಇವತ್ತು ಕೂಡಾ ನಮ್ಮಲ್ಲಿ ಆಸ್ಪೃಶ್ಯತೆ ಇದೆ. ಈ ದೇಶದಲ್ಲಿ ಒಂದು ಜಾಡ್ಯವಾಗಿ ಆದು ಕುಳಿತಿದೆ.

ಯಾವುದೋ ಗ್ರಾಮದಲ್ಲಿ ಪಂಚಾಯತಿಗಳು ನಡೆದರೆ, ಅಲ್ಲಿ ಆ ಅಸ್ಪೃಶ್ಯ, ದಲಿತ ಎಲ್ಲೋ ಒಂದು ಕಡೆ ನಿಂತು ನ್ಯಾಯವನ್ನು ಪಡೆಯಬೇಕಾಗಿದೆ. ಕಾನೂನು ಇರಲಿ ಇಲ್ಲದಿರಲಿ ಈ ವ್ಯವಸ್ಥೆ ಇದೆ. ನಾವು ಮೊಟ್ಟಮೊದಲ ಬಾರಿಗೆ ದಲಿತ ನ್ಯಾಯಾಧೀಶನ ಸ್ಥಾನದಲ್ಲಿ ಕುಳಿತು, ನ್ಯಾಯವನ್ನು ಕೊಡತಕ್ಕ ಸ್ಥಾನವನ್ನು ನಾವು ಕೊಟ್ಟಿದ್ದೇವೆ. ಈ ಒಂದು ವ್ಯವಸ್ಥೆಯಿಂದ ಇವೊತ್ತು ಸಮಾಜದ ಮೇಲಾಗತಕ್ಕಂಥ ಗ್ರಾಮದ ಮೇಲಾಗ ತಕ್ಕ ಪರಿಣಾಮದ ಬಗ್ಗೆ ನಮ್ಮ ಮಿತ್ರರು ಚಿಂತನೆ ಮಾಡಬೇಕಾಗಿತ್ತು. ಇನ್ನು ಮುಂದೆ ಒಂದು ಸಂಶಯವನ್ನು ವ್ಯಕ್ತಮಾಡಿದ್ದಾರೆ. ಈ ಬಗ್ಗೆ ನಾನು ನೇರವಾಗಿ ಉತ್ತರ ಕೊಟ್ಟಿದ್ದೆ. ಕೆಲವು ನನ್ನಲ್ಲಿ ಇರತಕ್ಕ ಮಾಹಿತಿಗಳನ್ನು ಕೊಡುತ್ತೇನೆ. ತೆರಿಗೆಗಳ ಬಗ್ಗೆ ಮಾತನಾಡಿದ್ದಾರೆ. ಏನೂ ತೆರಿಗೆ ಹಾಕಿಲ್ಲ. ಸಂಪನ್ಮೂಲಗಳನ್ನು ಮಾಡತಕ್ಕ ಅಧಿಕಾರಗಳನ್ನು ಕೊಟ್ಟಿಲ್ಲ ಎಂದು ಮಾನ್ಯ ಮೊಯಿಲಿಯವರೂ ಹೇಳಿದ್ದಾರೆ. ಈಗಾಗಲೇ ತೆರಿಗೆ ಹಾಕಿರುವ ಭಾರ ಸಾಕು. ಹಳ್ಳಿಗರ ಮೇಲೆ ನಾಲ್ಕು ಐದು ಹಂತಗಳಲ್ಲಿ ತೆರಿಗೆ ಹಾಕಬೇಕೆಂಬುದು ನಮ್ಮ ಉದ್ದೇಶ ಅಲ್ಲ. ಹಳ್ಳಿಗಳು ಕೊಡತಕ್ಕ ತೆರಿಗೆ ಏನಿದೆ, ರಾಜ್ಯದ ಬೊಕ್ಕಸದಿಂದ ಪಡೆಯುವ ಅಧಿಕಾರವನ್ನು ಕೊಟ್ಟಿದ್ದೇವೆ. ತೆರಿಗೆ ಹಾಕುವ ಅಧಿಕಾರ ಕೊಟ್ಟಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಯಾರು ಹೇಳಿದ್ದಾರೆ, ಸಂಪನ್ಮೂಲ ಗಳನ್ನು ಒದಗಿಸುವುದಕ್ಕೆ ನಮ್ಮ ಅಡ್ಡಿ ಇಲ್ಲ. ತಾವು ಉದ್ದಕ್ಕೆ ನಾವು ಮಾತನಾಡುವುದಕ್ಕೆ ಹೋಗುತ್ತೀರಿ. ಇನ್ನೊಬ್ಬರ ಮಾತನ್ನು ಅರ್ಥ ಮಾಡಿಕೊಳ್ಳುವುದಿಲ್ಲ, ಅದೇ ಕಷ್ಟವಾಗುತ್ತತೆ. ಬಾಕಿಯವರದ್ದು ಏನೂ ತಾವು ಕೇಳುವುದಿಲ್ಲ.

ಶ್ರೀ ಅಬ್ದುಲ್‌ನಜೀರ್ ಸಾಬ್.—ತಾವು ಹೇಳಿದುದನ್ನು ನಾನು ಬರೆದುಕೊಂಡಿದ್ದೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ನಾನು ಏನು ಹೇಳಿದ್ದೇನೆ ಎಂಬುದನ್ನು ಕೇಳಿ.

ಶ್ರೀ ಕೆ. ಹೆಚ್. ರಂಗನಾಥ.—ಅವರದ್ದು ಸೌತ್ ಕೆನರಾ ಕನ್ನಡ, ಸ್ವಲ್ಪ ವ್ಯತ್ಯಾಸ ಆಗುತ್ತದೆ, ನಿಮ್ಮದೂ ಪಾಟೀಲರದ್ದೂ ಕನ್ನಡ ಹೋಲಿಕೆ ಆಗುತ್ತದೆ.

ಶ್ರೀ ಎಂ ವೀರಪ್ಪಮೊಯ್ಲಿ.—ಉದ್ದಕ್ಕೆ ಹೇಳಿಕೊಂಡು ಹೋಗಿಬಿಟ್ಟರೆ ಎಷ್ಟು ತೊಂದರೆ ಬರುತ್ತದೆ. Substentive Taxation measures ಏನು State Government enjoy ಮಾಡುತ್ತಿದೆ. ಅದನ್ನು ಈ ಸಂಸ್ಥೆಗಳಿಗೆ ಕೊಡಿ ಎಂದು ಹೇಳಿದ್ದೇನೆ. ಅದನ್ನು ಟ್ಯಾಕ್ಸೇಷನ್ ರಿವ್ಯೂ ಕಮಿಟಿಯಲ್ಲೂ ಹೇಳಿ ದೇನೆ. ಹೊಸ ತೆರಿಗೆ ಮಾಡಬೇಕೆಂದು ಹೇಳಲಿಲ್ಲ.—ಸ್ಪಷ್ಟವಾದ ಭಾಷೆಯಲ್ಲಿ ಹೇಳಿದ್ದೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಇವಕ್ಕೆ ಸಂಪನ್ಮೂಲಗಳು ಇಲ್ಲ ಎನ್ನುವ ಅಭಿಪ್ರಾಯ ಇಲ್ಲ. ತಾವು ಕೆಲವೊಂದು ಕಲಮ್‌ಗಳನ್ನು ನೋಡಿದರೆ ಅರ್ಥವಾಗುತ್ತದೆ. ಈ ಒಂದು ನಿತ್ಯ ಆಯೋಗ ಸೃಷ್ಟಿ ಮಾಡಿರತಕ್ಕದ್ದು ಆ ಉದ್ದೇಶಕ್ಕಾಗಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಎಷ್ಟು ಪರ್‌ಸೆಂಟೇಜ್ ಈಗ ರಿಸೋರ್ಸಸ್, ಸ್ಟೇಟ್ ಗವರ್ನ್‌ಮೆಂಟ್ ನಿಂದ ಡಿವಾಲ್ವ್ ಆಗುತ್ತದೆ. ಅವರು ಕಲೆಕ್ಟ್ ಮಾಡಿದ್ದು, ಎಷ್ಟು ಪರಸೆಂಟ್ ಎಂದು ಹೇಳಿ ? ಸಂಪನ್ಮೂಲ ಎಷ್ಟು ಎಂದು ಹೇಳಿ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಕೂಸು ಹುಟ್ಟುವುದಕ್ಕೆ ಮುಂಚೆ ಕುಲಾವಿ ಹೊಲಿಸಿದರು ಎಂದು ನಮ್ಮಲ್ಲಿ ಹೇಳುತ್ತಾರೆ. ಆ ಜಿಲ್ಲೆಯಲ್ಲಿ ಅಭಿವೃದ್ಧಿ ಯೋಜನೆಗಳು ಯಾವುದು ಯಾವುದು ಮಾಡಿರುತ್ತೇವೆ, ಆ ಅಭಿವೃದ್ಧಿ ಯೋಜನೆಗಳಲ್ಲಿ ಬರತಕ್ಕ ಹಣ ಎಲ್ಲಾ ಆ ಜಿಲ್ಲೆಗೆ ಹೋಗಬೇಕು ಎನ್ನುವುದು ಮೊದಲನೆಯದು. ಈ ಕಾನೂನಿನಲ್ಲಿ ಇದನ್ನು ಹೇಳಿದ್ದೇವೆ. ಇನ್ನು ಎರಡನೆಯ ಹಂತದಲ್ಲಿ ಏನು ಮಾಡಿದ್ದೇವೆ ಎಂದರೆ ನಿತ್ಯ ಆಯೋಗವನ್ನು ನಿರ್ಮಾಣ ಮಾಡತಕ್ಕದ್ದು ಇನ್ನು ಯಾವ ಯಾವ ಮೂಲಗಳಿಂದ ರಾಜ್ಯದ ಬೊಕ್ಕಸಕ್ಕೆ ಹೋಗುತ್ತಿದೆ, ಅವರು ಎಷ್ಟೆಷ್ಟು ಕೊಡಬೇಕು ಎನ್ನುವುದನ್ನು ನಿರ್ಧಾರ ಮಾಡತಕ್ಕದ್ದು, ವಿತ್ತೀಯ ಆಯೋಗ ಇದೆ. ಮೊದಲು ಇದು ಕಾನೂನು ಆಗಿ ಜಾರಿಗೆ ಬಂದಮೇಲೆ ವಿತ್ತೀಯ ಆಯೋಗ ತಿರ್ಮಾನ ಮಾಡತಕ್ಕ ಅಧಿಕಾರವನ್ನು ಅಲ್ಲಿ ಕೊಟ್ಟಿದ್ದೇವೆ. ಇದನ್ನು ತಾವು ಓದಬೇಕು. ಅದಕ್ಕೆ ಟ್ಯಾಕ್ಸ್ ಹಾಕತಕ್ಕ ಅಧಿಕಾರವನ್ನು ಕೊಟ್ಟಿಲ್ಲ ಎಂದು ಹೇಳಿದರೆ, ಆ ಟ್ಯಾಕ್ಸ್ ಹಾಕತಕ್ಕ ಅಧಿಕಾರವನ್ನು ಕೆಳಮಟ್ಟದಲ್ಲಿ ಕೊಟ್ಟಿದ್ದೇವೆ. ಕೆಳ ಹಂತದಲ್ಲಿ ಮಂಡಲ್‌ಮಟ್ಟದಲ್ಲಿ ಟ್ಯಾಕ್ಸ್ ಹಾಕುವ ಅಧಿಕಾರ ಕೊಟ್ಟಿದ್ದೇವೆ. ಮಂಡಲ್ ಮಟ್ಟದಲ್ಲಿ ಗ್ರಾಮದಲ್ಲಿರತಕ್ಕ ಸಣ್ಣಪುಟ್ಟ ಮನೆ ಕಂದಾಯ ಇನ್ನು ಕೆಲವು ಕೊಟ್ಟಿದ್ದೇವೆ. ಜೊತೆಗೆ ಈ ಸದನದ ಈ ಮನೆಯ ಸದಸ್ಯರು ಒಂದು ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಈ ತಾಲ್ಲೂಕು ಬೋರ್ಡ್ ನವರು ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಇದರಲ್ಲಿ ಒಂದು ಸೆಸ್ ಹಾಕುತ್ತಿದ್ದರು ಆ ಸೆಸ್ ಅಧಿಕಾರವನ್ನು ಕೊಡಬೇಕೆಂದು ಏನು ಹೇಳುತ್ತಿದ್ದಾರೆ ಅದನ್ನು ಒಪ್ಪಲಿಕ್ಕೆ ನಾನು ಸಿದ್ಧನಾಗಿದ್ದೇನೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ ಇವು ಪಟ್ಟಭದ್ರ ಹಿತಗಳ ಸಾಧನವಾಗಬಹುದು, ಎಂದರೆ ಹೌದು, ಪಟ್ಟಭದ್ರ ಹಿತಗಳು ಆಗಲಿಕ್ಕೆ ಸಾಧ್ಯ. ಆದರೆ, ಜನತಂತ್ರದಲ್ಲಿ ಪಟ್ಟಭದ್ರಹಿತಗಳನ್ನು ಕಿತ್ತುಹಾಕತಕ್ಕಂತಹ ಸಾಧನ ಯಾರಿಗೆ ಹೋಗಬೇಕು ? ಅದು ಜನತೆಗೆ ಹೋಗಬೇಕು, ಇದು ಜನತೆಯೇ ಆಗಬೇಕು. ಆ ಪ್ರಕ್ರಿಯೆ ನಡೆಯಬೇಕು. ರಾಜಕೀಯವಾದರೂ ಆಗಲಿ, ಸಾಮಾಜಿಕವಾದರೂ ಆಗಲಿ, ಯಾವುದೇ ಒಂದು ಪ್ರಕ್ರಿಯೇ ನಡೆಯಬೇಕು. ಆ ಉದ್ದೇಶದಿಂದ ಚಿಂತನೆ ಮಾಡಿ ನೋಡಬೇಕು. ಒಂದು ಜನತಂತ್ರ ವ್ಯವಸ್ಥೆಯನ್ನು ನಾವು ಒಪ್ಪಿದಾಗ ಅಲ್ಲಿ ಪಟ್ಟಭದ್ರಹಿತಗಳು ಇರಬಹುದು. ನಾನು ಪಶ್ಚಿಮ ಬಂಗಾಳದ ಒಂದು ಅಧ್ಯಯನ ಮಾಡಿದೆ. ಪಶ್ಚಿಮ ಬಂಗಾಳದ ಅಧ್ಯಯನ ಮಾಡುವುದಕ್ಕೆ ಬದಲಾಗಿ, ಮಾನ್ಯ ಸದಸ್ಯರು ಇದ್ದಾರೆ, ಅವರು ಓದುವುದಾಗಿದ್ದರೆ, ಆ ಪುಸ್ತಕದ ಹೆಸರನ್ನು ನಾನು ಹೇಳುತ್ತೇನೆ. ಅದು ಕೋಲಿ ಎಂದು ಹೇಳಿ, ಒಬ್ಬರು ಪ್ರಸಿದ್ಧ ವಿದ್ವಾಂಸರು ಒಂದು ಅಧ್ಯಯನವನ್ನು ಮಾಡಿದ್ದಾರೆ. ಆ್ಯಂಟಿ, ಕೋ ಆ್ಯಂಟಿ ಪ್ರೋಗ್ರಾಮ್ ಇನ್ ಅನ್ ಇಂಡಿಯನ್ ಸ್ಟೇಟ್ ಎಂದು ಹೇಳಿದ್ದಾರೆ. ಅವರು ಮೆಚಿಗನ್ ಯೂನಿವರ್ಸಿಟಿಯವರು. ಯಾವ ದೃಷ್ಟಿಯಿಂದ ಕಮ್ಯುನಿಸ್ಟ್ ಸಿದ್ಧಾಂತವನ್ನು ಹೇಳಿದುದಲ್ಲ, ಅವರು ಯಾರಿಗೂ ಬಯಾಸ್ ಆದ್ಯವರು ಅಲ್ಲ. ಅವರು ಮಾಡಿರತಕ್ಕ ಸಿದ್ಧಾಂತದಲ್ಲಿ ಹೇಳಿದ್ದಾರೆ. ಮೊದಲನೆಯ ಹಂತದಲ್ಲಿ ಐವತ್ತರಷ್ಟು ದಲಿತವರ್ಗದವರು ಚುನಾಯಿತರಾಗಿ ಬಂದಿದ್ದರೆ, ಪಶ್ಚಿಮಬಂಗಾಳದಲ್ಲಿ, ಎರಡನೆಯ ಹಂತದಲ್ಲಿ ದಲಿತ ವರ್ಗ ಈ ಸಂಘಸಂಸ್ಥೆಗಳ ಮೇಲೆ ತಮ್ಮ ಆಧಿಪತ್ಯವನ್ನು ನಿರ್ಮಾಣ ಮಾಡಿಕೊಂಡಿದ್ದಾರೆ ಎನ್ನುವ ಅಭಿಪ್ರಾಯವನ್ನು ಹೇಳಿದ್ದಾರೆ. ಅದೇ ಅಭಿಪ್ರಾಯ ಇವೊತ್ತು ಗುಜರಾತ್‌ನಲ್ಲಿ ಇದೆ, ಮಹಾರಾಷ್ಟ್ರದಲ್ಲಿ ಇದೆ, ಹಾಗಾದರೆ ಗುಜರಾತ್ ಮಹಾರಾಷ್ಟ್ರದಲ್ಲಿ ಪಟ್ಟಭದ್ರಹಿತಗಳು ಇಲ್ಲವೇನು ?

ಶ್ರೀ ವೈ. ರಾಮಕೃಷ್ಣ .—ಅಲ್ಲಿ ವರ್ಗ ಸಂಘರ್ಷವಾಗುತ್ತಿದೆ. ಆ ಒಂದು ಸ್ಟೇಟ್ ಬಿಟ್ಟರೆ, ಬೇರೆ ವರ್ಗಸಂಘರ್ಷ ಇಲ್ಲ, ವರ್ಗ ಸಂಘರ್ಷ ಆಗುತ್ತಿಲ್ಲ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಅಧ್ಯಕ್ಷರೆ, ನಾನು ಜ್ಯೋತಿ ಬಾಬು ಅವರನ್ನು ತಾವು ಕಮುನಿಸ್ಟ್ ಕ್ರಾಂತಿಯನ್ನು ಈ ದೇಶದಲ್ಲಿ, ರಾಜ್ಯದಲ್ಲಿ ಮಾಡುತ್ತಿದ್ದೀರಾ ಎಂದು ಕೇಳಿದಾಗ ಅವರು ಏನು ಹೇಳಿದರು ಗೊತ್ತೇನು, ಇವೊತ್ತು ಇರತಕ್ಕಂತಹ ರಾಜ್ಯಾಂಗದಲ್ಲಿ ಆಸ್ತಿ, ಹಕ್ಕುಗಳ್ಳು, ಈ ಸಮಾಜದಲ್ಲಿ ನಾನು ಕಮ್ಯುನಿಸ್ಟ್ ಕ್ರಾಂತಿ ಏನೂ ಮಾಡುತ್ತಿಲ್ಲ, ಪ್ರಾಮಾಣಿಕವಾಗಿ ಚೌಕಟ್ಟಿನಲ್ಲಿ ಏನು ಮಾಡಿದರೂ ಜನಕ್ಕೆ ಅನುಗುಣವಾಗಿ ಮಾಡುತ್ತಿದ್ದೇವೆಂದು ಅವರು ಹೇಳಿದರು. ಅಲ್ಲಿ ವರ್ಗ ಸಂಘರ್ಷವೂ ಇಲ್ಲ ಏನೂ ಆಗುತ್ತಿಲ್ಲ.

ಶ್ರೀ ಎಂ. ಸೂರ್ಯನಾರಾಯಣರಾವ್.—ವರ್ಗ ಸಂಘಟನೆಗಳಿಗೆ ಬನ್ನಿ.

ಶ್ರೀ ವೈ. ರಾಮಕೃಷ್ಣ.—ಇಂಡಿಯಾದೇಶದಲ್ಲಿ ಆಗಿರತಕ್ಕ ಅಟ್ರಾಸಿಟೀಸ್‌ನಲ್ಲಿ ಲಾಸ್ಟ್ ಪ್ಲೇಸ್ ಕೊಟ್ಟಿರತಕ್ಕದ್ದು ವೆಸ್ಟ್ ಬೆಂಗಾಲ್. ತಾವು ಲಾಸ್ಟ್ ರಿಪೋರ್ಟ್ ಕೊಟ್ಟಿರುವುದನ್ನು ಓದಿ ತಿಳಿದು ಕೊಂಡು ಹೇಳಿ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಸಂಘರ್ಷಣೆಯಾಗಿಲ್ಲ. ವರ್ಗ ಸಂಘರ್ಷಣೆ ಪ್ರಾರಂಭವಾಗಿದೆ ಎಂದರೆ ಆಗಿರಬಹುದು. ಆದರೆ ವರ್ಗ ಪ್ರಭುತ್ವಾಸತ್ತೆ ಇದೆ ಎಂದು ನಾವು ಹೇಳುವುದಿಲ್ಲ, ಅದು ಇಡೀ ದೇಶಕ್ಕೆ ಅನುಗುಣವಾಗಿ ವರ್ಗ ಸಂಘಟನೆಯಾಗಬಹುದು. ಅದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ, ಅದನ್ನು ಮಾಡಬಾರದು ಎಂದು ಹೇಳುವುದಿಲ್ಲ, ಮಾಡುವ ಕಡೆ ಮಾಡಿದ್ದಾರೆ. ಆದರೆ ಅದೇ ಗುಜರಾತ್ ಬಗ್ಗೆ ಏನು ಹೇಳುತ್ತೀರಿ ? ಮಹಾರಾಷ್ಟ್ರದ ಬಗ್ಗೆ ಏನು ಹೇಳುತ್ತೀರಿ ? ಬಿಹಾರ್ ಬಗ್ಗೆ ಏನು ಹೇಳುತ್ತೀರಿ ? ಅಲ್ಲಿ ವರ್ಗ ಸಂಘರ್ಷಣೆ ನಡೆಯುತ್ತಿದೆ ಏನು ? ಗುಜರಾತ್ ಬಗ್ಗೆ ಏನು ಹೇಳುತ್ತೀರಿ ? ರಾಜಸ್ಥಾನದ ಬಗ್ಗೆ ಏನು ಹೇಳುತ್ತೀರಿ ? ಹಾಗೆ ನೋಡಲಿಕ್ಕೆ ಹೋದರೆ ಬಡತನದ ವಿರೋಧ ಎನ್. ಆರ್. ಇ. ಪಿ. ಮತ್ತು ಐ. ಆರ್. ಡಿ. ಸಿ, ಪ್ರೋಗ್ರಾಮ್‌ಗಳು ಇವೆಯೆ ? ಇವೊತ್ತು ಅವೆಲ್ಲಾ ಬಹಳ ಮಟ್ಟಿಗೆ ಜನತಂತ್ರ ವ್ಯವಸ್ಥೆ ಮಾಡತಕ್ಕ ರಾಜ್ಯ, ರಾಜಸ್ಥಾನ, ಗುಜರಾತ್ ನಲ್ಲಿ ಇವೆ. ಒಂದು ದೃಷ್ಟಿಯಿಂದ ಇವು ಪ್ರಾಬಲ್ಯಶೀಲ ಶಕ್ತಿಗಳು, ಇಲ್ಲ ಎಂದು ಹೇಳುವುದಿಲ್ಲ. ಮಾನ್ಯ ಮೊಯಿಲಿಯವರು ಒಂದು ಮಾತನ್ನು ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಅವರಿಗೆ ಹೇಳಬೇಕೆಂದರೆ, ದೇವರಾಜ್ ಅರಸ್ ಅವರು ಒಂದು ರಾಜಕೀಯ ಚೈತನ್ಯವನ್ನು, ಒಂದು ಸಾಮಾಜಿಕ ಪ್ರಜ್ಞೆಯನ್ನು ಹಿಂದುಳಿದ ದಲಿತ ಜನಾಂಗಕ್ಕೆ ತಂದುಕೊಟ್ಟರು ಇದು ಒಂದು ಐತಿಹಾಸಿಕ ಸತ್ಯ. ಆ ಒಂದು ಶಕ್ತಿ ಕರ್ನಾಟಕದಲ್ಲಿ ಕ್ರೋಢೀಕರಣವಾಗಿ ಮುಂದುವರಿಯುತ್ತಿದೆ. ಅದನ್ನು ಬದಲಿಸಲು ನಮ್ಮಿಂದಾಗಲಿ, ನಿಮ್ಮಿಂದಾಗಲಿ ಪ್ರಯತ್ನ ಮಾಡಿದರೆ ಈ ರಾಜ್ಯದಲ್ಲಿ ಅದು ಸಾಧ್ಯವಾಗುವುದಿಲ್ಲ. ಮಾನ್ಯ ಶಿವಮೂರ್ತಿಯವರು ಮಾತನಾಡುತ್ತಾ, ಮಾನ್ಯ ದೇವರಾಜ್ ಅರಸ್ ಅವರು ಇದ್ದಿದ್ದರೆ ಇದನ್ನು ವಿರೋಧ ಮಾಡುತ್ತಿದ್ದರು ಎಂದು ಹೇಳಿದರು. ನಾನು ಹೇಳುತ್ತೇನೆ, ಅವರು ಇದ್ದಿದ್ದರೆ ಸಂಪೂರ್ಣವಾಗಿ ಇದನ್ನು ಸ್ವಾಗತ ಮಾಡುತ್ತಿದ್ದರು. ದೇವರಾಜ್ ಅರಸ್ ಅವರ ವ್ಯಕ್ತಿತ್ವ ನಿಂತ ನೀರಲ್ಲ, ಹರಿಯುವ ನೀರು. 1962ರಲ್ಲಿ ಕರ್ನಾಟಕ ರಾಜ್ಯ ಆಗಬಾರದೆಂದು ವ್ಯಕ್ತಪಡಿಸಿದರೂ, ಅನಂತರ ಅವರೇ ಕರ್ನಾಟಕ ಆಗಬೇಕೆಂದು ಈ ಸಭೆಯಲ್ಲಿ ನಿರ್ಣಯವನ್ನು ತಂದರು. 1962ರಲ್ಲಿ ಭೂ ಸುಧಾರಣೆಯ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಇವೊತ್ತು ದಾಖಲೆಗಳನ್ನು ತೆಗೆದು ನೋಡಿ. ಅದೇ ವ್ಯಕ್ತಿ, 1974ರಲ್ಲಿ ಒಂದು ಪ್ರಗತಿಪರವಾದ ಭೂ ಕಾಯಿದೆಯನ್ನು ಈ ಶಾಸನ ಸಭೆಯ ಮುಖಾಂತರ ಮಾಡಿಸಿದ್ದಾರೆ. ಈ ದೃಷ್ಟಿಯಿಂದ ಅವರು ವಿರೋಧ, ಮಾಡುತ್ತಿದ್ದರು ಎನ್ನುವ ಮಾತು ಸಾಧುವಲ್ಲ. ಇನ್ನು ಈ ಒಂದು ನ್ಯಾಯ ಪಂಚಾಯಿತಿಯ ಬಗ್ಗೆಯೂ ಅನೇಕರಲ್ಲಿ ಕಳವಳವಿರುವುದರಿಂದ, ಇಲ್ಲಿ ಒಂದು ತಿದ್ದುಪಡಿ ನನ್ನ ಮುಂದೆ ಇದೆ. ಆ ತಿದ್ದುಪಡಿ ಪ್ರಕಾರ ಎರಡು ವರ್ಷದವರೆಗೆ ನ್ಯಾಯ ಪಂಚಾಯಿತಿ ಜಾರಿ ಆಗಕೂಡದು ಎಂದು ಒಂದು ಕಲವನ್ನು ಕೊಟ್ಟಿದ್ದಾರೆ. ನಾನು ಸಭೆಯ ಅಭಿಪ್ರಾಯವನ್ನು ಪಡೆದು ಯಾವುದೇ ಒಂದು ದೃಷ್ಟಿಯಿಂದ, ತಾತ್ವಿಕವಾಗಿಯಾಗಲಿ ಇನ್ನೊಂದೇ ಆಗಲಿ, ವಿಚಾರ ಮಾಡಿದರೆ ಅಷ್ಟು ಸಮಂಜಸವಾದುದು ಅಲ್ಲ. ಆದರೂ ಕೂಡ ಬಹು ಭಾಗ, ಅದು ದಲಿತ ಜನಾಂಗದ ಮಿತ್ರರಲ್ಲಿ ಒಂದು ಸಂಶಯವಿರುವುದರಿಂದ, ಎರಡು ವರ್ಷಗಳ ಕಾಲ ಜಾರಿ ಆಗಬಾರದು ಎಂದು ಏನು ತಿದ್ದುಪಡಿ ಇದೆ, ಅದನ್ನು ಒಪ್ಪಿಕೊಳ್ಳಲಿಕ್ಕೆ ಸಿದ್ಧನಿದ್ದೇನೆ ಎಂದು ಈ ಸಭೆಯಲ್ಲಿ ತಿಳಿಸಲಿಕ್ಕೆ ಬಯಸುತ್ತೇನೆ. ಜನತಾಂತ್ರಿಕವಾದ ಮಸೂದೆಯಲ್ಲಿ, ಜನರಿಗೆ ಅಧಿಕಾರವನ್ನು ಕೊಟ್ಟು, ಮಾಡತಕ್ಕ, ಒಂದು ಆರ್ಥಿಕ ಮತ್ತು ಸಾಮಾಜಿಕ ರಚನೆ ಏನಿದೆ ಅದರಲ್ಲಿ ನಡೆಯತಕ್ಕ ಬಡವರ ಪರವಾದ ಕಾರ್ಯಕ್ರಮಗಳನ್ನು ಈ ಸಂಸ್ಥೆಗಳ ಮುಖಾಂತರ ನಡೆಸಬೇಕು. ಪೂರ್ಣವಾಗಿ ನೌಕರಶಾಹಿ ಅಲ್ಲ, ಜನ ಇರಬೇಕು ಎನ್ನತಕ್ಕದ್ದು ನಮ್ಮ ವಾದ. ಆದರೆ, ಅದರ ಬಗ್ಗೆ ವಿತ್ತಂಡ ವಾದಕ್ಕೆ ಹೋದರೆ ಬಹಳ ಕಷ್ಟವಾಗುತ್ತದೆ. ಡಾಕ್ಟರುಗಳ ಮೇಲೆ ನಿಮ್ಮ ಅಧಿಕಾರ ಏನು ಎಂದು ಒಬ್ಬರು ಕೇಳಿದರು ? ಅಧಿಕಾರ ಏನು ಎಂದರೆ, ಅವನು ಆಸ್ಪತ್ರೆಗೆ ಸರಿಯಾಗಿ ಬರಬೇಕು, ಎಲ್ಲರಿಗೂ ಔಷಧಿ ಕೊಡಬೇಕು. ಲಂಚವನ್ನು ಸ್ವೀಕಾರ ಮಾಡಬಾರದು. ಇದರ ಬಗ್ಗೆ ಚುನಾಯಿತ ಜನತಂತ್ರ ಇರತಕ್ಕದ್ದು ಸಹಜ. ಅದಕ್ಕೆ ಬದಲಾಗಿ ಪ್ಲೇಗು ಇದ್ದ ಸಂದರ್ಭದಲ್ಲಿ ಕಾಲರ ಔಷಧಿ ಕೊಡುವಂತೆ ಹೇಳುವುದು ಜನತಂತ್ರ ವ್ಯವಸ್ಥೆ ಅಲ್ಲ. ರೋಗ ಯಾವುದು ಎಂದು ಕಂಡುಹಿಡಿಯುವುದು ಅವನದು. ಅದನ್ನು ಬಿಟ್ಟು ಇಂತಾದ್ದೆ ಔಷಧಿ ಕೊಡಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ಇವೊತ್ತು ನೀವು ಕಮ್ಯುನಿಸ್ಟ್ ಸಾಮಾಜವನ್ನು ನಿರ್ಮಾಣ ಮಾಡಿ, ಸಮಾಜವಾದ ಸಮಾಜವನ್ನು ನಿರ್ಮಾಣ ಮಾಡಿ, ಅಧಿಕಾರಶಾಹಿಗಳು ಆಡಳಿತದ ಒಂದು ಅಂಗ. ಅವರಿಗೆ ಒಂದು ಜವಾಬ್ದಾರಿ ಇರುತ್ತದೆ. ಆದರೆ ಆ ಜವಾಬ್ದಾರಿ ಚುನಾಯಿತ ಜನತಂತ್ರ ವ್ಯಕ್ತಿಗಳ ಒಂದು ಅಂಕುಶಕ್ಕೆ ಒಳಪಡಬೇಕು ಎನ್ನ

ತಕ್ಕದ್ದು ಜನತಂತ್ರದ ಒಂದು ವ್ಯವಸ್ಥೆ. ಆ ರೀತಿ ಆದಮೇಲೆ ಅಧಿಕಾರಿಗಳಿಗೆ ಕಿತ್ತು ಹಾಕಬೇಕೆಂದು ಅಲ್ಲ. ಮತ್ತೆ ಕೆಲವರು ಸಂಶಯವನ್ನು ವ್ಯಕ್ತಪಡಿಸಿದರು ಅಂಥಾದೇನು ನನಗೆ ಕಾಣಲಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಾ ನೀವು ಸಿವಿಲ್ ಕೋರ್ಟುಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟಿದ್ದೀರಿ ಎಂದು ಹೇಳಿದರು. ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ ಹಿಂದಿನ ಎಲ್ಲಾ ಆಕ್ಟ್‌ಗಳಲ್ಲಿ ಚುನಾವಣೆಗಳಿಗೆ ಸಂಬಂಧಪಟ್ಟಂತೆ ತಕರಾರು ಹಾಕತಕ್ಕ ಅರ್ಜಿಗಳು ಏನಿವೆ. ಆ ಶಾಸನಗಳಲ್ಲಿ ಏನಿದೆ, ಅದೇ ಇಲ್ಲಿ ಇರತಕ್ಕದ್ದು, ಇಲ್ಲಿಯೂ ಸಹ ತಕರಾರು ಹಾಕತಕ್ಕ ಪರಿಮಿತಿಯನ್ನು ಒಳಪಡಿಸಿಕೊಂಡಿದ್ದೇವೆ. ಇನ್ನು ಮಾನ್ಯ ಸದಸ್ಯರಾದ ರಂಗನಾಥ್ ಅವರು ಒಂದು ಅಭಿಪ್ರಾಯವನ್ನು ವಕ್ತಪಡಿಸಿದರು. ಚುನಾಯಿತ ಮಂಡಲ್ ಪಂಚಾಯಿತಿಗಳನ್ನು ರದ್ದು ಮಾಡತಕ್ಕಂಥ ಅಧಿಕಾರವನ್ನು ಜಿಲ್ಲಾಪರಿಷತ್ತಿಗೆ ಕೊಟ್ಟು, ಅದು ರಾಜಕೀಯವಾಗಿ ಏನಾದರೂ ಉಪಯೋಗಿಸಿಕೊಂಡರೆ ತೊಂದರೆಯಾಗುತ್ತದೆ ಎನ್ನುವ ಸಂಶಯವನ್ನು ವ್ಯಕ್ತ ಮಾಡಿದರು. ನಾನು ಅವರಿಗೆ ಒಂದು ಉದಾಹರಣೆಯನ್ನು ಕೊಡಬಯಸುತ್ತೇನೆ. ದೇಶದಲ್ಲಿ ಇಂತಹ ಕಾನೂನುಗಳು ಯಾವುದೇ ರಾಜ್ಯದ ಶಾಸನದಲ್ಲಿ, ಕೆಲವು ಸೀಮಿತ ಉದ್ದೇಶಗಳಿಗಾಗಿ ಒಂದು ಅಂಕುಶವನ್ನು ಇಡಬೇಕಾಗುತ್ತದೆ. ಆ ಒಂದು ಅಂಕುಶ ಅಧಿಕಾರದಲ್ಲಿ ಹೆಚ್ಚು ಪ್ರಯೋಗ ಆಗದಂತೆ ನೋಡಿಕೊಳ್ಳುವುದು, ಭದ್ರತೆ ಮಾಡುವುದು ಇದ್ದರೆ ನಾನು ಪರಿಶೀಲನೆ ಮಾಡುತ್ತೇನೆ. ನಾನು ತಮಗೆ ಈ ಸಂದರ್ಭದಲ್ಲಿ ಪಶ್ಚಿಮ ಬಂಗಾಳದ ಉದಾಹರಣೆಯನ್ನು ಕೊಡಬಯಸುತ್ತೇನೆ. ಅಲ್ಲಿ 6 ಸಾವಿರ ಚಿಲ್ಲರೆ ಪಂಚಾಯಿತಿಗಳಲ್ಲಿ ಇದುವರೆಗೆ ದುರುಪಯೋಗವಾಗಿ ಸೂಪರ್‌ಸೀಡ್ ಆಗಿರತಕ್ಕದ್ದು ಕೇವಲ 200 ಮಾತ್ರ. ಹಾಗೆ ಕರ್ನಾಟಕದಲ್ಲಿ ಇದ್ದ ಪಂಚಾಯತಿಗಳಲ್ಲಿ ತಾವು ಲೆಕ್ಕ ತೆಗೆದುಕೊಂಡರೆ ಶೇಕಡ ಒಂದರಷ್ಟು ಅಧಿಕಾರ ಇದ್ದರೂ ಅದು ಸೂಪರ್‌ಸೀಡ್ ಆಗಿರಲಿಲ್ಲ. ಅಂತಹ ಒಂದು ಮಟ್ಟಕ್ಕೆ ಹೋಗುವುದಿಲ್ಲ ಎನ್ನುವ ಭರವಸೆಯನ್ನು ಈ ಸದನದಲ್ಲಿ ಕೊಟ್ಟು, ಈ ಸದನ ಈ ಒಂದು ಮಸೂದೆಯನ್ನು ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ. ಈ ಸದನದಲ್ಲಿ ಮಸೂದೆಯ ಮೇಲೆ ಇಡೀ ದೇಶದ ಬಗ್ಗೆ ಇಡೀ ಸಮಾಜದ ವ್ಯವಸ್ಥೆಯ ಬಗ್ಗೆ, ರಾಜಕೀಯ ವ್ಯವಸ್ಥೆಯ ಬಗ್ಗೆ, ಆರ್ಥಿಕ ವ್ಯವಸ್ಥೆಯ ಬಗ್ಗೆ, ತಮ್ಮ ವಿಚಾರಧಾರೆಯನ್ನು ವ್ಯಕ್ತಪಡಿಸಿದ ನನ್ನ ಮಿತ್ರರೆಲ್ಲರಿಗೂ ವಂದಿಸಿ, ಈ ಮಸೂದೆಯನ್ನು, ಮುಕ್ತ ಕಂಠದಿಂದ ಈ ಸಭೆ ಒಪ್ಪಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಪ್ರಾರ್ಥಿಸಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

6-00 p. m.

Mr. Deputy Speaker.—Now, I will put the consieration Motion to the vote of the House. The question is :

"That the Karnataka Zilla Parishads. Taluk Panchayat Samitis, Mandal Panchayats and Nyaya Panchayats Bill, 1983 be taken into consideration."

The Motion was adopted

Mr. Deputy Speaker.—Now, we shall take up clause by clause consideration.

Sri G. P. Vodeyaraj,—Sir, we will take up clause by clause. consideration on Monday.

ಶ್ರೀ ರಾಮಕೃಷ್ಣ ಹೆಗಡೆ.—ಕ್ಲಾಸ್ ಬೈ ಕ್ಲಾಸ್ ಸೋಮವಾರ ತೆಗೆದುಕೊಳ್ಳೋಣ. ಇವೂತ್ತು ಮಾನ್ಯ ವಿರೋಧಪಕ್ಷದ ನಾಯಕರು.........

ಶ್ರೀ ಗೋವಿಂದ ಪಿ. ಒಡೆಯರಾಜ್.—ಎಲ್ಲವನ್ನೂ ಏಕೆ ನಮ್ಮ ವಿರೋಧಪಕ್ಷದಮೇಲೆ ಹಾಕುತ್ತೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ವಿರೋಧಪಕ್ಷದ ನಾಯಕರು ನನಗೆ ಒಂದು ಪತ್ರವನು ಬರೆದು ಕಳುಹಿಸಿಕೊಟ್ಟಿದ್ದಾರೆ. ಅವರ ಅನುಕೂಲಕ್ಕಾಗಿ ನಾವು ಇಷ್ಟಕ್ಕೇ ಇದನ್ನು ನಿಲ್ಲಿಸೋಣ, ಮತ್ತೆ ಸೋಮವಾರ ಬೆಳಿಗ್ಗೆ 9 ಗಂಟೆಗೆ ಮತ್ತೆ ಸೇರೋಣ.

ಉಪಾಧ್ಯಕ್ಷರು.—ಆಗಬಹುದು.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಉಪಾಧ್ಯಕ್ಷರೆ, ಈ ಸಂದರ್ಭದಲ್ಲಿ ಒಂದು ವಿಷಯವನ್ನು ಮಾನ್ಯ ಸಭೆಯ ಗಮನಕ್ಕೆ ತರಬಯಸುತ್ತೇನೆ. ಅದು ಏನೆಂದರೆ ಕೈವಾರದಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹೋಗಿಬರಲು ಶಾಸಕರ ಭವನದಿಂದ 2 ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಏರ್ಪಡಿಸಲಾಗಿದೆ. ಮಾನ್ಯ ಸದಸ್ಯರೆಲ್ಲರೂ ದಯವಿಟ್ಟು ನಾಳೆ ಬೆಳಿಗ್ಗೆ 8 ಗಂಟೆಗೆ ಶಾಸಕರ ಭವನದಿಂದ ಹೊರಡಲಿರುವ ಬಸ್ಸುಗಳಲ್ಲಿ ದಯಮಾಡಿಸಿ ಈ ಅನುಕೂಲವನ್ನು ಉಪಯೋಗಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈ ಕಾರ್ಯಕ್ರಮ ಮುಗಿಯುವವರೆಗೂ ಬಸ್ಸುಗಳು ಅಲ್ಲಿಯೇ ಇದ್ದು ಸದಸ್ಯರನ್ನು ಮತ್ತೆ ವಾಪಸು ಕರೆದುಕೊಂಡು ಬರುತ್ತವೆ.

ಉಪಾಧ್ಯಕ್ಷರು.—ಈಗ ಸಭೆಯನ್ನು ಇಲ್ಲಿಗೆ ಮುಕ್ತಾಯಮಾಡಿ ಮತ್ತೆ 26ನೇ ತಾರೀಖು ಸೋಮವಾರ ಬೆಳಿಗ್ಗೆ 9 ಗಂಟೆಗೆ ಸಭೆಯನ್ನು ಕರೆದಿದ್ದೇನೆ.

(ಸಭೆಯು ಸಂಜೆ 6 ಗಂಟೆ 2 ನಿಮಿಷಗಳಿಗೆ ಮುಕ್ತಾಯವಾಗಿ ತಾ ॥ 26ನೇ ಸೋಮವಾರ ಬೆಳಿಗ್ಗೆ 9 ಗಂಟೆಗೆ ಸೇರಲು ನಿರ್ಧರಿಸಿತು.)

Annexure

THE KARNATAKA SALES TAX (AMENDMENT)

L. A. BILL, No. 25 of 1984.

A Bill further to amend the Karnataka Sales Tax Act, 1957

Whereas it is expedient further to amend the Karnataka Sales Tax Act, 1957 (Karnataka Act 25 of 1957) for the purposes hereinafter appearing ;

Be it enacted by the Karnataka State Legislature in the Thirty-fifth Year of the Republic of India as follows :—

1. **Short title and commencement.**—(1) This Act may be called the Karnataka Sales Tax (Amendment) Act, 1984.

(2) It shall be deemed to have come into force on the first day of April, 1984.

2. **Amendment of section 5.**—In section 5 of the Karnataka Sales Tax Act, 1957 (Karnataka Act 25 of 1957) hereinafter referred to as the Principal Act),--

(1) in the proviso to sub-section (1), the words and brackets "Gur (Jaggery)" shall be omitted :

(2) in sub-section (5),—

(a) in clause (a), for the words "forty thousand rupees" the words "one lakh rupees" shall be substituted :

(b) in clause (b) for the words "specified in the Third Schedule or the Fourth Schedule" the words "other than those specified in the Fifth Schedule" shall be sub stituted.

3. **Amendment of Section 6-C.**—In section 6-C of the principal Act, in sub-section (1), after the first proviso,—

(1) the following proviso shall be and shall be deemed to have been inserted with effect from 1st day of July, 1980 and shall be and deemed to have been omitted with effect from 1st day of January 1983, namely :—